ಮಾನವಿಕ ಕರ್ನಾಟಕ

ಸಂಪುಟ ೧೨ ಸಂಚಿಕೆ ೨

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೨

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ'ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅದನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರ ಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೧೨ ಸಂಚಿಕೆ ೨

೪೬

ಫೆಬ್ರುವರಿ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೨

MANAVIKA KARNATAKA, Kannada quarterly of the University of Mysore. Volume 12, Number 2, February, 1982. Edited by Dr. B. R. Gopal and Dr. C. M. Muniramappa.

All Rights Reserved

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಡಾ. ಬಾ. ರಾ. ಗೋಪಾಲ್

ಡಾ. ಸಿ. ಎಂ. ಮುನಿರಾಮಪ್ಪ

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಮುದ್ರಕರು

ಶ್ರೀಲಕ್ಷ್ಮೀ ಮುದ್ರಣಾಲಯ, ರವೆ ಬೀದಿ, 2 ನೇ ಕ್ರಾಸ್, ಮೈಸೂರು - 1

ವಿಷಯ ಸೂಚಿ

ಈ ಸಂಚಿಕೆಯ ಲೇಖಕರು

೧	ಸಿ. ಸೇತೂಬಾಯಿ	ಎಂ. ಎಚ್. ಬ್ಲಾಕ್, ೬ನೆಯ ಮುಖ್ಯ ರಸ್ತೆ, ಜಯಲಕ್ಷ್ಮೀಪುರಂ, ಮೈಸೂರು-೫೭೦೦೧೨
೨	ಎನ್. ಎಸ್. ಶಾರದಾ ಪ್ರಸಾದ್	ಸಹಾಯಕ ಭಾಷಾಂತರಕಾರರು, ಭಾಷಾಂತರ ಮತ್ತು ಪಠ್ಯಪುಸ್ತಕ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು-೫೭೦೦೦೬
೩	ಡಿ. ಎಲ್. ಪಾಟೀಲ	ಪ್ರಾಧ್ಯಾಪಕ, ತತ್ತ್ವಶಾಸ್ತ್ರ ವಿಭಾಗ, ಮಹಾರಾಜಾ ಕಾಲೇಜು, ಮೈಸೂರು-೫೭೦೦೦೫
೪	ಜಿ. ಎಚ್. ಸುರೇಶ್	ಅಧ್ಯಾಪಕ, ವಾಣಿಜ್ಯ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು-೫೭೦೦೦೯
೫	ವೈ. ಎ. ದೇವಪಾಲ್	ಅಧ್ಯಾಪಕ, ವಾಣಿಜ್ಯ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು-೫೭೦೦೦೬
೬	ಎಂ. ವಿ. ಶ್ರೀನಿವಾಸಗೌಡ	ಅರ್ಥಶಾಸ್ತ್ರ ಸಹಪ್ರಾಧ್ಯಾಪಕ, ಕೃಷಿ ವಿಶ್ವವಿದ್ಯಾಲಯ, ಧಾರವಾಡ ಕೇಂದ್ರ, ಧಾರವಾಡ-೫೮೦೦೦೫
೭	ಬಾ. ರಾ. ಗೋಪಾಲ್	ರೀಡರ್, ದಕ್ಷಿಣ ಭಾರತೀಯ ಅಧ್ಯಯನ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು-೫೭೦೦೦೬
೮	ಸೋಮೇಗೌಡ ಬಿಣಗನಹಳ್ಳಿ	ಮುಖ್ಯಸ್ಥರು, ಸಮಾಜಶಾಸ್ತ್ರ ವಿಭಾಗ, ಎಸ್.ಎ.ಸಿ. ಪ್ರಥಮದರ್ಜೆ ಕಾಲೇಜು, ಚನ್ನರಾಯಪಟ್ಟಣ

ಮೂಲ : ಎಸ್. ಎಸ್. ರಾಘವಾಚಾರ್

ಅನುವಾದ : ಸಿ. ಸೇತೂಬಾಯಿ

ದ್ವೈತ ವೇದಾಂತ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

ಮೋಕ್ಷ ಮತ್ತು ಅದಕ್ಕೆ ಬೇಕಾದ ಸಾಧನೆ

ಇದುವರೆಗೂ ದ್ವೈತದ ಪರತತ್ವ ಸಿದ್ಧಾಂತದ ವಿಭಾಗಗಳನ್ನು ಅಧ್ಯಯನ ಮಾಡಿ ಈ ದರ್ಶನದ ಪ್ರಕಾರ ಯಾವುದು ಪರಮಗತಿ ಅಥವಾ ಆತ್ಮನು ಯಾವ ಪುರುಷಾರ್ಥ ವನ್ನು ಗುರಿಯಾಗಿಟ್ಟುಕೊಂಡು ಪಡೆಯಬೇಕು ಎಂಬ ವಿಷಯದಲ್ಲಿ ನಾವು ಸೂಚನೆ ಗಳನ್ನು ಪಡೆದಿದ್ದೇವೆ. ಈಗ ನಾವು ಈ "ಪುರುಷಾರ್ಥ"ವೆಂಬುದನ್ನು ವಿಶದವಾಗಿ ಪರಿಶೀಲಿಸಬೇಕು. ಇತರ ಎಲ್ಲಾ ಭೌತವಾದ ವ್ಯತಿರಿಕ್ತ ದರ್ಶನಗಳು ಮತ್ತು ಸ್ವಭಾವ ವಾದದ ಅಂಶವಿಲ್ಲದ ಪ್ರಾಚೀನ ಬೌದ್ಧಮತವೂ ಹೇಳಿದಂತೆ ಈ ಸಿದ್ಧಾಂತವೂ ಕರ್ಮ, ಅರ್ಥ, ಲೌಕಿಕ ಕಾಮ್ಯ ಮತ್ತು ಯಜ್ಞ ಯಾಗಾದಿಗಳ ಸಂಬಂಧವಾದ ಧರ್ಮ ಇವು ಗಳನ್ನು ಅಲ್ಪ ಮತ್ತು ಅಸ್ಥಿರ ಪುರುಷಾರ್ಥಗಳೆಂದು ತ್ಯಜಿಸಬೇಕು ಎಂದು ವಾದಿಸುತ್ತದೆ ಮತ್ತು ಮೋಕ್ಷವನ್ನು ಅಂತಿಮ ಆತ್ಮೋದ್ಧಾರಕ ಪುರುಷಾರ್ಥವೆಂದು ಪರಿಗಣಿಸುತ್ತದೆ.

ಇದರ ಸ್ವರೂಪ ನಿರ್ಣಯವು ಅವಶ್ಯಕ. ಎಲ್ಲಾ ದರ್ಶನಗಳೂ ಮೋಕ್ಷವು ಸರ್ವ ಕ್ಲೇಶ ಅನಿಷ್ಟಗಳಿಂದ ಬಿಡುಗಡೆಯನ್ನು ನಿರ್ದೇಶಿಸಬೇಕು ಎಂದು ಒಪ್ಪುತ್ತವೆ. ಈ ಕ್ಲೇಶಗಳ ವರ್ಗೀಕರಣವು ಪ್ರಾಚೀನ ಮತ್ತು ನಿಖರವಾದುದಾದರೂ ಅದಕ್ಕೆ ಹೆಚ್ಚು ಪ್ರವೇಶಿಸಬೇಕಾಗಿಲ್ಲ. ಬಂಧಮೋಚನೆಯ ವಿಷಯದಲ್ಲಿ ಅಭಿಪ್ರಾಯ ಭೇದಗಳಿವೆ. ಪ್ರಾಚೀನ ದರ್ಶನದಲ್ಲಿ ಅವಿಚ್ಛಿನ್ನ ಘನವ್ಯಕ್ತಿತ್ವದ ಭ್ರಾಂತಿಯು ಧ್ವಂಸವಾದರೆ ಮಾತ್ರ ಕ್ಲೇಶಗಳು ತೊಡೆದು ಹೋಗುವುವು ಎಂದು ಹೇಳಲಾಗಿದೆ. ನ್ಯಾಯವೈಶೇಷಿಕರು ಪ್ರಾರಂಭದಲ್ಲಿ ಸಶರೀರತ್ವವು ಹೋದಾಗ ದುಃಖವು ಬಿಟ್ಟುಹೋಗಿ, ಈ ರೀತಿಯಾಗು ವಾಗ ಆತ್ಮನಿಗೆ ಪ್ರಜ್ಞೆಯೂ ನಾಶವಾಗುತ್ತದೆ ಎಂದು ಹೇಳಿದರು. ಹೇಗಾದರೂ ಆಗಲಿ ದುಃಖ ನಿವಾರಣೆಯಾಗುತ್ತದೆ. ಅದ್ವೈತ ವೇದಾಂತದಲ್ಲಿ ಮೋಕ್ಷವೆಂಬುದರಲ್ಲಿ ಆತ್ಮನ ವ್ಯಕ್ತಿತ್ವವು ಶಿಥಿಲವಾಗಿ ತಾನು ಪರಬ್ರಹ್ಮನೊಂದಿಗೆ ಒಂದಾಗಿರುವಿಕೆಯ ಅರಿವು ಸೇರಿದೆ ಎಂದು ಗಣಿಸಲಾಗಿದೆ. ಈ ಮೂರು ಪರಿಗಣನೆಗಳಲ್ಲಿಯೂ ವ್ಯಾವಹಾರಿಕ ವ್ಯಕ್ತಿತ್ವವು

ಪೂರ್ಣನಾಶ ಅಥವಾ ಅದರ ಪ್ರಜ್ಞಾನಾಶ ಅಥವಾ ಅದರ ವೈಶಿಷ್ಟ್ಯವು ಹೋಗುವಿಕೆ ಇವುಗಳ ವಿಷಯದಲ್ಲಿ ಏಕಾಭಿಪ್ರಾಯವಿದೆ. ದ್ವೈತವು ಇವೆಲ್ಲವನ್ನೂ ಖಂಡಿಸಿ ಇದನ್ನು ಶೂನ್ಯವಾದದ ವಿವಿಧ ಪ್ರಕಾರಗಳೆನ್ನುತ್ತದೆ. ಚೇತನಾತ್ಮಕ ಆತ್ಮದ ಉಳಿವು ಎಲ್ಲಾ ಅಪೇಕ್ಷಿತ ಧ್ಯೇಯ ಪ್ರಾಪ್ತಿಯಲ್ಲಿಯೂ ಅವಶ್ಯಕ, ಅದರಲ್ಲಿಯೂ ಮೋಕ್ಷವೆಂಬ ಪರಮ ಗತಿ ಅಥವಾ ಆತ್ಮೋದ್ಧಾರದಲ್ಲಿ ಇರಲೇಬೇಕು ಎಂದು ವಾದಿಸುತ್ತದೆ. ಸಾಂಖ್ಯದಲ್ಲಿ ಆತ್ಮದ ಉಳಿವನ್ನು ಸೇರಿಸಿದ್ದರೂ ಮೋಕ್ಷದಲ್ಲಿ ನಿಷೇಧಾತ್ಮಕವಾಗಿ ತಾಪತ್ರಯಗಳ ಬಿಡುಗಡೆ ಮಾತ್ರವೇ ಇದೆ, ಆನಂದದ ಭಾವಾತ್ಮಕ ಅಂಶವಿಲ್ಲ. ಈ ಘಟ್ಟದಲ್ಲಿ ದ್ವೈತವು ಮೋಕ್ಷದ ಪ್ರತಿಪಾದನೆಗೆ ಕೈಹಾಕಿತು. ಅದರ ಪ್ರಕಾರ ಚೇತನಾತ್ಮಕ ಆತ್ಮವು ಶಾಶ್ವತಾನಂದದ ಅನುಭವದಲ್ಲಿ ಪರಿಪೂರ್ಣತೆಯನ್ನು ಪಡೆಯುವುದೇ ಮೋಕ್ಷವಾಗಿದೆ.

ಈ ನಿಲುವನ್ನು ಜೈನ ಪಂಥದಲ್ಲಿಯೂ ಇತ್ತೀಚಿನ ಕೆಲವು ನ್ಯಾಯ ವೈಶೇಷಿಕ ಸಂಗಡಗಳಲ್ಲಿಯೂ ಕಾಣಬಹುದು. ಆದರೆ ಇದು ಸಮಸ್ಯೆಯ ಕೊನೆಯಲ್ಲ. ಮುಕ್ತ ಜೀವಿಯ ಸ್ಥಿತಿಯಲ್ಲಿ ಒಪ್ಪಿಕೊಂಡಿರುವ ಭಾವಾತ್ಮಕ ಅಂಶಗಳು ಒಂದು ಹೊಸ ಜಿಜ್ಞಾಸೆಯನ್ನು ಪ್ರಚೋದಿಸುತ್ತವೆ. ಆನಂದದಂಶವನ್ನು ಇದರಲ್ಲಿ ಸೇರಿಸುವುದು ಹೇಗೆ? ಶರೀರ ಮತ್ತು ಅದರ ಪರಿಣಾಮಗಳಿಂದ ಬಿಡುಗಡೆಯು ಕ್ಲೇಶವಿಮೋಚನೆಯನ್ನುಂಟು ಮಾಡಬಲ್ಲುದು. ಆನಂದವು ಜೊತೆಗೆ ಸೇರುವುದು ಹೇಗೆ? ಉಪನಿಷತ್ತುಗಳು ಜೀವಾತ್ಮನಲ್ಲಿ ಆನಂದವಿಲ್ಲ, ಪರಮಾತ್ಮ ಅಥವಾ ಬ್ರಹ್ಮನು ಆನಂದಸ್ವರೂಪನು, ಲೌಕಿಕ ಆನಂದಗಳೆಲ್ಲಾ ಆ ಅನಂತ ಚಿಲುಮೆಯಿಂದ ಬೀಳುವ ತುಣುಕು ಹನಿಗಳು ಮಾತ್ರ ಎಂದು ಸಾರಿವೆ. ಇತರ ವೇದಾಂತ ದರ್ಶನಗಳು ಅನಂತ ಮತ್ತು ಶಾಶ್ವತ ಆನಂದವನ್ನು ಬ್ರಹ್ಮನಲ್ಲಿ ಮಾತ್ರವೇ ಕಾಣಬಹುದು ಎಂದು ವಾದಿಸುತ್ತವೆ. ಮೋಕ್ಷದಲ್ಲಿ ಶಾಶ್ವತಾನಂದವು ಸಾಧ್ಯವಾಗಬೇಕಾದರೆ ಜೀವಾತ್ಮನು ಆನಂದದ ಏಕೈಕ ನಿಧಿಯಾದ ಬ್ರಹ್ಮನಲ್ಲಿ ಲೀನವಾಗಬೇಕು ಅಥವಾ ಐಕ್ಯವಾಗಬೇಕು, ಒಂದು ರೀತಿಯಲ್ಲಿ ಈ ಐಕ್ಯವು ಎಂದೆಂದಿಗೂ ತಾತ್ವಿಕ ಸತ್ಯವಾದರೂ ಜೀವಾತ್ಮನು ತನ್ನ ಪ್ರಜ್ಞೆಯಲ್ಲಿ ಮತ್ತು ಬಾಳಿನಲ್ಲಿ ಬ್ರಹ್ಮನೊಂದಿಗೆ ಸಾಮರಸ್ಯ ಪಡೆಯಬೇಕು, ಆಗಿರಬೇಕಾಗಿರುವುದೇನೆಂದರೆ ಪ್ರಜ್ಞೆಯಲ್ಲಿ ಸಂಯೋಗ ಆಗಬೇಕು. ದ್ವೈತಕ್ಕೆ, ಈ ಸಂಯೋಗವು ಜೀವಾತ್ಮನು ವ್ಯಕ್ತಿತ್ವವನ್ನು ಕಳೆದು ಹಾಕಿ ಪರಮಾತ್ಮನಲ್ಲಿ ಲೀನವಾಗುವುದಿಲ್ಲ. ಬ್ರಹ್ಮಾನುಭವದಲ್ಲಿ ತಲ್ಲೀನನಾಗಿ ಆತ್ಮಗಳ ಆತ್ಮನಾದ ಪರಮಾತ್ಮನ ಅವಲಂಬನವನ್ನು ಪೂರ್ಣವಾಗಿ ಅರಿಯುವುದು ಎಂದು ಮಾತ್ರ ಅರ್ಥ. ಆತ್ಮ ನಾಶವಿಲ್ಲದ ಸಂಯೋಗದ ಅನುಭವ, ಆತನ ಇಚ್ಛೆಗೆ ಒಪ್ಪಿಕೊಳ್ಳುವುದು, ಆನಂದಮಯವಾದ ಅಧೀನತೆಯ ಬಾಳು, ಎಂದರ್ಥ; ಪೂರ್ಣ ಶರಣಾಗತಿಯೇ ಮಹೋನ್ನತ ಪದವಿಯ ವಿಜಯೋತ್ಸವದ ಮಹಾನಂದ. ತನ್ನ ನೈಜ ಸ್ವರೂಪದ ಅನಾವರಣವನ್ನು ಭಗವತ್ಸಮ್ಮುಖದಲ್ಲಿ ಮಾಡಿಕೊಳ್ಳುವುದರಲ್ಲಿಯೇ ಆನಂದೋತ್ಕರ್ಷದ ಪರಮಾವಧಿ. ಮೋಕ್ಷದ ಮುಖ್ಯಾಂಶಗಳನ್ನು ಸಂಕ್ಷೇಪವಾಗಿ ಹೇಳುವುದಾದರೆ :

1) ದುಃಖ ಪರಂಪರೆಯ ಪೂರ್ಣ ನಿವೃತ್ತಿ.
2) ಕರ್ಮದಿಂದಾಗುವ ಪ್ರಕೃತಿ ಬಂಧದಿಂದ ಬಿಡುಗಡೆ.
3) ಆತ್ಮನ ನೈಜ ಸ್ವರೂಪದ ಆವಿರ್ಭಾವ, ಆತ್ಮನಾಶವಲ್ಲ.
4) ಆನಂದಮಯ ಭಗವತ್ಸಾನಿಧ್ಯ ಮತ್ತು ಸಾಕ್ಷಾತ್ಕಾರಗಳಿಂದ ಮತ್ತು ಆ ಮೂಲಕ ಆಗುವ ಆತ್ಮನ ಆವಿರ್ಭಾವ.
5) ನ್ಯಾಯ ಬದ್ಧವಾದ ಶರಣಾಗತಿಯಲ್ಲಿ ತನ್ಮಯತೆ.

ಈ ಅಂಗಗಳು ಸಾಧಾರಣವಾಗಿ ಎಲ್ಲಾ ಈಶ್ವರವಾದಗಳ ಮತ್ತು ವೇದಾಂತದ ಭಕ್ತಿ ಪಂಥಗಳಲ್ಲಿ ಪ್ರತಿಪಾದಿಸಲ್ಪಟ್ಟಿವೆ.

ಸ್ವಭಾವ ಸಿದ್ಧ ತಾರತಮ್ಯ ತತ್ವಕ್ಕನುಸಾರವಾಗಿ ದ್ವೈತವು ಮತ್ತೊಂದು ಅಂಗವನ್ನು ನಿರ್ದೇಶಿಸುತ್ತದೆ. ಆತ್ಮಗಳು ಯೋಗ್ಯತೆಯಲ್ಲಿ ಅಸಮಾನವಾಗಿರುವುದರಿಂದ ಮೋಕ್ಷದ ಸಾಧನೆಯ ಸಫಲತೆ ಸಾರ್ಥಕತೆಗಳಲ್ಲಿಯೂ ಹಂತಗಳಿರಲೇಬೇಕು. ಮತ್ತು ಆನಂದದಲ್ಲಿಯೂ ತಾರತಮ್ಯವಿದೆ. ಸ್ವಾಭಾವಿಕ ಯೋಗ್ಯತೆ ಮತ್ತು ಅಧ್ಯಾತ್ಮ ಸಾಧನೆಗೆ ಪರಸ್ಪರ ಅವಿಚ್ಛಿನ್ನ ಹೊಂದಾಣಿಕೆ ಮತ್ತು ಸಮಂಜಸ ಸಂಬಂಧ ಒಂದು ಕಡೆ, ಅಧ್ಯಾತ್ಮ ಸಾಧನೆ ಮತ್ತು ಫಲ ಪ್ರಾಪ್ತಿಗಳಲ್ಲಿಯೂ ಪರಸ್ಪರ ಸಮಾನತೆ ಇನ್ನೊಂದು ಕಡೆ ಇದೆ. ತಾರತಮ್ಯ ಧರ್ಮವು ಎಲ್ಲಿಯೂ ವಿಚ್ಛಿನ್ನವಾಗುವುದಿಲ್ಲ. ಭಗವಂತನ ಸಾಮ್ರಾಜ್ಯದಲ್ಲಿ ಲೌಕಿಕ ಲಾಭಗಳ ಐಹಿಕ ಜೀವನದಲ್ಲಿ ತಾರತಮ್ಯದಿಂದಾಗುವ ಅನಿಷ್ಟಗಳು ಇವೆ ಎಂದು ಶಂಕಿಸಬಾರದು. ಅಲ್ಲಿ ಪರಿಶುದ್ಧಾತ್ಮಗಳು ತಮಗಿಂತ ಉತ್ತಮ ವರ್ಗದ ಮುಕ್ತರಿಂದ ಮಾರ್ಗದರ್ಶನ ಆಶೀರ್ವಾದಗಳನ್ನು ಪಡೆಯುವುದರಲ್ಲಿ ಆನಂದಿಸುತ್ತಾ, ತಮ್ಮ ಕನಿಷ್ಠ ವರ್ಗದ ಮುಕ್ತರಿಗೆ ಹೇರಳವಾಗಿ ಹಾಗೆಯೇ ನೀಡುತ್ತಾ ಇರುತ್ತಾರೆ. ಈ ತಾರತಮ್ಯದಲ್ಲಿಯೇ ದೈವಿಕ ಸಾಮರಸ್ಯವಿದೆ. ಇದು ಆನಂದ ತಾರತಮ್ಯ ನ್ಯಾಯ. ಲೌಕಿಕ ದೃಷ್ಟಿಯಿಂದ ತಾರತಮ್ಯಕ್ಕೆ ಅಸಹ್ಯ ಪಡುವಂತೆ ಅದನ್ನು ಕಟುವಾಗಿ ಟೀಕಿಸಿದರೆ, ಲೌಕಿಕ ಪದಾರ್ಥಕ್ಕೆ ಪಾರಮಾರ್ಥಿಕದ ಅನ್ವಯ ಮಾಡಿದ ದೋಷವುಂಟಾಗುತ್ತದೆ. ಮುಕ್ತ್ಯರ್ಹರು ನಿತ್ಯ ಸಂಸಾರಿಗಳು, ನಿತ್ಯಬದ್ಧರು ಎಂಬ ಆತ್ಮನ ಸ್ವಾಭಾವಿಕ ವರ್ಗಗಳಿಗೆ ಪ್ರಮಾಣಗಳ ಆಧಾರವಿರುವಂತೆ ಈ ತಾರತಮ್ಯ ವಾದಕ್ಕೂ ಶಾಸ್ತ್ರಗಳ ಆಧಾರವಿದೆ, ಎಂದು ಶ್ರೀಮಧ್ವಾಚಾರ್ಯರು ವಾದಿಸುತ್ತಾರೆ.

D ಈ ಮೋಕ್ಷದ ಸಮೀಕ್ಷೆಯಿಂದ, ದ್ವೈತ ಸಿದ್ಧಾಂತದ ಸಾಧನಾ ಮಾರ್ಗದ ಪರಾಮರ್ಶೆಗೆ ಹೋಗೋಣ.

ಸಾಧನೆಯು ಕ್ರಮ ಕ್ರಮವಾದದ್ದು, ವ್ಯಕ್ತಿತ್ವದ ಸರ್ವಶಕ್ತಿಗಳನ್ನು ಅದು ಸಂಘಟನೆ ಮಾಡುತ್ತದೆ. ಶ್ರೀಮನ್ಮಧ್ವರು ನಿಷ್ಕೃಷ್ಟವಾಗಿ ಹೇಳಿರುವ ವಾಕ್ಯಗಳಿಂದ ಇದರ ಪೂರ್ಣ ಚಿತ್ರವನ್ನು ರಚಿಸುವುದು ಬಹಳ ಆಕರ್ಷಕವಾದ ಉದ್ಯಮ ; ಅವರು ತಮ್ಮ ನಿರೂಪಣೆಯಲ್ಲಿ ಉಪನಿಷತ್ತುಗಳ ತತ್ವ ಪರಂಪರೆಯನ್ನೂ ಭಕ್ತಿ ಸಾಹಿತ್ಯ ನಿಧಿ

ಯನ್ನೂ ಪುರಾಣಾಗಮಗಳನ್ನು ರಾಮಾಯಣ ಭಾರತ ಮಹಾ ಕಾವ್ಯಗಳನ್ನು, ರಸ ಪಾಕವಾದ ಭಾಗವತವನ್ನು ಅದ್ಭುತ ರೀತಿಯಲ್ಲಿ ಭಟ್ಟಿ ಇಳಿಸಿದ್ದಾರೆ.

ಮೊದಲನೆಯದಾಗಿ, ಜೀವನಿಗೆ ಮುಕ್ತಿಯನ್ನು ತರುವ ಪ್ರಪ್ರಧಾನ ಮತ್ತು ನಿರ್ಣಾಯಕ ಅಂಶವು ನಾರಾಯಣನ "ಪ್ರಸಾದ". "ನಾರಾಯಣನ ಪ್ರಸಾದವಿಲ್ಲದೆ ಮೋಕ್ಷವಿಲ್ಲ" ಎಂಬ ತತ್ವವನ್ನು ಪದೇ ಪದೇ ಹೇಳುವುದರಲ್ಲಿ ಸ್ವಲ್ಪವೂ ಬೇಸರಪಡದೆ, ಆತ್ಮಾನಂದವನ್ನು ಅವರು ಅನುಭವಿಸುತ್ತಾರೆ. ಈ ಮಹೋನ್ನತ ವರಪ್ರದಾನದಲ್ಲಿ ಪ್ರಸಾದದ ಮೂರು ಹಂತಗಳಿವೆ. ಕರ್ಮದ ಫಲವಾಗಿ ಬರುವ ಪ್ರಸಾದವು ತೀರಾ ಕೆಳಗಿನದು. ಧಾರಣಾದಿ ನಿಷ್ಠೆಗಳಿಂದ ಬರುವುದು ಮಧ್ಯಮ ಜ್ಞಾನ ಸಂಪತ್ತಿನಿಂದ ಗಳಿಸುವ ಮಾನ್ಯತೆ ಅತ್ಯುನ್ನತವಾದುದು.

ಪ್ರಸಾದವು ನಿತ್ಯಸಿದ್ಧ ಸತ್ಯವೆಂಬುದನ್ನು ಗಮನಿಸಬೇಕು. ಮೋಕ್ಷ ಪ್ರಾಪ್ತಿಗೆ ಮಾನವನು ಪಟ್ಟು ಹಿಡಿದು ಶ್ರಮಿಸಿ ಅದನ್ನು ಉದ್ದೀಪಿಸುವಂತೆ ಮಾಡಿದರೆ ಸಾಕು. ಕೊನೆಯಲ್ಲಿ ಭಗವಂತನೇ ತನ್ನ ಪ್ರಸಾದದಿಂದ – ವಿಶೇಷ ತತ್ವದ ಪ್ರಕಾರ ಅವನ ಸ್ವರೂಪದಿಂದ ಅಭಿನ್ನವಾಗಿರುವ ಪ್ರಸಾದದಿಂದ – ಅರ್ಥಿಯಾದ ಭಕ್ತನ ಸಾಧನೆಯಿಂದ ಪ್ರೀತನಾಗಿ, ಆತನಿಗೆ ಈ ಶ್ರೇಷ್ಠತಮ ವರವನ್ನು ಪ್ರದಾನ ಮಾಡುತ್ತಾನೆ. ಪ್ರಸಾದವು ಈ ರಂಗದಲ್ಲಿ ವಿವಿಧ ರೀತಿಯಲ್ಲಿ ಕಾರ್ಯಗತವಾಗುತ್ತದೆ. "ವಿಷ್ಣು ತತ್ವ ವಿನಿರ್ಣಯ" ಎಂಬ ಉದ್ಗ್ರಂಥವು ಸ್ಥಾಪಿಸುವಂತೆ ವಿಷ್ಣುವು ಅಜ್ಞಾನಿಗೆ ಜ್ಞಾನವನ್ನೂ, ಜ್ಞಾನಿಗೆ ಮೋಕ್ಷವನ್ನೂ, ಮುಕ್ತನಿಗೆ ಆನಂದವನ್ನೂ ದಯಪಾಲಿಸುತ್ತಾನೆ. ಪ್ರಸಾದವು ನಿರಂತರವಾಗಿ ಅಧ್ಯಾತ್ಮ ಜೀವನದಲ್ಲಿ ಪ್ರಾರಂಭದಿಂದಲೂ, ಅಂತೆಯೇ ಪರಮ ಗತಿ ಪ್ರಾಪ್ತವಾದ ನಂತರವೂ ಅವಶ್ಯಕವಾಗಿರುವ ಅಮೃತವಾಹಿನಿಯಾಗಿರುತ್ತದೆ.

2) ಭಕ್ತಿಯ ಪರಾಕಾಷ್ಠತೆಯೇ ಸಾಧನದ ಅಂತಿಮ ಘಟ್ಟವಾಗಿ ಪ್ರಸಾದವನ್ನು ಹಿಡಿದು ತರುತ್ತದೆ. ಭಕ್ತಿಯ ಆದರ್ಶ ನಿರೂಪಣೆಯು ದ್ವೈತದಲ್ಲಿ ಹೀಗಿದೆ. "ಮಹಾತ್ಮ್ಯ ಜ್ಞಾನಪರ್ವಸ್ತು ಸುದೃಢ ಸರ್ವತೋ ಅಧಿಕ: ಸ್ನೇಹೋಭಕ್ತೀತಿ ಪ್ರೋಕ್ತ: ತಯಾ ಮುಕ್ತಿ: ನಚಾನ್ಯಥಾ" ಭಕ್ತಿಯ ಎರಡು ವಸ್ತು ವಿಶೇಷಗಳು ಭಗವಂತನ ಮಹಾತ್ಮ್ಯೆಯ ಜ್ಞಾನ ಮತ್ತು ಭಗವತ್ಪ್ರೇಮ ಸದೃಢವಾಗಿರಬೇಕು ಮತ್ತು ಅದರ ಉತ್ಕರ್ಷವು ಇತರ ಎಲ್ಲಾ ಪ್ರೇಮಗಳನ್ನೂ ಆತ್ಮ ಪ್ರೇಮವನ್ನೂ ಸಹ ಮೀರಿರಬೇಕು ಎಂಬುವು. ಇಂತಹ ಭಕ್ತಿಯ ಪರಾಕಾಷ್ಠೆಯೇ ಮೋಕ್ಷಕ್ಕೆ ಬೇಕಾದ ಪ್ರಸಾದವನ್ನು ಆಕರ್ಷಿಸಬಲ್ಲದು. ಭಕ್ತಿಯಲ್ಲಿಯೂ ಮಟ್ಟಗಳಿವೆ. ಗೀತೆಯು ನಾಲ್ಕು ಮಟ್ಟಗಳನ್ನು ಸೂಚಿಸುತ್ತದೆ. ಅತ್ಯುನ್ನತವಾದ ಭಕ್ತಿ ಮಾತ್ರವೇ ಇಲ್ಲಿ ಬೇಕಾದುದು.

ಶ್ರೀಮನ್ಮಧ್ವರು ಭಕ್ತಿ ಪಂಥದ ಅಗ್ರಗಣ್ಯರಲ್ಲಿ ಒಬ್ಬರು. ಅವರ "ಕೃಷ್ಣಾಮೃತ ಮಹಾರ್ಣವ" ಎಂಬ ಕೃತಿಯಲ್ಲಿರುವ ಪ್ರಾಚೀನ ಭಕ್ತಿ ಬೋಧಕ ಮಹಾವಾಕ್ಯಗಳ ಸಂಗ್ರಹವು ಅವರ ಅಗಾಧವಾದ ಭಕ್ತಿ ಪರವಶತೆಗೆ ಸಾಕ್ಷಿಯಾಗಿದೆ. ಅಧ್ಯಾತ್ಮ ಜೀವನದಲ್ಲಿ ಭಕ್ತಿಗೆ ಅವರು ಕೊಡುವ ಪಾತ್ರವು ಸರ್ವವ್ಯಾಪಕವಾಗಿದೆ.

"ಭಕ್ತ್ಯೈ ಜ್ಞಾನಂ ತತೋ ಭಕ್ತಿ:
ತತೋ ದೃಷ್ಟಿ: ತತಶ್ಚ ಸಾ ।
ತತೋ ಮುಕ್ತಿ : ತತೋ ಭಕ್ತಿ : ।
ಸೈವ ಸ್ಯಾತ್ ಸುಖರೂಪಿಣಿ ।

ಎಂಬುದು ಅವರ ಅನುವ್ಯಾಖ್ಯಾನದಲ್ಲಿ ಬರುವ ಮಹಾವಾಕ್ಯ.

ಭಕ್ತಿಯಿಂದ ಜ್ಞಾನವು ಅಂಕುರಿಸುತ್ತದೆ, ಜ್ಞಾನದಿಂದ ತಿರುಗಿ ಭಕ್ತಿಯು ಅಂಕುರಿಸುತ್ತವೆ. ಇವು ದೈವ ಸಾಕ್ಷಾತ್ಕಾರಕ್ಕೆ ಒಯ್ಯುತ್ತವೆ. ಈ ಸಾಕ್ಷಾತ್ಕಾರವು ಭಕ್ತಿಯನ್ನು ಪರಿಪಾಕಗೊಳಿಸಿ ಮುಕ್ತಿಯನ್ನು ತರುತ್ತದೆ. ಮುಕ್ತಾವಸ್ಥೆಯಲ್ಲಿ ಭಕ್ತಿಯು ಆನಂದ ರೂಪವನ್ನು ತಾಳಿ ಸುಸ್ಥಿರವಾಗುತ್ತದೆ. ಹೀಗೆ ಭಕ್ತಿಯು ಸಾಧನೆಯ ಪ್ರಥಮ ಸೋಪಾನವಾಗಿದ್ದರೂ ಅದು ಮೋಕ್ಷದಲ್ಲಿಯೂ ಅಂತರ್ಗತವಾಗಿ ಉಳಿದಿರುತ್ತದೆ. ಜಯತೀರ್ಥರು ಮೋಕ್ಷಪ್ರದವಾದ ಭಗವದನುಗ್ರಹವನ್ನು ಉತ್ಪನ್ನ ಮಾಡುವ ಭಕ್ತಿಯ ಪರಾಕಾಷ್ಠತೆಯನ್ನು 'ಪರಮ ಭಕ್ತಿ' ಎಂದು ಕರೆದಿದ್ದಾರೆ.

3) ಇಂತಹ ಭಕ್ತಿಯು ಜ್ಞಾನಜನ್ಯವಾದುದೆಂದು ಆಗಲೇ ನೋಡಿದ್ದೇವೆ. ಇದು ಕೇವಲ ಭಾವಾವೇಶವಲ್ಲ. ಶ್ರೀಮದಾಚಾರ್ಯರು ಇದನ್ನು ಜ್ಞಾನದ ಒಂದು ರೂಪವೆಂದೇ 'ಜ್ಞಾನಸ್ಯ ವಿಶೇಷ'ವೆಂದೇ ನಿರ್ದೇಶಿಸುವಷ್ಟು ದೂರ ಹೋಗುತ್ತಾರೆ. ಇದರ ಗುಣ ಸ್ವಭಾವಗಳ ಮಟ್ಟವು ಅದು ಆಧರಿಸಿರುವ ಜ್ಞಾನವನ್ನವಲಂಬಿಸಿದೆ. ಪರಮೋತ್ಕೃಷ್ಟ ಭಕ್ತಿಯು ಪರಮೋತ್ಕೃಷ್ಟ ಜ್ಞಾನದಿಂದಲೇ ಚಿಮ್ಮಬಲ್ಲದು. ಆದ್ದರಿಂದ ಈ ಪ್ರಸಂಗದ ಭಕ್ತಿಯು ಭಗವಂತನ ನಿಕಟ ಸಾನ್ನಿಧ್ಯದಿಂದಾಗುವ ಜ್ಞಾನೋದಯದಿಂದಲೇ ಚಿಮ್ಮು ವಂತಹದು. ಇದನ್ನು 'ಅಪರೋಕ್ಷ ಜ್ಞಾನ' ವೆನ್ನಲಾಗಿದೆ. ಇಂತಹ ಜ್ಞಾನಕ್ಕೆ ಮಾತ್ರ ಪರಮಾತ್ಮನ ಅಗಾಧ ವೈಭವವು ಸ್ಪಷ್ಟವಾಗಿಯೂ ನಿಶ್ಚಯವಾಗಿಯೂ ಸಿಲುಕು ತ್ತದೆ. ಇದು ಕೇವಲ ಧ್ಯಾನಗಮ್ಯತೆಯನ್ನು ಲಂಬಿಸಿ ಮುಟ್ಟುವ ಭಾವ ಚಿತ್ರವಲ್ಲ. ಶ್ರೀಮನ್ಮಧ್ವರು ಭಾವನಾ ಶಕ್ತಿಯನ್ನು ವಿಚಾರ ಮುಂದಕ್ಕೆ ಹೋಗಿರಬೇಕೆಂದು ಕಡ್ಡಾಯ ಮಾಡುತ್ತಾರೆ. ಪ್ರೇಮಕ್ಕೆ ಪಾತ್ರವಾದುದರ ನಿಕಟ ಸಂಬಂಧದಿಂದ ಜನಿಸುವ ಪ್ರೇಮವೇ ತನ್ನ ಔನ್ನತ್ಯ ಮತ್ತು ತೀವ್ರತೆಗಳನ್ನು ಮುಟ್ಟಬಲ್ಲದು. ಆದ್ದರಿಂದ ಅಪರೋಕ್ಷ ಜ್ಞಾನವು ಅತ್ಯವಶ್ಯಕ.

4) ಭಗವತ್ ಸಾಕ್ಷಾತ್ಕಾರವನ್ನು ಪಡೆಯುವುದು ಹೇಗೆ? ಇದಕ್ಕೆ ಸಾಧನ ವಾದುದು ಉಪಾಸನೆ ಅಥವಾ ನಿದಿಧ್ಯಾಸನ. ಇದು ಪ್ರೇಮಮಯವಾದ ಉಪಾಸನೆ ಮತ್ತು ಸಾಕ್ಷಾತ್ಕಾರದ ತೀವ್ರ ಹಂಬಲ. (ಇದು ಪ್ರಸಾದಕ್ಕೆ) ನಿಶ್ಚಿತ ಕಾರಕವಾದ ಅನುಗ್ರಹದ ಮೂಲಕ ಸಾಕ್ಷಾತ್ಕಾರಕ್ಕೆ ಕರೆದೊಯ್ಯುತ್ತದೆ. ಶ್ರೀಮನ್ಮಧ್ವರು ಉಪಾ ಸನೆಯು ಅಹೃದಯವಾಗಿ ಅಥವಾ ಭಯಸ್ನೇಹಗಳಿಂದ ಕೂಡಿದುದಾಗಿರಬಾರದೆಂದು ಒತ್ತಿ ಹೇಳುತ್ತಾರೆ. ಅದು ಹೃದಯ ಪೂರಿತ ಬೇಡಿಕೆಯಾಗಿರಬೇಕು. ಶಾಸ್ತ್ರಾಧ್ಯ ಯನ ಮತ್ತು ತಾತ್ವಿಕ ಸಂಶೋಧನೆಗಳಿಂದ ಗಳಿಸಿದ ಬೌದ್ಧಿಕ ವಿದ್ಯೆಯೆಲ್ಲವೂ ಉಪಾಸನೆ

ಯಿಂದ ಸಾಕ್ಷಾತ್ಕಾರಕ್ಕೆ ಪರಿವರ್ತನೆಯಾಗಬಲ್ಲದು. ಅಪರೋಕ್ಷ ಜ್ಞಾನವು ಭಗವದನುಭವ ಮಾರ್ಗದಲ್ಲಿ ಅಂತಿಮ ಸೋಪಾನವಾದರೂ ಅದು ಪರೋಕ್ಷ ಜ್ಞಾನದಿಂದಲೇ ಪ್ರಾರಂಭವಾಗುತ್ತದೆ. ಪರೋಕ್ಷ ವಿದ್ಯೆಯನ್ನು ಅಪರೋಕ್ಷ ಜ್ಞಾನವನ್ನಾಗಿ ಮಾಡುವುದಕ್ಕೆ ಉಪಾಸನೆಯು ಪ್ರಧಾನ ಸಾಧನ.

ತ್ರಿವಿಕ್ರಮ ಪಂಡಿತರು ಇದನ್ನು ಕುರಿತು ಬಹಳ ಸಾರವತ್ತಾಗಿ ಹೀಗೆ ಹೇಳುತ್ತಾರೆ. "ನಿರಂತರಂ ಚಿಂತನಂ ಮಂತರೇಣ ಅನಂತ ದರ್ಶನ ಪ್ರತಿಬಂಧಕಸ್ಯ ಸಂಚಿತಸ್ಯ ಕರ್ಮಣ : ಅನುಪಮರ್ದನೀಯುತ್ವಾತ್" ಅನಂತನ ದರ್ಶನಕ್ಕೆ ಪ್ರತಿಬಂಧಕವಾಗಿರುವ ಗಳಿತ ಕರ್ಮವು ನಿರಂತರವಾದ ಉಪಾಸನೆಯಿಂದ ಮಾತ್ರವೇ ನಿವಾರಣೆಯಾಗುತ್ತದೆ.

ಉಪಾಸನೆಯಲ್ಲಿಯೂ ಹಂತಗಳಿವೆ. ಪಾಮರರು ವಿಗ್ರಹಗಳಲ್ಲಿರುವ ಭಗವಂತನಲ್ಲಿ ಮನಸ್ಸಿಡುತ್ತಾರೆ. ಯಜ್ಞಾಸಕ್ತರು ಹೋಮಾಗ್ನಿಯಲ್ಲಿ ಭಗವಂತನನ್ನರ್ಚಿಸುತ್ತಾರೆ. ಯೋಗಿಗಳು ತಮ್ಮ ಹೃದಯದಲ್ಲಿರುತ್ತಾನೆಂದು ಧ್ಯಾನಿಸುತ್ತಾರೆ. ಕೆಲವರು ಪ್ರಕೃತಿಯಲ್ಲಿ ಮಾತ್ರವೇ ನೆಲಸಿದ್ದಾನೆಂದು ಭಾವಿಸುತ್ತಾರೆ. ಆದರೆ ಜ್ಞಾನಿಗಳು ಅತನು ಸರ್ವಾಂತರ್ಯಾಮಿಯೆಂದು ಧ್ಯಾನಿಸುತ್ತಾರೆ. ಸರಿಯಾದ ಉಪಾಸನೆಯಲ್ಲಿ ಭಗವಂತನನ್ನು ಸತ್-ಚಿತ್-ಆನಂದಾತ್ಮನೆಂದು ಪರಮಾತ್ಮನ ಮೂಲಸ್ವರೂಪವನ್ನೇ ಧ್ಯಾನ ಮಾಡುವುದು ಅವಶ್ಯಕ.

ಉಪಾಸನೆಯು ನಿಶ್ಚಯ ಮಾರ್ಗವಾಗಿರಬೇಕು. ಅದು ಸಾಧ್ಯವಾಗಬೇಕಾದರೆ ಉಪಾಸಕನು ಸಂದೇಹರಹಿತನಾಗಿರಬೇಕು, ಅವನು ಯಾವುದರ ಉಪಾಸನೆ ಮಾಡುತ್ತಾನೆಯೋ ಅದರ ವಿಷಯವು ಮನದಟ್ಟಾಗಿರಬೇಕು ಮತ್ತು ಅದನ್ನು ಪೂರ್ತಿ ಖಂಡಿತ ಮಾಡಿಕೊಂಡಿರಬೇಕು. ಇದಕ್ಕೆ ತಾತ್ವಿಕ ಜಿಜ್ಞಾಸೆಯನ್ನು ಭಗವಂತನ ವಿಷಯದಲ್ಲಿರುವ ಸತ್ಯಗಳನ್ನು ನಿರ್ಣಾಯಕವಾಗಿ ಸ್ಥಾಪಿಸುವವರೆಗೂ ಕೊಂಡೊಯ್ದಿರಬೇಕು. ಇಲ್ಲದಿದ್ದರೆ, ಉಪಾಸಕನನ್ನು ಸಂಶಯಗಳು ಪೀಡಿಸುತ್ತವೆ. ಮತ್ತು ಅವನನ್ನು ಚಂಚಲವಾದ ಉಪಾಸನೆಯು ಎಲ್ಲಿಗೂ ಒಯ್ಯುವುದಿಲ್ಲ. ದೃಢವಾದ ಮನವರಿಕೆಯು ಅಚಲವಾದ ಮತ್ತು ದೃಢವಾದ ಉಪಾಸನೆಗೆ, ಅದು ಇಚ್ಛಿತಫಲವನ್ನು ಕೊಡುವಂತೆ ಮಾಡುವುದಕ್ಕೆ ಪೂರ್ವಭಾವಿಯಾದ ಸಿದ್ಧತೆ. ಆದ್ದರಿಂದ ಬ್ರಹ್ಮಸೂತ್ರದಲ್ಲಿ ಪ್ರತಿಪಾದಿತವಾಗಿರುವಂತೆ ಬ್ರಹ್ಮಜಿಜ್ಞಾಸೆಯು ಉಪಾಸನೆಯ ಆಧಾರವಾಗಿರಬೇಕು. ಉಪನಿಷತ್ತುಗಳಲ್ಲಿ ಹೇಳಿರುವ ಮನನವು ಇದೇ ಆಗಿದೆ.

ಜಿಜ್ಞಾಸೆಗೆ ಪ್ರಮಾಣದ ಅವಶ್ಯಕತೆ ಇದೆ. ಈ ಪ್ರಸಂಗದಲ್ಲಿ ಶ್ರುತಿಗಳು ಮಾತ್ರವೇ ಪ್ರಮಾಣ. ಆದ್ದರಿಂದ ಮನನ ಅಥವಾ ಜಿಜ್ಞಾಸೆಗೆ ಶ್ರವಣ ಎಂದರೆ ಸಚ್ಛಾಸ್ತ್ರಗಳ ಅಧ್ಯಯನ ಪೂರ್ವಭಾವಿಯಾಗಿ ಅವಶ್ಯಕ. ಶ್ರೀಮನ್ಮಧ್ವರು ಜಯತೀರ್ಥರು, ವಿದ್ಯಾರ್ಥಿಯು ನಿಷ್ಠೆ, ಭಕ್ತಿ, ಶ್ರದ್ಧೆಗಳನ್ನು ಸಮ್ಯಗ್ರಹಣ ವಿಷಯದಲ್ಲಿ ವಹಿಸಬೇಕೆಂದು ಹೇಳುತ್ತಾರೆ. ಶ್ರುತಿಗಳು ತಮ್ಮ ಅಂತರಾರ್ಥವನ್ನು ಅಂತಹ ಅಭ್ಯಾಸಕ್ಕೆ ಮಾತ್ರ ಪ್ರಕಾಶ ಪಡಿಸುತ್ತವೆ. ಶ್ರೀಮನ್ಮಧ್ವರು ಶ್ರವಣ, ಮನನ ನಿಧಿ

ಧ್ಯಾನಗಳ ಉದ್ದೇಶ ಮತ್ತು ಅವಧಿಗಳ ವಿಷಯದಲ್ಲಿ ಈ ಸುಂದರ ಸೂತ್ರವನ್ನು ಕೊಡುತ್ತಾರೆ.

ಶೃಣುಯಾತ್ ಯಾವದಜ್ಞಾನಂ
ಮತಿರ್ಯಾವತ್ ಅಯುಕ್ತತಾ
ಧ್ಯಾನಂ ಚ ಯಾವದೀಕ್ಷಾನಾತ್

ಅಜ್ಞಾನವಿರುವವರೆಗೂ ಶಾಸ್ತ್ರಾಧ್ಯಯನ ಮಾಡಬೇಕು. ಶಾಸ್ತ್ರಗಳು ಹೇಳುವುದರಲ್ಲಿ ಅಯುಕ್ತತೆ ತೋರಿಬರುವುದು ನಿಲ್ಲುವವರೆಗೆ ವಿಚಾರ ಮಾಡಬೇಕು. ಸಾಕ್ಷಾತ್ಕಾರವಾಗುವವರೆಗೂ ಧ್ಯಾನ ಮಾಡಬೇಕು.

ಸಾಧನದ ಮೂಲಭೂತ ಅಂಶಗಳನ್ನು ಅಪರೋಕ್ಷ ಜ್ಞಾನ ಮತ್ತು ಪರಮ ಭಕ್ತಿ ಎಂಬವುಗಳಲ್ಲಿ ವಿಶದಪಡಿಸಲಾಗಿದೆ. ಇವೆರಡೂ ಪರಮ ಪ್ರಸಾದದ ಪ್ರವರ್ತನೆಗೆ ಅತ್ಯಂತ ಸಮೀಪಸ್ಥ ಅಂಗಗಳು. ಭಕ್ತಿಯೇ ತಾರಕವೆಂದು ಸಮರ್ಥಿಸುವ ಭಕ್ತಿ ಭಕ್ತಿಪಂಥದ ಸಿದ್ಧಾಂತವನ್ನೂ ಮೋಕ್ಷಕ್ಕೆ ಜ್ಞಾನವೇ ಸಾಧನ ಮಾರ್ಗವೆಂಬುದನ್ನೂ ಸಾಮರಸ್ಯಕ್ಕೆ ತಂದು ಪರಮ ಪ್ರಸಾದಕ್ಕೆ ಸಲ್ಲತಕ್ಕ ಅಂತಿಮ ಸ್ಥಾನವನ್ನು ದ್ವೈತದರ್ಶನದಲ್ಲಿ ಕೊಡಲಾಗಿದೆ.

ಸಾಧನದ ವ್ಯವಸ್ಥೆಯಲ್ಲಿ ಜೀವನದ ಇನ್ನೊಂದು ಅಂಶವು ಸ್ಥಾನವನ್ನು ಪಡೆಯಬೇಕು. ಇದು ಸದಾಚಾರಕ್ಕೆ ಸಂಬಂಧಪಟ್ಟುದ್ದು, ಕರ್ಮವೆಂದು ಸಾಧಾರಣವಾಗಿ ಕರೆಯಲ್ಪಡುತ್ತದೆ. ಇದು ಉಪಪಾತ್ರವನ್ನು ವಹಿಸುತ್ತದೆ.

ಗೀತೆಯಲ್ಲಿ ನಿರೂಪಿಸುವ ಕರ್ಮಯೋಗವು ಸಾಧನದ ಪೂರ್ಣ ವ್ಯವಸ್ಥೆಯಲ್ಲಿ ಅನಿವಾರ್ಯವಾದ ಒಂದು ಅಂಗವಾಗಿದೆ. ಸಾಧಾರಣವಾಗಿ ತಿಳಿದಿರುವಂತೆ, ಕರ್ಮವೆಂದರೆ ಯಜ್ಞಯಾಗಾದಿಗಳನ್ನು ಮಾಡಿ ಇಹಲೋಕದ ಅಥವಾ ಪರಲೋಕದ ಸೌಖ್ಯಗಳನ್ನು ಪಡೆಯುವುದು ಎಂಬುದನ್ನು ತಿರಸ್ಕರಿಸಲಾಗಿದೆ. ಕರ್ಮವು ಯೋಗವಾಗಿರಬೇಕು, ನಿಷ್ಕಾಮವಾಗಿರಬೇಕು, ಆರಾಧನೆಯನ್ನು ಉದಾತ್ತ ಮನೋಭಾವದಿಂದ ಆಚರಿಸತಕ್ಕದ್ದು. ಅವರಲ್ಲಿ, ಗೀತೆಯು ವಿವರಿಸುವಂತೆ, ಆಚರಣೆ ಎಲ್ಲವೂ ಸೇರಿದೆ. ಕರ್ಮಯೋಗವು ಇಮ್ಮಡಿಯಾಗಿ ಫಲಕಾರಿಯಾದುದು. ಮೊದಲನೆಯದಾಗಿ ಜ್ಞಾನವು ಉದ್ದೀಪಿಸುವುದಕ್ಕೆ ಅವಶ್ಯಕವಾದ ಆತ್ಮಪರಿಪಾಕವನ್ನು ಮಾಡುತ್ತದೆ. ಎರಡನೆಯದಾಗಿ ಜ್ಞಾನೋದಯವಾದ ಮೇಲೆ ಮಾಡಿದ ಕರ್ಮವು ಜ್ಞಾನದಿಂದ ಬರುವ ಆನಂದವನ್ನು ಅಧಿಕಗೊಳಿಸುತ್ತದೆ. ಶ್ರೀಮನ್ಮಧ್ವರು ಎರಡು ಸೂತ್ರಗಳನ್ನು ಸ್ಥಾಪಿಸುತ್ತಾರೆ.

ಸರ್ವಧರ್ಮಾಪೇಕ್ಷಾ ಚ ಜ್ಞಾನಸ್ಯ ಉತ್ಪತ್ತೌ ।
ಶುಭಕರ್ಮಭಿರಾಧಿಕ್ಯಂ ।

ಶಾಸ್ತ್ರಗಳು ಕರ್ಮವೇ ಬಂಧನಕ್ಕೆ ಕಾರಣವೆಂಬಂತೆ ಅವನ್ನು ತ್ಯಾಗ ಮಾಡಬೇಕೆಂದು ಉಪದೇಶಿಸುವುದಿಲ್ಲ. ಬಂಧನಕ್ಕೆ ಕಾರಣವಾದುದು ಕರ್ಮದ ಹಿಂದೆ ಇರುವ ಕಾಮನೆಗಳು. ಗೀತೆಯಲ್ಲಿ ಕೊನೆಯ ಶ್ಲೋಕದಲ್ಲಿ ಶ್ರೀಕೃಷ್ಣನು ಅರ್ಜುನನಿಗೆ 'ಸರ್ವ

ಧರ್ಮಗಳನ್ನೂ ಪರಿತ್ಯಜಿಸು' ಎಂದು ಪ್ರೋತ್ಸಾಹಿಸುವುದನ್ನು ಅರ್ಥ ಮಾಡುವಾಗ ಎಚ್ಚರಿಕೆಯಿಂದ ಶ್ರೀಮನ್ಮಧ್ವರು ಹದಿನೆಂಟನೆಯ ಅಧ್ಯಾಯದಲ್ಲಿ ಬೋಧಿಸಿರುವ ಸ್ವಾರ್ಥ ಚಿಂತನೆಯಿಂದ ಮಾಡುವ ಕರ್ಮಗಳು ಸಾತ್ವಿಕ ತ್ಯಾಗವೆಂದು ವಿಶದಪಡಿಸುತ್ತಾರೆ. ಭಾಗವತದ ಮಹಾವಾಕ್ಯವಾದ 'ತತ್ಕರ್ಮ ಹರಿತೋಷಂ ಯತ್' ಎಂಬುದನ್ನು ಉಲ್ಲೇಖಿಸಿ ಹರಿ ಪ್ರೀತಿಗಾಗಿ ಮಾಡುವ ಕರ್ಮವೇ ಸಾಧುವೆಂದು ಅನುಮೋದಿಸುತ್ತಾರೆ. ಭಗವತ್ಸಾರಾಧನೆಯಿಂದು ಮಾಡುವ ಕರ್ಮಗಳನ್ನು ಬಿಡುವುದರಲ್ಲಿ ಅರ್ಥವಿಲ್ಲ. ಅದರಲ್ಲಿಯೂ ಬಾಹ್ಯ ಅಂಗವು ಗೌಣವಾದುದು ಮತ್ತು ಸಾಧನದ ಅಂತಿಮ ಗುರಿಯಾದ ಸಾಕ್ಷಾತ್ಕಾರಕ್ಕೆ ಸಹಾಯಕವೆಂಬುದರಿಂದಲೇ ಅದಕ್ಕೆ ಮೌಲ್ಯ. ಹೀಗೆ ಜ್ಞಾನವೇ ಮೋಕ್ಷಕ್ಕೆ ಸಾಧನವೆಂಬುವಕ್ಕೆ ಚ್ಯುತಿ ಬರದೆ ಸ್ಥಿರವಾಗುತ್ತದೆ. ಗೀತೆಯ ಮುಖ್ಯ ಬೋಧನೆಯಾದ ಕರ್ಮಯೋಗವನ್ನು ಅಳವಡಿಸಿಕೊಂಡಿರುವ ಶ್ರೇಷ್ಠ ವೇದಾಂತ ಸಂಪ್ರದಾಯದಲ್ಲಿ ಇದೆಲ್ಲಾ ಸೇರಿಕೊಂಡಿದೆ.

ಈ ವಿಷಯಗಳು ಕರ್ಮದ ಧಾರ್ಮಿಕ ಸ್ವರೂಪವನ್ನು ಹೇಳುವುದಾದರೆ, ಧಾರ್ಮಿಕ ಮನೋಭಾವವನ್ನು ಬೆಳೆಸಿಕೊಳ್ಳುವುದಕ್ಕೆ ಆತ್ಮಸಂಸ್ಕೃತಿ ಇರಬೇಕು. ಈ ವಿಷಯದಲ್ಲಿ ಉಪನಿಷತ್ತುಗಳು ಮತ್ತು ಗೀತೆಯು ಅಧಿಕವಾಗಿ ತಮ್ಮ ಉಪದೇಶ ಸಂಪತ್ತನ್ನು ನೀಡುತ್ತವೆ. ದ್ವೈತ ಸಂಪ್ರದಾಯವು ಆತ್ಮಸಂಸ್ಕೃತಿಯ ವಿಷಯವನ್ನು ಪೂರ್ಣವಾಗಿ ಅಂತರ್ಗತ ಮಾಡಿಕೊಂಡಿದೆ. ಜಯತೀರ್ಥರು ಶ್ರೀಮನ್ಮಧ್ವರ ವಿಷ್ಣು ತತ್ವನಿರ್ಣಯದ ಎರಡನೆ ಶ್ಲೋಕದಲ್ಲಿ ಬರುವ 'ಸಜ್ಜನ' ಶಬ್ದದ ವ್ಯಾಖ್ಯಾನದಲ್ಲಿ ವ್ಯಕ್ತಿಯ ಆತ್ಮಪರಿಪಾಕವನ್ನು ವಿವರಿಸುತ್ತಾರೆ. ಅವರು ನಾಲ್ಕು ಮನೋಭಾವಗಳನ್ನು ಪರಿಗಣಿಸುತ್ತಾರೆ. ಮನುಷ್ಯನ ಪುರುಷಾರ್ಥಗಳಲ್ಲಿ ಯಾವುದು ನಿತ್ಯ ಮತ್ತು ಯಾವುದು ಅನಿತ್ಯ ಎಂದು ಅರಿಯುವ ವಿವೇಕವು ಮೊದಲನೆಯದು. ಈ ವಿವೇಕದಿಂದ, ಜೀವನದ ಅಸಾರವಾದ ಅಲ್ಪವಾದ ಅನಿತ್ಯ ಸೌಖ್ಯಗಳನ್ನು ತಿರಸ್ಕರಿಸುವಂತಹ ವೈರಾಗ್ಯವು ಬರುವುದು. ನಿಷೇಧಾತ್ಮಕವಾದ ಈ ಮನೋಭಾವವನ್ನು ಭಾವಾತ್ಮಕವಾಗಿ ಅತ್ಯುಚ್ಚ ಮೌಲ್ಯವಾದ ಮೋಕ್ಷಕ್ಕೆ ತೀವ್ರ ಹಂಬಲದಿಂದ ಬಲಗೊಳಿಸುವುದು ಮುಮುಕ್ಷುತ್ವ. ಧಾರ್ಮಿಕ ಜೀವನದಲ್ಲಿ ಈ ನಿಷೇಧಾತ್ಮಕ ಮತ್ತು ಭಾವಾತ್ಮಕ ವೃತ್ತಿಗಳನ್ನು ಇಟ್ಟುಕೊಂಡು ಅತಿಯಾದ ವೈರಾಗ್ಯ, ಅಥವಾ ಅತಿಯಾದ ವಿಷಯ ಲೋಲುಪತೆಗಳ ವಶವಾಗದಂತೆ ಇರಬೇಕಾದುದು ಅವಶ್ಯಕ. ಇದು ನೀಚವಾದುದರ ಮೇಲೆ ವಿಜಯ ಮತ್ತು ಉಚ್ಚವಾದುದಕ್ಕಾಗಿ ಹೊರಡುವ ವಿಜಯ ಯಾತ್ರೆ. ಇದು ಒಂದರಿಂದ ಬಿಡುಗಡೆ ಮತ್ತು ಮತ್ತೊಂದಕ್ಕಾಗಿ ಬಿಡುಗಡೆ. ಇದು ಜೀವನದ ಅಲ್ಪಕಾಮನೆಗಳನ್ನು ವರ್ಜಿಸುವಾಗ ಆತ್ಮನಿಷೇಧ, ಅಮರವಾದ ಅಗಾಧವಾದ ಜೀವನವನ್ನನುಸರಿಸುವುದರಲ್ಲಿ ಆತ್ಮಸ್ಥಾಪನೆ. ನಾಲ್ಕನೆಯ ಮನೋಭಾವದ ಸನ್ನಾಹದಲ್ಲಿ ಆತ್ಮಗುಣಗಳ ಅನುಷ್ಠಾನವನ್ನು ಸೇರಿಸಲಾಗಿದೆ. ಬೃಹದಾರಣ್ಯಕ ಉಪನಿಷತ್ತಿನಲ್ಲಿ ಐದು ಗುಣಗಳನ್ನು – ಅಂದರೆ ಶಮ, ದಮ, ಉಪರತಿ ತಿತಿಕ್ಷೆ, ಸಮಾಧಾನಗಳನ್ನು ಪ್ರಸ್ತುತಪಡಿಸಲಾಗಿದೆ. ಶ್ರೀಮನ್ಮಧ್ವರು ಈ ಗುಣಗಳನ್ನು

ಭಗವದ್ಭಕ್ತಿಯಲ್ಲಿ ಅಚಲ ಶ್ರದ್ಧೆ, ಅಹಂಕಾರ ದಮನ, ಹೃದಯದ ನಿವಾಸಿಯಾದ ಭಗವಂತನಲ್ಲಿ ತೃಪ್ತಿಯಿಂದ ನೆಲೆಸುವುದು, ಸುಖದುಃಖಗಳಲ್ಲಿ ಸಮಾನಭಾವ, ಧ್ಯಾನಪರತೆ, ಎಂದು ಅರ್ಥ ಮಾಡುತ್ತಾರೆ, ಶಮ ಮತ್ತು ಉಪರತಿಗಳಿಗೆ ಭಕ್ತಿಪರವಾದ ಅರ್ಥ ಕೊಡುತ್ತಾರೆ ಎಂದು ಗಮನಿಸಬಹುದು. ಈ ಗುಣ ಸನ್ನಾಹವನ್ನು 'ಶಮಾದಿಸಂಪತ್' ಎಂದು ಕರೆಯಲಾಗಿದೆ. ವಿವೇಕ ವೈರಾಗ್ಯ, ಮುಮುಕ್ಷುತ್ವ ಮತ್ತು ಶಮಾದಿ ಸಂಪತ್ತುಗಳು ಮೂಲಭೂತವಾದ ಸಾಧನೆಯ ಉತ್ಕೃಷ್ಟ ಜೀವನಕ್ಕೆ ಮಾನಸಿಕ ಸಿದ್ಧತೆಯನ್ನು ಪರಿಷ್ಕಾರ ಮಾಡುತ್ತವೆ.

ಸಾಧನ ಮಾರ್ಗದ ಅಂಶಗಳು ಮತ್ತು ಹಂತಗಳು ಹೀಗಿವೆ. ಆರೋಹಣ ಕ್ರಮದಲ್ಲಿ, ಸಾಧನ ಚತುಷ್ಟಯ ಕರ್ಮಯೋಗ, ಶ್ರವಣ, ಮನನ, ನಿದಿಧ್ಯಾಸನ ಅಥವಾ ಉಪಾಸನ, ಅಪರೋಕ್ಷ ಜ್ಞಾನ, ಪರಮ ಭಕ್ತಿ, ಪರಮ ಪ್ರಸಾದ, ಇವುಗಳಾಗಿವೆ. ಭಕ್ತಿ ಮತ್ತು ಪ್ರಸಾದಗಳು ಎಲ್ಲಾ ಹಂತಗಳಲ್ಲಿಯೂ ಕಾರ್ಯಗತವಾಗಿರುತ್ತವೆ ಎಂದು ಗಮನಿಸಬೇಕು. ಜ್ಞಾನವು ಭಕ್ತಿ ಪ್ರಸಾದಗಳ ನಡುವೆ ವಿವಿಧ ರೀತಿಯಲ್ಲಿ ಸೇರಿಕೊಂಡಿವೆ ಎಂದು ಕೂಡ ಗಮನಿಸಬೇಕು. ಶ್ರೀಮನ್ಮಧ್ವರು ನಾರಾಯಣನ ಪ್ರಸಾದವೇ ಅಂತಿಮವಾಗಿ ತಾರಕವಾದುದೆಂದು ತೋರಿಸುತ್ತಾರೆ. ಅವರ ದೈವೋನ್ಮಾದವು ಶಿಖರಗಳ ಶಿಖರಕ್ಕೆ ಏರಿದೆ.

ಶಾಸ್ತ್ರಾಧ್ಯಯನದಿಂದಲೂ ತಾತ್ವಿಕ ಸಂಶೋಧನೆಗಳಿಂದಲೂ ಹೊರ ಹೊಮ್ಮುವುದೇನೆಂದರೆ ಪರತತ್ವದಲ್ಲಿ ಅವಿಚ್ಛಿನ್ನ ಭಕ್ತಿಯ ಅವಶ್ಯಕತೆ. ಇದಿಲ್ಲದಿದ್ದಲ್ಲಿ ವಿನಾಶದ ಹಾದಿ ಹಿಡಿದಂತೆಯೇ ಸರಿ.

ಶ್ರೀಮನ್ಮಧ್ವರ ಸಂದೇಶವು ಉಜ್ವಲವಾಗಿ ಸ್ಪಷ್ಟವಾಗಿ ಪ್ರಕಾಶವಾಗಿದೆ. ಶ್ರೀ ವೇದವ್ಯಾಸರ ಜ್ಞಾನ ಜ್ಯೋತಿಯನ್ನು ಭಕ್ತಿ ಪೂರ್ವಕವಾಗಿಯೂ, ಆಮೂಲಾಗ್ರವಾಗಿಯೂ ಇವರು ಬೆಳಗಿಸಿದ್ದಾರೆ.

(ಮುಗಿಯಿತು)

ಮಧ್ವಾಚಾರ್ಯರ ಸಿದ್ಧಾಂತ ದ್ವೈತವಾದ. ಸ್ವತಂತ್ರನಾದ ಬ್ರಹ್ಮ, ಪರತಂತ್ರಗಳಾದ ಜೀವ, ಜಡ ಈ ಎರಡೂ ಬೇರೆ ಬೇರೆ ತತ್ತ್ವಗಳೆಂಬುದು ಸಿದ್ಧಾಂತದ ಮೂಲ ಅಂಶ. ಇವುಗಳಲ್ಲಿ ಭೇದವನ್ನು ಪ್ರತಿಪಾದಿಸುವುದರಿಂದ ಇವರ ಸಿದ್ಧಾಂತಕ್ಕೆ ಭೇದವಾದವೆಂಬ ಹೆಸರೂ ಇದೆ. ಜೀವ–ಈಶ್ವರ, ಜೀವ–ಜೀವ, ಜಡ–ಜೀವ, ಜಡ–ಈಶ್ವರ, ಜಡ–ಜಡ ಎಂಬ ಪಂಚ ಭೇದಗಳು ನಿತ್ಯ ಸತ್ಯಗಳೆಂಬ ಪ್ರತಿಪಾದನೆಯನ್ನು, ಅದರಲ್ಲೂ ಬಹುಮುಖ್ಯವಾದ ಜೀವ–ಈಶ್ವರ ಭೇದವನ್ನು ಪ್ರತ್ಯಕ್ಷ, ಅನುಮಾನ ಮತ್ತು ಆಗಮ ಪ್ರಮಾಣಗಳಿಂದ ಪ್ರತಿಪಾದಿಸಿದ್ದಾರೆ. ಪ್ರಪಂಚ ಸತ್ಯ, ವಿಷ್ಣು ಸರ್ವೋತ್ತಮ, ದೇವ, ಜೀವ, ಜಡ ಎಲ್ಲದರಲ್ಲೂ ತರತಮತ್ವವಿದೆ ಎಂಬುದು ಈ ಸಿದ್ಧಾಂತದ ಇತರ ಮುಖ್ಯಾಂಶಗಳು.

— ಕರ್ನಾಟಕ, ಕನ್ನಡ ವಿಷಯ ವಿಶ್ವಕೋಶ
ಪುಟ – ೧೧೩

ಮೂಲ : ಪ್ರೊ. ಜಿ. ಸಿ. ವಿ. ಸುಬ್ಬರಾವ್
ಅನು : ಎನ್. ಎಸ್. ಶಾರದಾ ಪ್ರಸಾದ್

ಶಾಸನಗಳ ಯಥಾರ್ಥ ಭಾಷಾಂತರ *

ಭಾರತದ ಒಕ್ಕೂಟ ಮತ್ತು ವಿವಿಧ ರಾಜ್ಯಗಳು ಹಿಂದಿ ಮತ್ತು ಪ್ರಾದೇಶಿಕ ಭಾಷೆಗಳಲ್ಲಿ ಭಾರತದ ಇಡೀ ನ್ಯಾಯಸಂಹಿತೆಯ ಕ್ರೋಡೀಕರಣದ ಬೃಹತ್ಪ್ರಯತ್ನದಲ್ಲಿ ಈಗ ತೊಡಗಿವೆ. ಈ ಗುರುತರವಾದ ಕಾರ್ಯವನ್ನು ಕೇಂದ್ರದಲ್ಲಿ** ಅಧಿಕೃತ ಭಾಷಾ (ಶಾಸನ) ಆಯೋಗಕ್ಕೂ ಮತ್ತು ಕೆಲವು ರಾಜ್ಯಗಳಲ್ಲಿ ಅಂಥದೇ ಆಯೋಗಗಳಿಗೂ ವಹಿಸಲಾಗಿದೆ. ಗುಜರಾತ್ 1, ಕೇರಳ 2, ಮೈಸೂರು 3, ತಮಿಳುನಾಡು 4 ಮತ್ತು ಪಶ್ಚಿಮ ಬಂಗಾಳ 5 – ಇವು ಈಗಾಗಲೇ ಅಂಥ ಆಯೋಗಗಳನ್ನು ನೇಮಿಸಿವೆ. ಆಂಧ್ರ ಪ್ರದೇಶದಲ್ಲಿ 6 ಈಗ ಭಾಷಾಂತರ ಸಮಿತಿಯೊಂದು ಕಾರ್ಯನಿರ್ವಹಿಸುತ್ತಿದೆ ಮತ್ತು ಸರ್ವಾಂಗಪರಿಪೂರ್ಣವಾದ ಆಯೋಗವನ್ನು ಬೇಗನೆ ಸ್ಥಾಪಿಸುವ ನಿರೀಕ್ಷೆಯಿದೆ. ಅಸ್ಸಾಂನಲ್ಲಿ 7 ಅಧಿಕೃತ ಭಾಷಾ ಸಮಿತಿ ಇದೆ ; ಮಹಾರಾಷ್ಟ್ರದಲ್ಲಿ 8 ಭಾಷಾ ಸಲಹಾ ಮಂಡಳಿಯಿದೆ. ಉತ್ತರ ಪ್ರದೇಶ, ಮಧ್ಯ ಪ್ರದೇಶ ಮೊದಲಾದ ರಾಜ್ಯಗಳಲ್ಲಿ ಕಾನೂನು ಸಚಿವಾಲಯದಲ್ಲಿಯೇ ಪ್ರತ್ಯೇಕ ವಿಭಾಗಗಳಿಗೆ ಈ ಕಾರ್ಯವನ್ನು ವಹಿಸಲಾಗಿದೆ.

ಈ ಆಯೋಗಗಳ ಜಟಿಲ ಕಾರ್ಯವನ್ನು ಬ್ಯಾಬಿಂಗ್ಟನ್ ಮೆಕಾಲೆಯ (ಅನಂತರ ಲಾರ್ಡ್ ಮೆಕಾಲೆ) ಸ್ಫೂರ್ತಿದಾಯಕವಾದ ಮಾರ್ಗದರ್ಶನದಲ್ಲಿನ ಪ್ರಥಮ ಭಾರತೀಯ ಕಾನೂನು ಆಯೋಗದ ಕಾರ್ಯದೊಡನೆ ಹೋಲಿಸಬಹುದಾಗಿದೆ. ಪ್ರಥಮ ಕಾನೂನು ಆಯೋಗದ ಬಗ್ಗೆ ಉದ್ಧರಿಸುತ್ತ ಮದ್ರಾಸ್ ಬಾರಿನ ನಾರ್ಟನ್, ಅಲ್ಪಕಾಲದಲ್ಲಿಯೇ ಕಾನೂನು ಕಮಿಷನ್‌ಗಳ ವೇತನಾದಿಗಳು "ಭಾರತೀಯ ಜನತೆಗೆ ಪ್ರಾಮುಖ್ಯದ ಯಾವುದೇ ಸಂಹಿತೆಯನ್ನೂ ನೀಡದೆ ಒಟ್ಟು £ 170,000ಗಳ ಬೃಹತ್ ಮೊತ್ತವನ್ನು ಮೀರಿದ್ದವು" ಎಂದು ಅಭಿಪ್ರಾಯಪಟ್ಟಿದ್ದರು. ಈ ವಿಮರ್ಶಕರು ಗಮನಿಸದಿದ್ದ ಅಂಶವೆಂದರೆ ಕಮಿಷನುಗಳು ಶೀಘ್ರಗತಿಯಲ್ಲಿಯೇ ಕೆಲಸ ಮಾಡುತ್ತಿದ್ದು, ಅಮೂಲ್ಯ ಕಾರ್ಯ ನಿರ್ವಹಿಸಿದ್ದರೂ ಆಯೋಗದ ಕೆಲಸ ಮತ್ತು ವಿಧಿರೂಪದಲ್ಲಿ ಅದರ ಅಳವಡಿಕೆ-ಇವೆರಡರ ನಡುವೆ ಅನಿವಾರ್ಯವಾಗಿದ್ದ ಕಾಲವಿಳಂಬದಿಂದ ಸಾರ್ವಜನಿಕರಿಗೆ ತಿಳಿಯದಾಗಿದ್ದುದು. ಅಂಥವೇ ಪರಿಸ್ಥಿತಿಯಲ್ಲಿ ಪ್ರಸಕ್ತ ಕಾನೂನು ಆಯೋಗ ಮತ್ತು ಅಧಿಕೃತ

---

*ಮೂಲಲೇಖನ: The Supreme Court Journal, 1969, Vol.40, pp. 50-60

ಭಾಷಾ (ಶಾಸನ) ಆಯೋಗಗಳಂಥ ನಿಕಾಯಗಳಿದ್ದು, ಇವುಗಳ ಶ್ರಮದ ಫಲ ಸಾರ್ವಜನಿಕರ ಮೇಲೆ ತಮ್ಮ ಪ್ರಭಾವ ಬೀರಲು ಸ್ವಲ್ಪಕಾಲ ಅಗತ್ಯವೇ.

ಕೇಂದ್ರ ಅಧಿಕೃತ ಭಾಷಾ (ಶಾಸನ) ಆಯೋಗದ ಪ್ರಮುಖ ಕಾರ್ಯಗಳು :
(1) ಕಾನೂನಿನ ಕ್ಷೇತ್ರದಲ್ಲಿ ಏಕರೂಪ ಪರಿಭಾಷೆಯನ್ನು ರೂಪಿಸುವುದು, ಮತ್ತು
(2) ಕೇಂದ್ರ ಕಾನೂನುಗಳ ಯಥಾರ್ಥ ಪಾಠವನ್ನು, ಮೊದಲು ಹಿಂದಿಯಲ್ಲಿ, ಆನಂತರ ವಿವಿಧ ಪ್ರಾದೇಶಿಕ ಭಾಷೆಗಳಲ್ಲಿ ಒದಗಿಸುವುದು. ಅಧಿಕೃತ ಭಾಷೆಗಳ ಕಾಯ್ದೆಯ ಪ್ರಕರಣ (5) ಹಿಂದಿ ಪಾಠವನ್ನು ರಾಷ್ಟ್ರಪತಿ ಪ್ರಮಾಣೀಕರಿಸಬೇಕೆಂದು ಕಲ್ಪಿಸಿವೆ. ಪ್ರಾದೇಶಿಕ ಭಾಷೆಗಳಲ್ಲಿನ ಇಂಥ ಪಾಠಗಳಿಗೆ ಸಂಬಂಧಿಸಿದಂತೆ ಆ ಉಪಬಂಧವಿಲ್ಲದಿರುವುದು ಒಂದು ದೋಷವಾಗಿದ್ದು, ಇದನ್ನು ವಿಧಿಬದ್ಧ ತಿದ್ದುಪಡಿ (Statutory amendment) ಮೂಲಕ ನಿವಾರಿಸಲಾಗುವುದೆಂದು ನಿರೀಕ್ಷಿಸಲಾಗಿದೆ.

ಈಸ್ಟ್ ಇಂಡಿಯಾ ಕಂಪನಿಯ ಕಾಲದಲ್ಲಿಯೇ ಇಂಗ್ಲಿಷಿನಿಂದ ವಿವಿಧ ದೇಶ ಭಾಷೆಗಳಿಗೆ ಕಾನೂನುಗಳ ತರ್ಜುಮೆಯ ತೀವ್ರ ಗಮನವನ್ನು ಮನಗಾಣಲಾಗಿತ್ತು. ಪ್ರಥಮ ಭಾರತೀಯ ಕಾನೂನು ಆಯೋಗ ದಂಡಸಂಹಿತೆಯ (Penal Code) ಬಗ್ಗೆ ಪ್ರಥಮ ವರದಿಯಲ್ಲಿ ಗಮನಿಸಿರುವಂತೆ ಕರಡು ಭಾರತೀಯ ದಂಡಸಂಹಿತೆ ಸಂಪೂರ್ಣವಾಗಿ ಭಾಷಾಂತರಿಸಲಾಗದಂತೆ ಇತ್ತು. 'ಹಿಂದೂ ಪೇಟ್ರಿಯಟ್' ದಿನಾಂಕ 29-1-1857ರ ತನ್ನ ಸಂಚಿಕೆಯಲ್ಲಿ ದೂರಿದುದೇನೆಂದರೆ ; "ಸಂಹಿತೆಗಾರರು ತಮ್ಮ ಕಾರ್ಯದ ಬಗ್ಗೆ ಹೇಳಿಕೊಂಡ ಸರಳತೆ, ಪರಿಪೂರ್ಣತೆ ಮತ್ತು ಸಾರ್ವತ್ರಿಕ ಗ್ರಾಹ್ಯತೆಯ ಭರವಸೆಗಳು ಪ್ರಾಯೋಗಿಕ ಅನ್ವಯದ ಪರೀಕ್ಷೆಗೆ ಒಳಗಾದಾಗ ಸಂಪೂರ್ಣವಾಗಿ ವಿಫಲಗೊಂಡವು." ಕಾನೂನಿನಲ್ಲಿ ಬಳಸಲಾಗುವ ಇಂಗ್ಲಿಷಿಗೆ ತನ್ನದೇ ಆದ ನುಡಿನಡೆ ಮತ್ತು ವಾಕ್ಯರಚನಾ ವಿನ್ಯಾಸವಿದೆ ಎಂಬುದನ್ನು, ಕಾದಂಬರಿ, ನಾಟಕ ಅಥವಾ ವರ್ತಮಾನ ಪತ್ರಿಕೆಗಳಲ್ಲಿ ಬಳಸಲಾಗುವ ಇಂಗ್ಲಿಷಿನಲ್ಲಿ ಕಂಡುಬರುವ ಲಾಲಿತ್ಯ ಮತ್ತು ನಿರರ್ಗಳತೆಯನ್ನು ಅವುಗಳಲ್ಲಿ ಪಡೆಯಲಾಗುವುದಿಲ್ಲ ಎಂಬುದನ್ನು ಅದು ಮನಗಾಣಲಿಲ್ಲ. ಜೇಮ್ಸ್ ದೊರೆ ಕಕ್ಷಿಗಾರರ ಕಾನೂನಿನ ವಿವಾದಗಳನ್ನು ತಾನೇ ಇತ್ಯರ್ಥ ಮಾಡಲು ತೀರ್ಮಾನಿಸಿದಾಗ ಪ್ರಖ್ಯಾತ ಛೀಫ್ ಜಸ್ಟಿಸ್ ಕೋಕ್ ದೊರೆಗೆ ನಿಷ್ಫಲವಾಗಿ ಮನವಟ್ಟು ಮಾಡಿಕೊಡಬಯಸಿದ ಅಂಶವೂ ಇದೇ ಆಗಿತ್ತು:

> "I have often heard the boast that your English Law was founded upon reason. If that be so, why have I not reason as well as you, the Judges?"

ಜೇಮ್ಸ್ ದೊರೆ ಪ್ರಶ್ನಿಸಿದಾಗ ಕೋಕ್‌ರ ಉತ್ತರ ಹೀಗಿತ್ತು :

> "God has bestowed upon your Majesty great endowments of nature, but your Majesty is not

learned in the laws of the realm for *Law is an art, which requires long study.*"

ವಾಸ್ತವವಾಗಿ ಇಂಗ್ಲೆಂಡಿನಲ್ಲಿಯೂ ಕಾನೂನನ್ನು ತನ್ನ ಅಧ್ಯಯನದ ವಿಶೇಷ ಕ್ಷೇತ್ರವನ್ನಾಗಿ ಮಾಡಿಕೊಳ್ಳದ ವ್ಯಕ್ತಿಗೆ ಇಂಗ್ಲಿಷ್ ಭಾಷೆಯಲ್ಲಿನ ಅತ್ಯಂತ ಸರಳ ಕಾನೂನುಗಳ ಉಪಬಂಧಗಳನ್ನು (Provisions) ಗ್ರಹಿಸಿ, ಅರ್ಥೈಸುವುದು ಕಷ್ಟಕರ ವಾಗುತ್ತದೆ. ಹಲವು ಶತಮಾನಗಳಿಂದ ನ್ಯಾಯಾಲಯಗಳಲ್ಲಿ ಬಳಕೆಯಲ್ಲಿರುವ ಮತ್ತು ಅಸಂಖ್ಯಾತ ಕಟ್ಟಳೆಗಳಲ್ಲಿ ಕಾನೂನಿನ ಅಭಿವ್ಯಕ್ತಿಯ ಮಾಧ್ಯಮವಾಗಿ ನಿರಂತರವಾಗಿ ಸೇವೆ ಸಲ್ಲಿಸಿರುವ ಇಂಗ್ಲಿಷ್ ಭಾಷೆಯಲ್ಲಿಯೇ ಈ ಪರಿಸ್ಥಿತಿ ಇದ್ದಲ್ಲಿ, ನ್ಯಾಯ ಪರಿ ಪಾಲನೆಯ ಜಟಿಲ ಉದ್ದೇಶ ಸಾಧನೆಗಾಗಿ ಈಗ ತಾನೇ ರೂಪುಗೊಳ್ಳುತ್ತಿರುವ ಹಿಂದಿ ಅಥವಾ ಇತರ ಯಾವುದೇ ಪ್ರಾದೇಶಿಕ ಭಾಷೆಯ ಪಾಡೇನು ?

(2)

ಶಾಸನ ಅಧಿನಿಯಮಗಳ ಯಥಾರ್ಥ ಪಾಠಗಳನ್ನು ಸಿದ್ಧಪಡಿಸುವಲ್ಲಿ ನಮಗೆ ಎದುರಾಗುತ್ತಿರುವ ಸಮಸ್ಯೆಗಳು ಈಸ್ಟ್ ಇಂಡಿಯ ಕಂಪನಿಯ ಆಡಳಿತಗಾರರು ಎದುರಿ ಸುತ್ತಿದ್ದಂತೆಯೇ ಇವೆ. ಭಾರತ ತನ್ನ ಇತಿಹಾಸದಲ್ಲಿ ಮಧ್ಯಯುಗದಿಂದ ಆಧುನಿಕ ಯುಗಕ್ಕೆ ಸಂಕ್ರಮಣಗೊಳ್ಳುತ್ತಿದ್ದಂಥ ತೀವ್ರ ಯಾತನೆಗೆ ಸಿಲುಕಿತ್ತು. ಮೊಗಲರ ನ್ಯಾಯಾಲಯಗಳ ಭಾಷೆ ಪರ್ಷಿಯನ್‌ಅನ್ನು ತ್ಯಜಿಸಿ ಅದರ ಸ್ಥಾನದಲ್ಲಿ ಇಂಗ್ಲಿಷನ್ನು ಕಾನೂನಿನ ಮಾಧ್ಯಮವಾಗಿ, ನ್ಯಾಯಾಲಯದ ನಡೆವಳಿಗಳಲ್ಲಿ ಬಳಕೆಗಾಗಿ ಕ್ರಮೇಣ ಅಂಗೀಕರಿಸಿ, ಬಳಕೆಗೆ ತರಬೇಕಾಗಿತ್ತು. ಈಗ ಇಂಗ್ಲಿಷನ್ನು ಹಿಂದಿ ಮತ್ತು ಪ್ರಾದೇಶಿಕ ಭಾಷೆಗಳಿಂದ ಕ್ರಮೇಣ ಕೆಳಗೆ ತಳ್ಳುವಂಥ ಅಂಥದೇ ಸಂಕ್ರಮಣ ಸ್ಥಿತಿಯ ಪ್ರಾರಂಭದ ಹಂತದಲ್ಲಿ ಇದ್ದೇವೆ.

ಈಸ್ಟ್ ಇಂಡಿಯ ಕಂಪನಿಯ ಕೋರಿಕೆಯ ಮೇರೆಗೆ ಪೌರಸ್ತ್ಯ ಭಾಷೆಗಳಿಂದ ಇಂಗ್ಲಿಷಿಗೆ ಭಾಷಾಂತರ ಕಾರ್ಯವನ್ನು ಕೈಗೊಂಡ ಕೋಲ್‌ಬ್ರೂಕ್, ಸರ್ ವಿಲಿಯಂ ಜೋನ್ಸ್, ಹ್ಯಾಮಿಲ್ಟನ್, ಬೇಲಿ ಮತ್ತಿತರ ವಿದ್ವಾಂಸರ ಸಂಸ್ಕೃತ ಗ್ರಂಥಗಳ ಮತ್ತು ಪರ್ಷಿಯನ್ ಹಾಗೂ ಅರ್ಯಾಬಿಕ್ ಕಾನೂನು ಕೃತಿಗಳ ಭಾಷಾಂತರದಿಂದ ಉದ್ಭವಿಸಿದ ತೊಂದರೆಗಳ ಬಗ್ಗೆ ಪರಿಶೀಲಿಸುವುದು ಕುತೂಹಲದ ವಿಷಯವಾಗುತ್ತದೆ : ನಿವಾರಿಸ ಬೇಕಾದ ಅಪಾಯಗಳನ್ನು ತೋರುತ್ತವೆ ; ಅಂಥ ಜಟಿಲತೆಗಳ ನಿವಾರಣೆಗಾಗಿ ಅನುಸರಿ ಸಬೇಕಾದ ತತ್ತ್ವಗಳನ್ನು ಅವು ಸ್ಪಷ್ಟಪಡಿಸುತ್ತವೆ. ಸುಪ್ರಸಿದ್ಧ ನ್ಯಾಯಾಧೀಶರು ಕಲಾಕೌಶಲವಿಲ್ಲದ ಮತ್ತು ತಪ್ಪು ಹಾದಿಗೆಳೆಯುವ ಭಾಷಾಂತರಗಳೆಂದು ಪರಿಗಣಿಸಿರು ವುದಕ್ಕೆ ಅವು ನಿದರ್ಶನಗಳಾಗಿ ಪರಿಣಮಿಸುತ್ತವೆ ; ಕಕ್ಷಿಗಾರರಿಗೆ ಸಂಬಂಧಿಸಿದಂತೆ ಅವ ಲಂಬಿಸಬಹುದಾದ ಹಾಗೂ ನಿಷ್ಕೃಷ್ಟವಾಗಿ ರೂಪಿಸಿರುವ ಮತ್ತು ಮೂಲಕ್ಕೆ ಪೂರ್ಣ ವಾಗಿ ವಿಧೇಯವಾಗಿರುವ ಯಥಾರ್ಥ ಭಾಷಾಂತರಗಳನ್ನು ಪಡೆಯುವುದರ ಮಹತ್ತ್ವವನ್ನು

ತಿಳಿಸುತ್ತದೆ. ಈ ಕಾನೂನುಗಳು ಕಕ್ಷಿಗಾರರ ಅಮೂಲ್ಯ ಹಕ್ಕುಗಳು, ಸೌಲಭ್ಯಗಳು, ಕರ್ತವ್ಯಗಳು, ಸ್ವಾತಂತ್ರ್ಯ, ಬಾಧ್ಯತೆಗಳು, ಕಟ್ಟುಪಾಡುಗಳು ಅಥವಾ ನ್ಯಾಯ ಸಂಬಂಧವಾದ ಇತರ ಆಸಕ್ತಿಗಳ ವಾಸ್ತವವಾದ ಭಂಡಾರಗಳಾಗಿರುತ್ತವೆ.

(3)

ಪದಗಳು ಮತ್ತು ಪರಿಕಲ್ಪನೆಗಳ ಹೊಂದಿಕೆ : ಪ್ರಾಚೀನ ಭಾರತೀಯ ನ್ಯಾಯ ಶಾಸ್ತ್ರ ಕೋಪಿದರ ಮೀಮಾಂಸಾ ಶಾಸ್ತ್ರದಲ್ಲಿ ಸರ್ವರಿಣಾಮಕಾರಿ ತತ್ತ್ವವೊಂದಿದೆ– "ಸಕೃತ್ ಉಚ್ಚರಿತಶಬ್ದಃ ಸಕೃತ್ ಏವ ಅರ್ಥಂ ಗಮ್ಯತೇ". ಒಂದು ಸಲ ಹೇಳಿದ ಒಂದು ಶಬ್ದಕ್ಕೆ ಒಂದೇ ಒಂದು ಅರ್ಥವಿರುವುದು. ಶಾಸನ ರಚನೆಯಲ್ಲಿ ಸಾಧಿಸ ಬೇಕಾದ ಧ್ಯೇಯ ಇದೇ ಆಗಿದೆ. ನ್ಯಾಯಾಲಯಗಳು ಅನುಸರಿಸುವ ಅರ್ಥೈಸು ವಿಕೆಯ ಸುವರ್ಣ ನಿಯಮವೆಂದರೆ ಸೂತ್ರಾನುಸಾರ ರಚನೆಯ ನಿಯಮವಾಗಿದೆ (Rule of Grammatical Construction). ಶಾಸನದ ಪ್ರತಿಯೊಂದು ಪದವನ್ನು ಶಾಸನದಂತೆ ನಿರ್ಧರವಾದ ಅರ್ಥವನ್ನು ಪಡೆಯಲು ಅದರ ಸಾಧಾರಣ ವ್ಯಾಕರಣಾತ್ಮಕ ಅರ್ಥವನ್ವಯ ಅನ್ವಯವಾದಬೇಕು – ಎಂಬುದು ಇದರಿಂದ ಅರ್ಥ ವಾಗುತ್ತದೆ. ಒಂದು ಪದ ಸಂದಿಗ್ಧವಾಗಿದ್ದಾಗ (ambiguous) ಎಂದರೆ ಒಂದ ಕ್ಕಿಂತ ಹೆಚ್ಚು ಅರ್ಥಗಳಿಂದ ಕೂಡಿದ್ದಲ್ಲಿ, ಈ ನಿಯಮ ತಪ್ಪಾಗುತ್ತದೆ. ಅಂಥ ಪದದ ಬಳಕೆಯನ್ನು ಶಾಸನ ರಚನೆಯಲ್ಲಿನ ದೋಷವೆಂದು ಪರಿಗಣಿಸಲಾಗಿದೆ. ನ್ಯಾಯಾಲಯ ಗಳು ಅದನ್ನು ತರ್ಕಸೂತ್ರಬದ್ಧವಾಗಿ ಅರ್ಥೈಸುವಿಕೆ ನಿಯಮ (Rule of Logical Interpretation) ಎಂದು ಕರೆಯುವ ವಿಧಾನದಿಂದ ಪರಿಹರಿಸಬಹುದು. ಕರಡುಗಾರ (Draftsman) ಆಯ್ಕೆ ಮಾಡಿಕೊಳ್ಳುವ ಪದಗಳಲ್ಲಿ ಪ್ರತಿಯೊಂದೂ ಒಂದೇ ಒಂದು ಅರ್ಥವನ್ನು ನೀಡುವಂತಿದ್ದಾಗ ತರ್ಕಸೂತ್ರಬದ್ಧವಾದ ಅರ್ಥೈಸುವಿಕೆ ಕ್ರಮವನ್ನು ನಿವಾರಿಸಿ, ಸೂತ್ರಾನುಸಾರ ರಚನೆಯ ಸ್ವರ್ಣನಿಯಮವನ್ನು ಸುಲಭವಾಗಿ ಅನ್ವಯಿಸಬಹುದು. ಹಾಗಾಗಿ, ಯಥಾರ್ಥ ಭಾಷಾಂತರವನ್ನು ಸಿದ್ಧಪಡಿಸುವ ಕಾರ್ಯ ವನ್ನು ಕೈಗೊಂಡಾಗ ಒಂದು ಶಾಸನ ಪರಿಕಲ್ಪನೆಯನ್ನು ಒಂದು ಪದದಿಂದ ಪ್ರತಿನಿಧಿಸ ಬೇಕು ಮತ್ತು ಅದೇ ಭಾಷಾಂತರದಲ್ಲಿ ಆ ಪದವನ್ನು ಆ ಶಾಸನ ಪರಿಕಲ್ಪನೆಯನ್ನು ಸೂಚಿಸಬೇಕಾದ ಎಲ್ಲೆಡೆಗಳಲ್ಲಿಯೂ ಬಳಸುವ ಬಗ್ಗೆ ಎಚ್ಚರಿಕೆ ವಹಿಸಬೇಕು.

ಶ್ರೀ ಬಾಲುಸು ವಿ. ಶ್ರೀ ಬಾಲುಸು[9] ಪ್ರಕರಣದಲ್ಲಿ ಪ್ರೀವಿಕೌನ್ಸಿಲಿನ ತೀರ್ಪಿ ನಿಂದ ಈ ತತ್ತ್ವದ ಪ್ರಾಮುಖ್ಯ ತಿಳಿಯುತ್ತದೆ. ಆ ಪ್ರಕರಣದಲ್ಲಿ ಏಕೈಕ ಪುತ್ರನನ್ನು ಕಾನೂನುಸಮ್ಮತವಾಗಿ ದತ್ತು ನೀಡಬಹುದೇ ಎಂಬುದೇ ಪ್ರಶ್ನೆಯಾಗಿತ್ತು. ಯಾಜ್ಞ ವಲ್ಕ್ಯ ಸ್ಮೃತಿಯ ವ್ಯಾಖ್ಯಾನ ವಿಜ್ಞಾನೇಶ್ವರನ 'ಮಿತಾಕ್ಷರಿ'ಯಲ್ಲಿ ಈ ಮುಂದಣ ಪಾಠವಿದೆ :

"ಏಕಃ ಪುತ್ರೋ ನ ದೇಯಃ, ಜ್ಯೇಷ್ಠ ಪುತ್ರೋ ನ ದೇಯಃ"

ಕೋಲ್‌ಬ್ರೂಕ್‌ನ ಭಾಷಾಂತರ :

An only son *must* not be given in adoption.
The eldest son *should* not be given in adoption.

(ಏಕೈಕ ಪುತ್ರನನ್ನು ದತ್ತಕಕ್ಕೆ **ಕೊಡಲೇಕೂಡದು** ; ಜ್ಯೇಷ್ಠಪುತ್ರನನ್ನು ದತ್ತಕಕ್ಕೆ **ಕೊಡಕೂಡದು.**) ನ ದೇಯಃ ಎಂಬುದನ್ನು ಒಂದು ಭಾಗದಲ್ಲಿ *must* not be given ಎಂದೂ, ಮತ್ತೊಂದು ಭಾಗದಲ್ಲಿ *should* not be given (**ಕೊಡ ಕೂಡದು**) ಎಂದೂ ಭಾಷಾಂತರಿಸಲಾಗಿತ್ತು. ಶ್ರೀಸಾಮಾನ್ಯನಿಗೆ ಈ ಪದ ಪ್ರಯೋಗ ಗಳಿಂದ ಹೆಚ್ಚಿನ ವ್ಯತ್ಯಾಸವಾದಂತೆ ತೋರುವುದಿಲ್ಲ. ಈ ರೀತಿ ಭಾಷಾಂತರಗೊಂಡಿರು ವುದನ್ನು ಗಮನಿಸಿದ ಬೇರೆ ಬೇರೆ ಹೈಕೋರ್ಟುಗಳಿಂದಾಗಿ ಬೊಂಬಾಯಿ ಹೈಕೋರ್ಟಿನಲ್ಲಿ ಈ ಮುಂದಿನ ವ್ಯಾಖ್ಯೆ ಹೊರಬಂದಿತು. *Must* not be given ಎಂಬುದು *should* not be given ಎಂಬುದಕ್ಕಿಂತ ಹೆಚ್ಚು ಪ್ರಭಾವಯುತವಾಗಿದೆ. ಅದರಿಂದ ಪ್ರತಿಬಂಧಕಾಜ್ಞೆ. ಆಜ್ಞಾಪಕವಾಗಿರುವುದು (mandatory) ; ಅದೇ *should* not be given (ಕೊಡಕೂಡದು) ಎಂಬುದು ಕೇವಲ ಗ್ರಾಹ್ಯ ಅಥವಾ ಸಲಹಾತ್ಮಕ ಮಾತ್ರವಾಗುವುದು ಎಂಬ ಅರ್ಥ ಬರುತ್ತದೆ. ಆಜ್ಞಾಪಕ ನಿಷೇಧದ ಉಲ್ಲಂಘನೆ ಆ ಕಾರ್ಯವನ್ನೇ ಅನೂರ್ಜಿತಗೊಳಿಸುತ್ತದೆ ; ಅದೇ ಸಲಹಾತ್ಮಕ ಪಾಠದ ಉಲ್ಲಂಘನೆ – ಅದನ್ನು ನೈತಿಕ ದೃಷ್ಟಿಕೋನದಿಂದ ಸಮರ್ಥಿಸಲಾಗದಿರಬಹುದಾದರೂ – ಆ ಕಾರ್ಯ ವನ್ನು ಅನೂರ್ಜಿತಗೊಳಿಸುವುದಿಲ್ಲ. ಪ್ರೀವಿ ಕೌನ್ಸಿಲಿನ ನ್ಯಾಯಮೂರ್ತಿಗಳು ಈ ಸಮಸ್ಯೆ ಪರಿಹರಿಸಬೇಕಿತ್ತು ಹಾಗೂ ಈ ವಿಷಯದಲ್ಲಿ ನ್ಯಾಯಾಭಿಪ್ರಾಯದ ಸಮಸ್ಯೆಯನ್ನು ಇತ್ಯರ್ಥಪಡಿಸಬೇಕಿತ್ತು. ಮಾನ್ಯ ನ್ಯಾಯಾಧೀಶರಿಗೆ ಸಂಸ್ಕೃತದಲ್ಲಿ ಅಷ್ಟಾಗಿ ಪರಿಜ್ಞಾನ ವಿಲ್ಲದಿದ್ದುದರಿಂದ ಅವರು ಮೂಲಪಾಠಕ್ಕೆ ಭಿನ್ನ ಭಾಷಾಂತರಗಳ ಸಮರ್ಥನೆಯಿದೆಯೇ ಎಂಬ ಬಗ್ಗೆ, ಅಂದು ಲಭ್ಯವಿದ್ದ ಸಂಸ್ಕೃತದ ಮಹಾನ್ ಪಾಶ್ಚಾತ್ಯ ಪಂಡಿತ ಮ್ಯಾಕ್ಸ್ ಮುಲ್ಲರ್ ಅವರೊಡನೆ ಸಮಾಲೋಚಿಸಿದರು. ಎರಡು ಭಾಗಗಳಲ್ಲಿಯೂ "ನ ದೇಯಃ" ಎಂಬುದೇ ಇರುವುದರಿಂದ ಅದರ ಅರ್ಥವನ್ನು ಎರಡು ಪ್ರಸಂಗಗಳಲ್ಲೂ ಒಂದೇ ರೀತಿಯಲ್ಲಿ ಅಭಿವ್ಯಕ್ತಗೊಳಿಸಬೇಕು ಎಂಬುದು ತಮ್ಮ ಅಭಿಪ್ರಾಯವೆಂದು ಮ್ಯಾಕ್ಸ್ ಮುಲ್ಲರ್ ಸೂಚಿಸಿದರು. ಈ ಅಭಿಪ್ರಾಯದಿಂದಾಗಿ, ಒಂದೇ ಪರಿಕಲ್ಪನೆಗೆ ಭಾಷಾಂತರಕಾರ ಬೇರೆ ಬೇರೆ ಪದಗಳನ್ನು ಬಳಸಿರುವುದರಿಂದ ಬೊಂಬಾಯಿ ಹೈಕೋರ್ಟು ತಪ್ಪು ಗ್ರಹಿಸಿದೆ ಎಂದು ಪ್ರೀವಿ ಕೌನ್ಸಿಲ್ ತೀರ್ಮಾನಕ್ಕೆ ಬಂದಿತು. ಎರಡೂ ಪಾಠಗಳಲ್ಲಿ ನಿರ್ದೇಶನವು ಕೇವಲ ಸಲಹಾತ್ಮಕ ಅಥವಾ ಗ್ರಾಹ್ಯಾತ್ಮಕವೇ ವಿನಾ ಆಜ್ಞಾಪಕವಲ್ಲ ಎಂದು ಅವರು ತೀರ್ಮಾನಿಸಿದರು. ಹಾಗಾಗಿ ಏಕೈಕ ಪುತ್ರನ ದತ್ತಕವನ್ನು ಪ್ರೀವಿ ಕೌನ್ಸಿಲ್ ಊರ್ಜಿತಗೊಳಿಸಿತು.

ಶ್ರೀ ಬಾಲುಸು 2 ಪ್ರಕರಣದಲ್ಲಿ ಪ್ರೀವಿ ಕೌನ್ಸಿಲಿನ ತೀರ್ಮಾನವು ಒಂದು ಕಾನೂನು ಪರಿಕಲ್ಪನೆಗೆ ಒಂದು ಪದ–ಸಂಕೇತದ ನಿಯಮದಿಂದ ಕೇವಲ ಅಲಂಕಾರದ ದೃಷ್ಟಿಯಿಂದಲೂ ದೂರ ಸರಿಯುವುದಕ್ಕೆ ಅವಕಾಶವಿಲ್ಲ ಎಂಬ ಎಚ್ಚರಿಕೆಯನ್ನು ನೀಡುತ್ತದೆ. ಕೋಲ್‌ಬ್ರೂಕ್‌ರಂಥ ಎಚ್ಚರಿಕೆಯ ಭಾಷಾಂತರಕಾರರು ಸಹ ತುಸು ಬೇಹುಷಾರಿನಿಂದ ಈ ನಿಯಮವನ್ನು ಉಲ್ಲಂಘಿಸಿದ್ದರು ಮತ್ತು ಪ್ರತಿಕೂಲ ಟೀಕೆಗೆ ಗುರಿಯಾದರು.

ಈ ತತ್ತ್ವದ ವಿಶದೀಕರಣದಿಂದ, ಆಂಧ್ರ ಪ್ರದೇಶ ಸರ್ಕಾರ ಈಚೆಗೆ ಕಾನೂನು ಶಬ್ದಾವಳಿ ಮತ್ತು ಯಥಾರ್ಥ ಪಾಠಗಳ ವಿಷಯಕ್ಕೆ ಸಂಬಂಧಿಸಿದಂತೆ ಪ್ರಕಟಿಸಿದ ಶ್ವೇತಪತ್ರದ ಬಗ್ಗೆ 'ಡೈಲಿ ಪ್ರೆಸ್'ನಲ್ಲಿ ಪ್ರಕಟವಾದ ಟೀಕೆಯು ಅನುಚಿತವಾಗಿರುವಂತೆ ತೋರುತ್ತದೆ. ಭಾಷಾಶಾಸ್ತ್ರದ ಖ್ಯಾತ ಪ್ರಾಧ್ಯಾಪಕರೊಬ್ಬರು ವಿಮರ್ಶಾತ್ಮಕ ಲೇಖನವೊಂದರಲ್ಲಿ State ಎಂಬ ಪದವನ್ನು ತೆಲುಗಿನಲ್ಲಿ "ರಾಷ್ಟ್ರಮು" ಎಂದು ಭಾಷಾಂತರಿಸಲಾಗುತ್ತಿದೆ ಮತ್ತು ಭಾರತ ಒಕ್ಕೂಟದಲ್ಲಿನ ಪ್ರಾದೇಶಿಕ ಘಟಕಗಳ ಪರಿಕಲ್ಪನೆಯನ್ನು ಅಭಿವ್ಯಕ್ತಿಗೊಳಿಸಲು "ರಾಜ್ಯಮು" ಎಂಬ ಪದವನ್ನು ಬಳಸುವಲ್ಲಿ ಯಾವ ಸಮರ್ಥನೆಯೂ ಇಲ್ಲವೆಂದು ಅಭಿಪ್ರಾಯಪಟ್ಟಿರುವರು. ಈ ಮೇಲಿನ ಚರ್ಚೆಯಿಂದ "ರಾಜ್ಯಮು" ಎಂಬ ಪದದ ಬಳಕೆಗೆ ಸಮರ್ಥನೆಯು ಸ್ಪಷ್ಟವಾಗುತ್ತದೆ. ಮೊದಲಿಗೆ ಭಾರತದ ಪ್ರಾದೇಶಿಕ ಘಟಕಗಳನ್ನು ಭಾರತ ಸರ್ಕಾರ ಕಾಯ್ದೆ 1935ರ ಪ್ರಕಾರ ಪ್ರಾಂತಗಳು (Provinces) ಎಂದು ಕರೆಯಲಾಗುತ್ತಿತ್ತು. Province ಎಂಬುದನ್ನು ತೆಲುಗಿನಲ್ಲಿ "ರಾಷ್ಟ್ರಮು" ಎಂದು ಭಾಷಾಂತರಿಸಲಾಗುತ್ತಿತ್ತು. ಪ್ರಸಕ್ತ ಸಂವಿಧಾನ ಕಾರ್ಯಾಚರಣೆಯಲ್ಲಿ ಬಂದ ನಂತರವೂ ತೆಲುಗು ಪತ್ರಿಕೋದ್ಯಮದಲ್ಲಿ ಅದೇ ರೀತಿಯ ಬಳಕೆಯು ಮುಂದುವರಿದಿದೆ. ಆದರೆ ಸಂವಿಧಾನವು ಸಂಘ (ಒಕ್ಕೂಟ)ದ ಪ್ರಾದೇಶಿಕ ಘಟಕಗಳನ್ನು Province ಎಂಬುದನ್ನು ಕೈ ಬಿಟ್ಟು States ಎಂದು ಹೆಸರಿಸಿದೆ. ಸಂಘವು ಫೆಡರಲ್ ಸಂಘವಾಗಿದ್ದು ಇವರ ಘಟಕಗಳನ್ನು ಸಾಮಾನ್ಯವಾಗಿ States ಎಂದು ಕರೆಯಲಾಗಿದೆ. ಯಾವುದೇ ಕಾರಣದಿಂದ ಫೆಡರಲ್ ಕೇಂದ್ರಕ್ಕೂ ಅವಕ್ಕೂ ಸಂಬಂಧ ಕಡಿದುಹೋಗಿ ಅವುಗಳ ಸ್ವಾತಂತ್ರ್ಯಕ್ಕೆ ಅಂತರರಾಷ್ಟ್ರೀಯ ಮಾನ್ಯತೆ ಲಭಿಸಿದಲ್ಲಿ ಅವು ಅಂತರರಾಷ್ಟ್ರೀಯ ಮಟ್ಟದಲ್ಲಿ ಅದೇ ತೆರನಾಗಿ ಕಾರ್ಯನಿರ್ವಹಿಸಬಲ್ಲವು ಎಂಬುದನ್ನು ಇದು ಸೂಚಿಸುತ್ತದೆ. ಅಷ್ಟೇ ಅಲ್ಲದೆ, ಭಾರತ ಸರ್ಕಾರದ ಕಾಯ್ದೆ, 1935ರಲ್ಲಿ ಬಳಸಲಾಗಿರುವ ಅರ್ಥದಲ್ಲಿ Province ಪದವನ್ನು ಪ್ರಸಕ್ತ ಸಂವಿಧಾನದಲ್ಲಿ ಬಳಸಲಾಗಿರುವ State ಎಂಬ ಪದದ ಜೊತೆ ಜೊತೆಯಾಗಿ ಬಳಸಲಾಗಿರುವ ಹಲವಾರು ಅನುಚ್ಛೇದಗಳು (Articles) ಇವೆ. ಅಂಥ ಒಂದು ಅನುಚ್ಛೇದವನ್ನು ಭಾಷಾಂತರಿಸುವಾಗ Province ಮತ್ತು State ಇವೆರಡನ್ನೂ "ರಾಷ್ಟ್ರಮು" ಎಂದು ಭಾಷಾಂತರಿಸಿದರೆ ತುಂಬ ಗೊಂದಲಕ್ಕೆ ಕಾರಣವಾಗುತ್ತದೆ. ಹಾಗಾಗಿ State ಎಂಬುದನ್ನು ಸೂಚಿಸಲು ಪ್ರತ್ಯೇಕ ಪದದ ಅಗತ್ಯವಿದೆ ; ಇದನ್ನು ಒಪ್ಪಿಕೊಂಡಲ್ಲಿ "ರಾಜ್ಯಮು" ಎಂಬ ಪದ ಬಳಸಲು ತೀವ್ರತರ ಆಕ್ಷೇಪವಿರುವುದಿಲ್ಲ. ಅಷ್ಟೇ ಅಲ್ಲದೆ State ಎಂಬುದಕ್ಕೆ

"ರಾಷ್ಟ್ರಮು" ಎಂಬುದನ್ನು ಬಳಸಿದಲ್ಲಿ "ರಾಷ್ಟ್ರಪತಿ" ಎಂಬುದು ರಾಜ್ಯದ ಗವರ್ನರ್‌ಗೆ ಅನ್ವಯವಾಗುತ್ತದೆ. ಅದೇ The Daily Pressನಲ್ಲಿ ಈ ಪದವನ್ನೇ ಭಾರತದ "ಅಧ್ಯಕ್ಷ"ರಿಗೂ ನಿರಂತರವಾಗಿ ಬಳಸಲಾಗುತ್ತದೆ ; State ಎಂಬುದನ್ನು ಸೂಚಿಸಲು "ರಾಷ್ಟ್ರಮು" ಎಂಬುದಾಗಿ, ಅಧ್ಯಕ್ಷನನ್ನು ಸೂಚಿಸಲು "ರಾಷ್ಟ್ರಪತಿ"ಎಂಬುದಾಗಿ ತೆಲುಗು ವೃತ್ತಪತ್ರಿಕೆಗಳಲ್ಲಿ ಬಳಸುತ್ತಿರುವ ಮಟ್ಟಿಗೆ ಯಾವುದೇ ಆಕ್ಷೇಪವಿಲ್ಲ ; ಪ್ರಸಂಗಾನುಸಾರ ಅದನ್ನು ಸರಿಯಾಗಿ ಅರ್ಥಮಾಡಿಕೊಳ್ಳಬಹುದು. ಆದಾಗ್ಯೂ ಶಾಸನ ರಚನೆಯ ಕಾರ್ಯದಲ್ಲಿ ಇರುವ ತತ್ತ್ವವೇನೆಂದರೆ, ಉದ್ದೇಶಪೂರ್ವಕವಾಗಿ ಹಾನಿಮಾಡಬೇಕೆಂದು ಬಯಸುವ ವ್ಯಕ್ತಿಗೆ ಸಹ, ಉಪಯೋಗಿಸಲಾಗಿರುವ ಪದವು ಕರಡುಗಾರ ಆ ಅರ್ಥ ನೀಡ ಬಾರದೆಂದು ಭಾವಿಸಿರುವ ಅರ್ಥವನ್ನು ನೀಡುವಂತಿರಬಾರದೆಂಬುದಾಗಿದೆ. ಸಂದರ್ಭಾ-ನುಸಾರ ಅರ್ಥವನ್ನು ಗ್ರಹಿಸುವ ಅವಕಾಶವನ್ನು ಸಾಧ್ಯವಾದಷ್ಟು ಕಡಮೆ ಮಾಡಬೇಕು ಎಂಬುದು ಈ ತತ್ತ್ವದ ಅಗತ್ಯತೆಯಾಗುತ್ತದೆ. ಸಂದರ್ಭದಿಂದ ಉದ್ದೇಶವನ್ನು ಗ್ರಹಿಸುವುದರ ಸಮಂಜಸತೆಯನ್ನು ಮೀಮಾಂಸಾಶಾಸ್ತ್ರ "ಸಂಯೋಗಾನುಸಾರೇಣ ವ್ಯವಸ್ಥಿತವ್ಯ ಅಧಿಕರಣಂ" (according to the context the meaning is to be gathered – ಸಂದರ್ಭಾನುಸಾರ ಅರ್ಥವನ್ನು ಗ್ರಹಿಸಬೇಕು - ಜೈಮಿನಿ, ಭಾಗ 2ರ ಅಧ್ಯಾಯ 1ರ 2ನೇ ಅಧಿಕರಣ) ಎಂದು ಒಪ್ಪಿದೆ. ಹಾಗೆ ಮಾಡುವುದು ಸಾಧ್ಯವಿದ್ದಾಗ ಕರಡುಗಾರ, ಸಂದರ್ಭದ ಬಗ್ಗೆ ವಿಚಾರಣೆಯನ್ನು ಅವಲಂಬಿಸುವುದನ್ನು ತಪ್ಪಿಸಲು ಪ್ರಜ್ಞಾಪೂರ್ವಕ ಪ್ರಯತ್ನ ಮಾಡಬಾರದೆಂದಲ್ಲ. ಸಂದರ್ಭದ ಬಗ್ಗೆ ಪರಿಶೀಲಿಸುವ ಮೀಮಾಂಸಾ ಸೂತ್ರವು, ಆಧುನಿಕ ರೀತಿಯಲ್ಲಿ ಹೇಳುವುದಾದರೆ, ತರ್ಕಸೂತ್ರಬದ್ಧವಾದ ವ್ಯಾಖ್ಯೆಯ ನಿಯಮದ ಅನ್ವಯ ಮಾತ್ರವೇ ಆಗಿದೆ. ಈಗಾಗಲೇ ವಿವರಿಸಿರುವಂತೆ, ನ್ಯಾಯಾಲಯಗಳು ತರ್ಕಸೂತ್ರಬದ್ಧವಾದ ವ್ಯಾಖ್ಯೆಯನ್ನು ಅವಲಂಬಿಸುವುದನ್ನು ಕರಡುಗಾರತ್ವದ ದೋಷಗಳನ್ನು ನಿವಾರಿಸುವ ಪರಿಹಾರ ಕ್ರಮಗಳು ಎಂದು ಪರಿಗಣಿಸಲಾಗಿದೆ.

ಒಂದು ಪದಚಿಹ್ನೆಯು ಒಂದೇ ಒಂದು ಕಾನೂನು ಪರಿಕಲ್ಪನೆಗೆ ಸಂವಾದಿಯಾಗಿರಬೇಕು ಎಂಬ ನಿಯಮಕ್ಕೆ ಪರಿಣಾಮವೆಂಬಂತೆ ಒಂದೇ ಪದವನ್ನು ಬೇರೆ ಬೇರೆ ಕಾನೂನು ಪರಿಕಲ್ಪನೆಗಳನ್ನು ಸೂಚಿಸಲು ಬಳಸಕೂಡದು ಎಂದು ಹೇಳಿದಂತಾಗುತ್ತದೆ. ಕೆಲವೊಮ್ಮೆ ಪರಸ್ಪರ ಆವರಿಸುವ ಕಾನೂನು ಪರಿಕಲ್ಪನೆಗಳ ನಡುವೆ ವ್ಯತ್ಯಾಸದ ಅತ್ಯಲ್ಪ ಛಾಯೆ ಮಾತ್ರವಿರಬಹುದು ; ಆದರೂ ಸಂದಿಗ್ಧತೆಯನ್ನು ನಿವಾರಿಸುವ ಸಲುವಾಗಿ ಅಂಥ ಸರಿಸುಮಾರು ಒಂದೇ ಪದದ ಅರ್ಥಗಳಿಗೆ ಬೇರೆ ಬೇರೆ ಪದಗಳನ್ನು ಬಳಸಲೇಬೇಕು. ಇಂಗ್ಲಿಷ್ ಭಾಷೆಯನ್ನು ಹಲವು ಶತಮಾನಗಳಿಂದ ನಿರಂತರವಾಗಿ ಕಾನೂನಿನ ಉದ್ದೇಶಗಳಿಗಾಗಿ ಬಳಸುತ್ತಿರುವುದರಿಂದ ನ್ಯಾಯಚಿಂತನೆಯ ಪ್ರತಿಯೊಂದು ಅರ್ಥಛಾಯೆಯನ್ನು ಮತ್ತು ಸೂಕ್ಷ್ಮ ವ್ಯತ್ಯಾಸಗಳನ್ನು ಪ್ರತಿನಿಧಿಸಲು ಸಮೃದ್ಧ ಹಾಗೂ ವೈವಿಧ್ಯಮಯ ಶಬ್ದ ಸಂಪತ್ತನ್ನು ಅಭಿವೃದ್ಧಿಪಡಿಸಿಕೊಳ್ಳುವುದು ಅದಕ್ಕೆ ಸಾಧ್ಯವಾಗಿದೆ. ಈಗಿರುವಂತೆಯೇ ಅದೇ ತೆರನಾದ ಬಾಗುಬಳುಕುಗಳನ್ನು ಹಾಗೂ ಹೊಂದಿಕೊಂಡು ಹೋಗುವಿಕೆ

3

ಯನ್ನು ನಮ್ಮ ಭಾಷೆಗಳಲ್ಲಿ ನಿರೀಕ್ಷಿಸುವುದು ಅಷ್ಟು ಉಚಿತವಾಗಲಾರದು ; ಏಕೆಂದರೆ ಅವಕ್ಕೆ ಕಾನೂನು ಉದ್ದೇಶಗಳಿಗಾಗಿ ಪ್ರಾಯೋಗಿಕ ಅನ್ವಯದ ಆವೇ ಹಿನ್ನೆಲೆ ಲಭಿಸಿಲ್ಲ. ಅಂಥ ಪರಿಸ್ಥಿತಿಗಳಲ್ಲಿ ಹೊಸ ಪದವನ್ನು ಸೃಷ್ಟಿಸುವುದು ಅನಿವಾರ್ಯ. ಈ ನವಪದ ಪ್ರಯೋಗಗಳಲ್ಲಿ ಕೆಲವು ಕೃತಕವಾದುವೂ, ಗ್ರಹಿಸುವದಕ್ಕಾಗದಿರುವುದಾಗಿಯೂ ನಮಗೆ ಕಂಡುಬರುವ ಸಂಭವವಿದೆ. ಈ ಪ್ರಾರಂಭಿಕ ಪ್ರತಿಕ್ರಿಯೆ ಏನೇ ಆದರೂ, ಈ ರೀತಿ ಸೃಷ್ಟಿಸಿದ ಹೊಸ ಪದವನ್ನು ಖಂಡಿಸುವುದಕ್ಕೆ ಪ್ರೇರೇಪಿಸಬಾರದು. ಭಾವನೆಗಳ ವ್ಯವಹಾರ ಪ್ರಪಂಚದಲ್ಲಿ ಅದು ಪ್ರಯೋಗಕ್ಕೆ ಒಳಗಾಗಲು ಸಾಕಷ್ಟು ಅವಕಾಶ ನೀಡಬೇಕು. ಕಾನೂನು ಪಾರಿಭಾಷಿಕ ಪದಾವಳಿಯ ಶಬ್ದಸಂಪತ್ತು ಮತ್ತು ವಿಪುಲತೆಯು ಅದು ಸೂಕ್ಷ್ಮಾತಿಸೂಕ್ಷ್ಮ ಭೇದಗಳನ್ನು ಹಾಗೂ ಅತ್ಯಂತ ನವಿರಾದ ಭೇದಗಳನ್ನು ಗುರುತಿಸುವಲ್ಲಿ ತನ್ನ ಸಹಾಯಕ್ಕೆ ತೆಗೆದುಕೊಳ್ಳಬಹುದಾದ ಸಜಾತೀಯ ಪದಗಳ ವ್ಯಾಪಕತೆಗೆ ನೇರಪ್ರಮಾಣದಲ್ಲಿ ಇರುತ್ತವೆ. ಸಾಮಾನ್ಯ ಬಳಕೆಯಲ್ಲಿ ಒಂದು ಪದ ಹಲವು ಕಾನೂನು ಪರಿಕಲ್ಪನೆಗಳಿಗೆ ಸಾಕಾಗಿದೆ ಎಂಬ ಅಂಶ ಪ್ರತಿಯೊಂದು ಸಂಬಂಧಿತ ಪರಿಕಲ್ಪನೆಗೆ ಬೇರೆ ಬೇರೆ ಪದಗಳನ್ನು ಗೊತ್ತುಪಡಿಸುವುದರ ಮೂಲಕ ಶಾಸನಕ್ಕೆ ನಿಷ್ಕೃಷ್ಟತೆಯನ್ನುಂಟು ಮಾಡುವುದರ ಅಗತ್ಯದತ್ತ ಕಣ್ಣುಮುಚ್ಚಿ ಕುಳಿತುಕೊಳ್ಳುವಂತೆ ಮಾಡಬಾರದು.

ಒಂದು ಪರಿಕಲ್ಪನೆಗೆ ಒಂದು ಪದ ಎಂಬ ನಿಯಮವನ್ನು ಕಟ್ಟುನಿಟ್ಟಾಗಿ ಅನ್ವಯಿಸಿದರೆ ಕಾನೂನು (ಶಾಸನ) ಕರಡು ಸಿದ್ಧಪಡಿಸುವುದರಲ್ಲಿ ಕೃತಕತೆ ಕಂಡುಬರುತ್ತದೆ ಎಂಬ ಟೀಕೆಯಲ್ಲಿ ಸ್ವಲ್ಪಮಟ್ಟಿನ ಸತ್ಯವಿದೆ ಎಂಬ ಬಗ್ಗೆ ಸಂದೇಹವಿಲ್ಲ. ಶಾಸನರಚನೆಯ ತತ್ತ್ವಗಳು ಶಾಸನ ವ್ಯಾಖ್ಯೆಯ ತತ್ತ್ವಗಳೊಡನೆಯೇ ವಿಕಾಸಗೊಂಡಿವೆ ಮತ್ತು ವಿಕಾಸದ ಹೊಸ ಮಾರ್ಗವನ್ನು ಅನುಸರಿಸಲಾಗದಷ್ಟರಮಟ್ಟಿಗೆ ಪರಸ್ಪರ ಹೆಣೆದುಕೊಂಡಿವೆ ಎಂಬುದನ್ನೂ ಕಡೆಗಣಿಸುವಂತಿಲ್ಲ. ಅದನ್ನೇ ಬೇರೆ ರೀತಿಯಲ್ಲಿ ಹೇಳಬೇಕೆಂದರೆ ಒಂದು ಶಾಸನ ಅಧಿನಿಯಮದಲ್ಲಿ ಎಲ್ಲೇ ಬಳಸಲಾಗಿರಲಿ ಒಂದು ಪದಕ್ಕೆ ಯಾವಾಗಲೂ ಅದೇ ಅರ್ಥ ಇರುತ್ತದೆ ಎಂಬ ತತ್ತ್ವವನ್ನು ನ್ಯಾಯಾಂಗ ನಿರಂತರವಾಗಿ ಅನುಸರಿಸುತ್ತದೆ ; ಹಾಗಾಗಿ ವ್ಯಾಖ್ಯೆಯ ಪ್ರಕ್ರಿಯೆಯಲ್ಲಿ ಕೊನೆಯಿಲ್ಲದ ಗೊಂದಲ – ಅಸ್ತವ್ಯಸ್ತತೆಗಳನ್ನುಂಟುಮಾಡದೆ ಒಂದು–ಪದ–ಒಂದು ಪರಿಕಲ್ಪನೆಯ ನಿಯಮವನ್ನು ಯಾವಾಗಲೂ ಪಾಲಿಸಬೇಕಾದ ಕಟ್ಟುನಿಟ್ಟಾದ ನಿಯಮದಿಂದ ಶಾಸನ ಕರಡುಗಾರ ವಿಚಲಿತನಾಗುವಂತೆಯೇ ಇಲ್ಲ. ನ್ಯಾಯಾಂಗದ ತೀರ್ಪಿನ ಮತ್ತೊಂದು ನಿದರ್ಶನದಿಂದ ಈ ಅಂಶವನ್ನು ಪುಷ್ಟಿಗೊಳಿಸುತ್ತೇನೆ.

ಬುದ್ಧಾಸಿಂಗ್ ವಿ. ಲಟ್ಟುಸಿಂಗ್[11] ಪ್ರಕರಣದಲ್ಲಿ ಜ್ಯುಡಿಷಿಯಲ್ ಕಮಿಟಿ 'ಮಿತಾಕ್ಷರಾ'ದ ಈ ಮುಂದಿನ ಪಾಠದ ಬಗ್ಗೆ ಪರಿಶೀಲಿಸುತ್ತಿತ್ತು :

> ಪಿತೃಸಂತಾನ ಅಭಾವೇ ಪಿತಾಮಹೀ ಪಿತಾಮಹಃ
> ಪಿತೃವ್ಯಾಸ್ತತ್ಪುತ್ರಾಶ್ಚ ಕ್ರಮೇಣ ಧನಭಾಜಃ ||

'On failure of father's descendants, the heirs are

successively the paternal grandmother, paternal grand-father and their *sons*.' (ತಂದೆಯ ವಂಶಜರು ಇಲ್ಲದಿದ್ದಲ್ಲಿ ಉತ್ತರಾಧಿಕಾರಿಗಳು ಕ್ರಮವಾಗಿ ತಂದೆಯ ತಾಯಿ (ಅಜ್ಜಿ), ತಂದೆಯ ತಂದೆ (ತಾತ), ಮತ್ತು ಅವರ ಗಂಡು ಮಕ್ಕಳಾಗುತ್ತಾರೆ.) Son ಎಂಬುದಕ್ಕೆ ಸಂಸ್ಕೃತದಲ್ಲಿ "ಪುತ್ರ" ಎಂದಿದೆ. 'ಮಿತಾಕ್ಷರಿ'ಯು "ಪುತ್ರ" ಪದವನ್ನು ಯಾಜ್ಞವಲ್ಕ್ಯನ ಪಾಠದಲ್ಲಿ ಮಗ, ಮೊಮ್ಮಗ ಮತ್ತು ಮರಿಮಗ ಇವರನ್ನೊಳಗೊಂಡಂತೆ ವಿವರಿಸಿದ್ದು, ಉತ್ತರಾಧಿಕಾರದ ಇಡೀ ಶ್ರೇಣಿಯು ಪುತ್ರನಿಲ್ಲದಾಗ ಮಾತ್ರ–ಎಂದರೆ ಮಗ ಮಾತ್ರವೇ ಅಲ್ಲದೆ ಮಗ, ಮೊಮ್ಮಗ ಮರಿಮಗ ಸೇರಿದಂತೆ–ಉತ್ತರಾಧಿಕಾರ ಪಡೆಯುವುದು. ಪ್ರೀವಿಕೌನ್ಸಿಲಿನ ಮುಂದೆ ಉದ್ಭವಿಸಿದ್ದ ಸಮಸ್ಯೆ ಈ ಮೇಲೆ ಉದ್ಧರಿಸಲಾಗಿರುವ ಪಾಠದಲ್ಲಿ "ಪುತ್ರ" ಎಂಬ ಪದವು ತನ್ನಲ್ಲಿ ಮೊಮ್ಮಗ ಮತ್ತು ಮರಿಮಗಂದಿರು ಸೇರಿದಂತೆ ಅದೇ ಮೂಲಾರ್ಥವನ್ನು ಒಳಗೊಂಡಿದೆಯೋ ಅಥವಾ ಅದು ಗಂಡುಮಕ್ಕಳಿಗೆ (sons) ಮಾತ್ರ ಸೀಮಿತವಾಗಿರುವುದೇ ಎಂಬುದಾಗಿತ್ತು. ಈ ಪದಕ್ಕೆ ಉದ್ದಕ್ಕೂ ಒಂದೇ ಆಶಯದಲ್ಲಿ ಅರ್ಥ ಮಾಡಿಕೊಳ್ಳಬೇಕು ಎಂಬ ನಿಯಮವನ್ನು ಪ್ರೀವಿ ಕೌನ್ಸಿಲ್ ಅನ್ವಯಿಸಿತು ಮತ್ತು ಅದನ್ನು ಸಗೋತ್ರದವರೊಡನೆ ಸಂಬಂಧಿಸಿದಂತೆ ಬಳಸಿದಾಗ ಸಹ ಮೊಮ್ಮಕ್ಕಳು (ಗಂಡು) ಮತ್ತು ಮರಿಮಕ್ಕಳನ್ನು (ಗಂಡು) ಒಳಗೊಳ್ಳುವುದೆಂದು ಹೇಳಿತು. ಆ ಪದವನ್ನು ಗಂಡುಮಕ್ಕಳಿಗೆ (sons) ಸೀಮಿತಗೊಳಿಸಬೇಕು ಎಂದು ಉದ್ದೇಶಿಸಲಾಗಿದ್ದರೆ "ಸೂನು" ಅಥವಾ "ಸುತ" ಎಂಬ ಬೇರೆ ಪದವನ್ನು ಬಳಸಬಹುದಾಗಿತ್ತೆ ವಿನಾ "ಪುತ್ರ" ಎಂಬುದನ್ನಲ್ಲ ; ಇದಕ್ಕೆ ಹಿಂದೆ ವ್ಯಾಖ್ಯಾನಕಾರ ಇದಕ್ಕೆ ವ್ಯಾಪಕ ಅರ್ಥದ "ಪುತ್ರ"ವನ್ನು ಬಳಸಿರುವನು, ಎಂದು ನ್ಯಾಯಮೂರ್ತಿ ಅಮೀರ್ ಅಲಿಯವರು ಅಭಿಪ್ರಾಯಪಟ್ಟರು.

ಈ ಮೇಲೆ ರೂಪಿಸಲಾಗಿರುವ ತತ್ತ್ವಗಳಿಂದ ದೂರ ಸರಿಯದಿರುವ ಸತ್ಪರಿಣಾಮಕಾರಿ ಮಾರ್ಗ ಬಿಟ್ಟರೆ ಆಗುವ ಅಪಾಯವನ್ನು **ರಾಮಚಂದ್ರ** ವಿ. **ವಿನಾಯಕ**[12] – ಈ ಸುಪ್ರಸಿದ್ಧ ಪ್ರಕರಣದಲ್ಲಿ ಶ್ರೇಷ್ಠ ನ್ಯಾಯಮೂರ್ತಿ ಅಮೀರ್ ಅಲಿಯವರು ಕೋಲ್‌ಬ್ರೂಕ್‌ರ ತಪ್ಪು ಭಾಷಾಂತರವನ್ನು ತಳ್ಳಿಹಾಕುವ ಆಕ್ಷೇಪಾತ್ಮಕ ತೀರ್ಪಿನಲ್ಲಿ ಎಲ್ಲ ಭಾಷಾಂತರಕಾರರಿಗೆ ಮನವರಿಕೆ ಮಾಡಿಕೊಟ್ಟರು. ಒಂದು ಪದವನ್ನು ತಪ್ಪಾಗಿ ಭಾಷಾಂತರಿಸಿದುದರಿಂದಾಗಿ ಹಿಂದೂ ನ್ಯಾಯಕ್ಷೇತ್ರದಲ್ಲಿ **ದಾಯಭಾಗ** ಮತ್ತು **ಮಿತಾಕ್ಷರಾ** ಪದ್ಧತಿಗಳ ನಡುವೆ ವ್ಯತ್ಯಾಸವನ್ನು ತೊಡೆದುಹಾಕಿಬಿಡುತ್ತಿದ್ದು, ಆ ಮಹಾ ನ್ಯಾಯಮೂರ್ತಿ ಅಮೀರ್ ಅಲಿಯವರ ಜಾಗರೂಕತೆ ಇದರಿಂದ ಪಾರಾಗುವ ದಾರಿ ತೋರಿತು. ಇಲ್ಲದಿದ್ದಲ್ಲಿ ಪ್ರೀವಿ ಕೌನ್ಸಿಲ್ ಕೋಲ್‌ಬ್ರೂಕ್‌ರಂಥ ಬಹುಶ್ರುತರಾದ, ಸಾಮಾನ್ಯವಾಗಿ ತಪ್ಪು ಮಾಡದಂಥ, ವಿದ್ವಾಂಸರ ತಪ್ಪಾದ ಭಾಷಾಂತರದಿಂದ ದಾರಿ ತಪ್ಪುತ್ತಿತ್ತು.

ವಿಜ್ಞಾನೇಶ್ವರನು ಯಾಜ್ಞವಲ್ಕ್ಯ ಸ್ಮೃತಿಯ ಬಗ್ಗೆ ತನ್ನ ವ್ಯಾಖ್ಯಾನದಲ್ಲಿ (ಮಿತಾಕ್ಷರಿ) ಆಚಾರ ಕಾಂಡದಲ್ಲಿ ವಿವಾಹದ ಬಗ್ಗೆ ವಿವರಿಸುವಾಗ "ಸಪಿಂಡ" ಶಬ್ದದ ಅರ್ಥ ವಿವರಿಸಿರುವನು. ಸಪಿಂಡ ಸಂಬಂಧವನ್ನು ಉತ್ತರಕ್ರಿಯಾ ಅರ್ಪಣೆಯ ಸಮು

ದಾಯದೊಡನೆ ಸೇರಿಸಿರುವ ''ಸಪಿಂಡ''ದ ಹಳೆಯ ಪರಿಕಲ್ಪನೆಯಿಂದ ದೂರಸರಿದು ಆ ವಿಷಯದ ನ್ಯಾಯದಲ್ಲಿ ಕ್ರಾಂತಿಯನ್ನುಂಟುಮಾಡಿದನು. ಜೀಮೂತವಾಹನ "ದಾಯ ಭಾಗ"ದಲ್ಲಿ ಪ್ರತಿಪಾದಿಸಿರುವ ಹಳೆಯ ದೃಷ್ಟಿಕೋನ "ಪಿಂಡ" ಎಂದರೆ ಪಿತೃ ಆರಾಧನೆಗೆ ಪ್ರಾಸಂಗಿಕವಾಗಿರುವ ಸಂಸ್ಕಾರಾದಿಗಳಲ್ಲಿ ಪಿತೃದೇವತೆಗಳಿಗೆ ಅರ್ಪಿಸುವ "ಪಿಂಡ" ಎಂದು ಅರ್ಥೈಸಿತ್ತು. ವಿಜ್ಞಾನೇಶ್ವರನು ಈ ಪರಿಕಲ್ಪನೆಯನ್ನು ನಿರಾಕರಿಸಿದನು ; "ಸಪಿಂಡ" ಸಂಬಂಧನನ್ನು "ಪಿಂಡ" ಎಂಬುದನ್ನು ಪ್ರದಾನ ಮಾಡಲಾದ ಪಿಂಡ ಎಂಬುದಕ್ಕೆ ಬದಲಾಗಿ, ಭ್ರೂಣ ಅಥವಾ ಕಾಯ ಎಂಬುದಾಗಿ ಅರ್ಥೈಸಿ ಅದರಿಂದ ಒಂದೇ ಕಾಯದ ಅಂಶಗಳ ಅಥವಾ ರಕ್ತದ ಸಂಬಂಧ ಅಥವಾ ಸಮೀಪ ಸಂಬಂಧ ಎಂದು ವ್ಯಾಖ್ಯಾನಿಸಿದನು. ಅವನು ಸಪಿಂಡದ ಬಗ್ಗೆ ತನ್ನ ಸಿದ್ಧಾಂತವನ್ನು, ಒಬ್ಬ ವ್ಯಕ್ತಿ ಸಪಿಂಡರಲ್ಲ ದವರ ಪೈಕಿಯಿಂದ ವಿವಾಹವಾಗಬೇಕು ಎಂಬ ನಿಯಮದಲ್ಲಿನ ಪ್ರಕರಣದಲ್ಲಿ ವ್ಯಾಪಕ ವಾಗಿ ಬೆಳೆಸಿದನು. ದಾಯ ಅಥವಾ ಉತ್ತರಾಧಿಕಾರ ಪ್ರಕರಣದಲ್ಲಿ ಸಪಿಂಡದವರು ಹಕ್ಕುದಾರರಾಗಿ ಬರುವರು ; ಆದರೆ ವಿಜ್ಞಾನೇಶ್ವರನು ಇದನ್ನು ಹಿಂದಿನ ಪ್ರಕರಣ ದಲ್ಲಿಯೇ ವ್ಯಾಖ್ಯೆಸಿದ್ದುದರಿಂದ ಇಲ್ಲಿ ಮತ್ತೆ ವ್ಯಾಖ್ಯೆಸಲಿಲ್ಲ. ಕೋಲ್‌ಬ್ರೂಕ್ "ಉತ್ತರಾಧಿಕಾರ"ದ ಬಗ್ಗೆ ಪರಿಶೀಲಿಸುವ ಮಿತಾಕ್ಷರಿಯ ಪ್ರಕರಣವನ್ನು ಭಾಷಾಂತರಿಸಿ ದರು. ಈ ಎರಡನೆಯದರಲ್ಲಿ ಅವರು ಸಪಿಂಡ ಎಂಬುದನ್ನು ಅಂತ್ಯಕ್ರಿಯೆ ಅರ್ಪಣಾದಿಗಳ ಸಮುದಾಯದಿಂದ ಸಂಬಂಧ ಪಡೆದಿರುವುದು ಎಂದು ಭಾಷಾಂತರಿಸಿದ್ದರು. ಜೀಮೂತ ವಾಹನನ ಅಭಿಪ್ರಾಯವೂ ಅದೇ ಆಗಿದ್ದುದರಿಂದ ಇದು ಸರಿಯಾಗಿತ್ತು. ದುರದೃಷ್ಟ ವಶಾತ್ ಅದೇ ಅರ್ಥವನ್ನು 'ಮಿತಾಕ್ಷರಿ'ಯ ಭಾಷಾಂತರಕ್ಕೂ ತುಂಬಿದರು. ಏನಾಯಿ ತೆಂಬುದನ್ನು ಸುಪ್ರಸಿದ್ಧ ನ್ಯಾಯಮೂರ್ತಿ ಅಮೀರ್ ಅಲಿಯವರೇ ಹೇಳಿರುವುದನ್ನು ಗಮನಿಸೋಣ :

> "ಶ್ರೀ ಕೋಲ್‌ಬ್ರೂಕ್ 'ಮಿತಾಕ್ಷರಾ'ದ ತಮ್ಮ ಭಾಷಾಂತರದಲ್ಲಿ ಸಪಿಂಡ ಎಂಬು ದನ್ನು ಅಂತ್ಯಕ್ರಿಯಾದಿಗಳಿಗೆ ಸಂಬಂಧಪಟ್ಟ ಸಂಬಂಧ ಎಂದು ಅಭಿಪ್ರಾಯ ನಿರೂಪಿಸಿದ್ದು, ಇದು ಬನಾರಸ್ ಮತ್ತು ಬಂಗಾಳ ಶಾಖೆಗಳ ನಡುವಣ ಪ್ರಮುಖ ವ್ಯತ್ಯಾಸವನ್ನು ವಾಸ್ತವವಾಗಿ ಮರೆಮಾಚಿಬಿಟ್ಟಿದೆ. ಆದರೆ ಅವರ ಅಭಿಪ್ರಾಯನಿರೂಪಣೆ ತಪ್ಪಾದುದು ; ವಿಜ್ಞಾನೇಶ್ವರನು ಪ್ರತಿಪಾದಿಸಿದ ಸಪಿಂಡ ಸಂಬಂಧದ ನಿಜಸಿದ್ಧಾಂತ ರಕ್ತಸಂಬಂಧವನ್ನಾಧರಿಸಿದುದಾಗಿದೆ ಎಂದು ಈಗ ಮನಗಾಣಲಾಗಿದೆ."

ವಿಜ್ಞಾನೇಶ್ವರನು ವಿವಾಹಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ 'ಸಪಿಂಡ' ಪದಕ್ಕೆ ಯಾವುದೇ ಅರ್ಥ ನೀಡಿದ್ದರೂ ಉತ್ತರಾಧಿಕಾರದ ಪ್ರಕರಣದಲ್ಲಿ ಆ ಪದವನ್ನು ಬೇರೊಂದು ಅರ್ಥದಲ್ಲಿ—ಎಂದರೆ, ಜೀಮೂತವಾಹನನು ''ದಾಯಭಾಗ''ದಲ್ಲಿ ಅದಕ್ಕೆ ನೀಡಿರುವ ಅರ್ಥದಲ್ಲಿ—ಬಳಸಿರುವನು ಎಂದು ವಾದಿಸಲಾಯಿತು. ಈ ವಾದವನ್ನು ನ್ಯಾಯಮೂರ್ತಿ ಅಮೀರ್ ಅಲಿಯವರು ತಳ್ಳಿಹಾಕಿದರು. ಉಮೇದ್ ಬಹಾದೂರ್

ವಿ. **ಉದಯಚಂದ್**[13] ಪ್ರಕರಣದಲ್ಲಿ ಕಲ್ಕತ್ತಾ ಹೈಕೋರ್ಟಿನ ಪೂರ್ಣಪೀಠದ ತೀರ್ಪನ್ನು ಅನುಮೋದಿಸುತ್ತ ಅವರು ಉದ್ಧರಿಸಿದುದು :

> “ಹಿಂದೂ ನ್ಯಾಯಶಾಸ್ತ್ರಲೇಖಕರ ಪೈಕಿ ಚೆನ್ನಾಗಿ ಅರ್ಥಮಾಡಿಕೊಂಡಿರುವ ರಚನಾ ನಿಯಮವೇನೆಂದರೆ ಒಂದು ಕೃತಿಯಲ್ಲಿ ಒಂದು ಪದವನ್ನು ಉದ್ದಕ್ಕೂ ಒಂದೇ ಅರ್ಥದಲ್ಲಿ – ಅದಕ್ಕೆ ವಿರುದ್ಧ ಅರ್ಥವನ್ನು ಸ್ಪಷ್ಟವಾಗಿ ಸೂಚಿಸಿರದ ಹೊರತು–ಬಳಸಲಾಗಿದೆ ಎಂದು ಭಾವಿಸತಕ್ಕದಾಗಿದೆ.”

ಈ ಮಾತುಗಳ ಬಗ್ಗೆ ಮತ್ತೆ ಮತ್ತೆ ವಿಚಾರ ಮಾಡುವುದು ಅಪೇಕ್ಷಿತವೇ. ಶಾಸನ ಕರಡು ರಚನಾಕಾರನಿಗೆ ಅದು ಹೀಗೆ ಕಟ್ಟಳೆಯಾಗುವುದಿಲ್ಲವೇ ? **ನೀವು ಒಂದು ಪದವನ್ನು ಅಧಿನಿಯಮದಲ್ಲಿ ಉದ್ದಕ್ಕೂ ಒಂದು ಅರ್ಥದಲ್ಲಿ ಮತ್ತು ಒಂದು ಅರ್ಥದಲ್ಲಿ ಮಾತ್ರವೇ ಬಳಸತಕ್ಕದ್ದು. (Thou shalt use one word in one sense and one sense only throughout the enactment.)**

ಅಸಂದಿಗ್ಧವಾದ ಶಾಸನ ಅಧಿನಿಯಮದ ಧ್ಯೇಯಸಾಧನೆಯಲ್ಲಿ ಶಾಸನ ಕರಡು ರಚನಾಕಾರ ತನ್ನ ಕಾರ್ಯವನ್ನು ಜಾಗರೂಕತೆಯಿಂದ ಮಾಡುವಲ್ಲಿ ಎಚ್ಚರಿಕೆಯಿಂದಿರದ ಹಾಗೂ ಒಂದು ಪದ-ಒಂದು ಪರಿಕಲ್ಪನೆಯ-ಇಕ್ಕಟ್ಟಾದುದಾದರೂ ನೇರವಾದ ಪಥದಿಂದ ವಿಚಲಿಸುವವನ ಬಗ್ಗೆ ದುರಾಕ್ಷೇಪ ಮಾಡುವ ನ್ಯಾಯಾಂಗದ ಅತ್ಯುನ್ನತ ಪೀಠದಿಂದ ಸ್ಪಷ್ಟವಾದ ಹಾಗೂ ವಿಶದವಾದ ಇಂಥ ಒಂದು ಕಟ್ಟಳೆಯಿದೆ.

ಮೂಲದ ವಸ್ತುವಿಗೆ ಸಂಬಂಧಿಸಿದಂತೆ ವಿಧೇಯತೆ (Fidelity as to import of the original)

Litera script manet (ಎಂದರೆ ಲಿಖಿತ ದಾಖಲೆಗೇ ಪ್ರಾಧಾನ್ಯ)– ಇದು ನ್ಯಾಯಾಲಯಗಳಿಗೆ ಮಾರ್ಗದರ್ಶಕವಾಗಿರುವ ಸೂತ್ರ. ಎಂದ ಮೇಲೆ ಯಥಾರ್ಥ ಪಾಠವು ಮೂಲದ ಸಂಪೂರ್ಣ ಅರ್ಥವನ್ನು–ಸ್ವಲ್ಪ ಹೆಚ್ಚೂ ಅಲ್ಲದಂತೆ, ಸ್ವಲ್ಪ ಕಡಮೆಯೂ ಅಲ್ಲದಂತೆ–ನೀಡಬೇಕು. ತರ್ಕಶಾಸ್ತ್ರದಲ್ಲಿ “ಅವ್ಯಾಪ್ತ” (ಅಗತ್ಯವಾದ ಮಿತಿಯವರೆಗೂ ವಿಸ್ತರಿಸದಿರುವುದು) ಮತ್ತು “ಅತಿವ್ಯಾಪ್ತ” (ಅಗತ್ಯವಾದ ಮಿತಿಯನ್ನು ಮೀರಿರುವುದು) ಎಂಬ ಎರಡು ದೋಷಗಳನ್ನು ಉಲ್ಲೇಖಿಸಲಾಗುವುದು. ಭಾಷಾಂತರಕ್ಕಾಗಿ ಆಯ್ಕೆ ಮಾಡಿಕೊಳ್ಳುವ ಪದಗಳು ಈ ಎರಡು ಪ್ರಮುಖ ದೋಷಗಳನ್ನೂ ನಿವಾರಿಸಬೇಕು. ಈ ದಿಶೆಯಲ್ಲಿ ಯಾವುದೇ ದೋಷ ಅಸಂಖ್ಯಾತ ಜನರ ಅದೃಷ್ಟವನ್ನೇ ನಾಶಮಾಡಿಬಿಡಬಹುದು. ಒಂದೆರಡು ಉದಾಹರಣೆಗಳಿಂದ ಈ ಅಂಶವನ್ನು ಸ್ಪಷ್ಟಪಡಿಸಬಹುದು.

ಸದರ್‌ಲ್ಯಾಂಡ್‌ರ ‘ದತ್ತಕ ಚಂದ್ರಿಕಾ’ದ ಭಾಷಾಂತರ ಮತ್ತು ಕೋಲ್‌ಬ್ರೂಕ್‌ರ ‘ದತ್ತಕ ಮೀಮಾಂಸಾ’ದ ಭಾಷಾಂತರಗಳಲ್ಲಿ ಕೆಲವು ನಿರ್ದಿಷ್ಟ ಭಾಗಗಳ ಯಥಾರ್ಥತೆಯನ್ನು **ಸೌಂದರಪಾಂಡ್ಯನ್ ವಿ. ಪೆರಿಯಾವೀರು**[14] ಪ್ರಕರಣದಲ್ಲಿ ಮದ್ರಾಸ್ ಹೈಕೋರ್ಟಿನ ಪೂರ್ಣಪೀಠ ಪರಿಶೀಲಿಸಿತು. ಆ ಪ್ರಕರಣದಲ್ಲಿ Bಯ ಪತ್ನಿ

Aಯು 1900ರಲ್ಲಿ ಕಾಲವಾಗಿದ್ದಳು. ಅನಂತರ, ವಿಧುರನಾಗಿ Bಯು Cಯನ್ನು 1910ರಲ್ಲಿ ದತ್ತು ತೆಗೆದುಕೊಂಡನು. Aಯ ತಂದೆ 1890ರಲ್ಲಿ ಕಾಲವಾಗಿದ್ದ; ಆತನ ಆಸ್ತಿಯನ್ನು ಆತನ ವಿಧವೆ ಪಡೆದಿದ್ದು, ಆಕೆಯೂ 1923ರಲ್ಲಿ ಕಾಲವಾದಳು. ಈ ವಿಧವೆ ಕಾಲವಾದ ಮೇಲೆ C ತಾನು Xನ ಮಗಳಮಗ (ದತ್ತಕದಿಂದ) ಎಂಬ ಆಧಾರದ ಮೇಲೆ ಆ ಆಸ್ತಿಯ ಹಕ್ಕು ಕೇಳಿದನು. ಈಗ ಇದ್ದ ಪ್ರಶ್ನೆ Xನು Cಯ ತಾತನೇ (ಮಾತಾಮಹನೇ) ಎಂಬುದಾಗಿತ್ತು. ಎಂದರೆ Bಯು ತೆಗೆದುಕೊಂಡ ದತ್ತಕವು ತಾನು ದತ್ತು ತೆಗೆದುಕೊಂಡ ಹುಡುಗ, Bಗಿಂತ ಮೊದಲೇ ಕಾಲವಾಗಿದ್ದ Bಯ ಪತ್ನಿಯ ದತ್ತುಪುತ್ರನೂ ಆಗುವನೇ ಎಂಬ ಪ್ರಶ್ನೆ ಉದ್ಭವಿಸಿತ್ತು. ಶ್ರೀ ರಾಜ ಗೋಪಾಲ ಅಯ್ಯಂಗಾರ್‌ರವರ (ಇವರು ತರುವಾಯ ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾದರು.) 'ಸಮರ್ಥ' ನೆರವಿನೊಡನೆ ಮಹಾನ್ ನ್ಯಾಯಕೋವಿದ ಸರ್ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ವಾದಿಸಿದುದೇನೆಂದರೆ: ದತ್ತಕ ಕಾರ್ಯದಲ್ಲಿ ಸಾಹಚರ್ಯ ಪಡೆದಿದ್ದಂಥ ಪತ್ನಿ ಮಾತ್ರವೇ ದತ್ತು ತೆಗೆದುಕೊಂಡ ಹುಡುಗನ ತಾಯಿಯಾಗಬಲ್ಲಳು ಎಂಬುದಾಗಿತ್ತು. ಇದಕ್ಕಾಗಿ 'ದತ್ತಕ ಚಂದ್ರಿಕಾ'ದಲ್ಲಿನ ಈ ಮುಂದಣ ಭಾಗವನ್ನು ಅವಲಂಬಿಸಿಲಾಗಿತ್ತು:

ಶುದ್ಧದತ್ತಕಸ್ಯ ತು ಪ್ರತಿಗ್ರಹೀತ್ರ್ಯಾ ಏವ ಮಾತುಃ ಪಿತ್ರಾದಿಪಿಂಡದಾನಮ್ ||

ಸದರ್‌ಲ್ಯಾಂಡ್‌ರ ಭಾಷಾಂತರ: But the absolutely adopted son presents oblations to the father and the other ancestors of the adoptive mother. (ಅದರೆ ಪೂರ್ಣವಾಗಿ ದತ್ತುವಾದ ಪುತ್ರನು ತಂದೆಗೆ ಮತ್ತು ದತ್ತಕ ಮಾಡಿಕೊಳ್ಳುವ ಇತರ ಪೂರ್ವಜರಿಗೆ ಪಿಂಡಪ್ರದಾನ ಮಾಡುವನು.) "ಪ್ರತಿಗೃಹೀತೃ ಮಾತಾ" ಎಂಬುದಕ್ಕೆ "ದತ್ತು ತಾಯಿ" ಎಂಬ ಭಾಷಾಂತರ ತಪ್ಪು ಎಂದು ಸರ್ ಅಲ್ಲಾಡಿ ವಾದಿಸಿದರು. ಶಬ್ದಾರ್ಥದ ಪ್ರಕಾರ ಅದನ್ನು ಸ್ವೀಕಾರ ಮಾಡುವ–ತಾಯಿ (Receiving mother)– ಎಂದರೆ ದತ್ತು ತೆಗೆದುಕೊಳ್ಳುವ ಸಮಾರಂಭದಲ್ಲಿ ದತ್ತುಪುತ್ರನನ್ನಾಗಿ ದತ್ತು ಸ್ವೀಕರಿಸುವಳು–ಎಂದರ್ಥವಾಗುತ್ತದೆ. ಈ ಅರ್ಥದಲ್ಲಿ ಇದನ್ನು ಪರಿಗ್ರಹಿಸಿದರೆ ದತ್ತು ತೆಗೆದುಕೊಳ್ಳುತ್ತಿರುವ ವಿಧುರನ (ಮೊದಲೇ ಕಾಲವಾಗಿದ್ದ) ಪತ್ನಿ ಯಾವುದೇ ಕಲ್ಪನೆಯಿಂದಾಗಲೀ ದತ್ತು ಸ್ವೀಕಾರ ಮಾಡಿದ ತಾಯಿ ಎಂದು ಪರಿಗಣಿಸಲಾಗುವುದಿಲ್ಲ.

ಮದ್ರಾಸ್ ಹೈಕೋರ್ಟಿನ ಪೂರ್ಣಪೀಠ ಈ ವಾದವನ್ನು ತಳ್ಳಿಹಾಕಿತು. ನ್ಯಾಯಮೂರ್ತಿ ರಮಣಂರವರು "ಪ್ರತಿಗೃಹೀತೃ ಮಾತಾ" ಎಂಬ ಭಾಗವನ್ನು ಅದರ ಶಬ್ದಾರ್ಥದ ಪ್ರಕಾರವಾಗಿ ಅರ್ಥ ಮಾಡಿಕೊಳ್ಳದೆ, ಅದನ್ನು ದತ್ತು ಸ್ವೀಕರಿಸುವ ತಾಯಿ ಎಂದರೆ ದತ್ತುಸ್ವೀಕಾರ ಮಾಡುವವನ ಪತ್ನಿ ಎಂಬ ಸಾಧಾರಣ ಅರ್ಥದಲ್ಲಿ ತೆಗೆದುಕೊಳ್ಳಬೇಕು; ಸದರ್‌ಲ್ಯಾಂಡ್ ಹಾಗೂ ಕೋಲ್‌ಬ್ರೂಕ್ – ಈ ಇಬ್ಬರು ಭಾಷಾಂತರಕಾರರು ಹಾಗೆಯೇ ಭಾವಿಸಿರುವರು ಎಂದು ಸೂಚಿಸಿದರು. "ದತ್ತಕ ಚಂದ್ರಿಕಾ"

ಮತ್ತು **ದತ್ತಕ** ಶಿಶುವನ್ನು ಪಡೆಯುವ ಧ್ಯೇಯವು ಹೆತ್ತತಾಯಿ ಮತ್ತು ಆಕೆಯ ಪೂರ್ವಜರನ್ನು ಕೈಬಿಡುವುದೇ ಆಗಿದೆ ; ದತ್ತು ಸ್ವೀಕರಿಸುವ ತಾಯಿ ಹಾಗೂ ದತ್ತು ಸ್ವೀಕಾರ ಮಾಡುವವನ ಇತರ ಪತ್ನಿಯರ ನಡುವೆ ಭೇದವೆಣಿಸಲೆಂಬಂತಲ್ಲ.

ಸರ್ ವೇಪ ರಮೇಶಂರವರ ವಿದ್ವತ್ತಿನ ಬಗ್ಗೆ ಸಕಲ ಗೌರವಗಳಿದ್ದರೂ ಅವರ ಅಭಿಪ್ರಾಯ ತಪ್ಪು ಎಂಬುದನ್ನು ಗಮನಿಸಬೇಕಾಗಿದೆ. ಭಾಷಾಂತರಕಾರರು ಮತ್ತು ಅವರನ್ನು ಅನುಸರಿಸಿ ಸರ್ ವೇಪರವರು ಮಹಾನ್ ವೈಯ್ಯಾಕರಣಿ ಪಾಣಿನಿಯ 'ಪುಂಯೋಗಾತ್ ಆಖ್ಯಾಯಾಮ್' ಎಂಬ ಸೂತ್ರವನ್ನು ಆಧರಿಸಿದ್ದುದು ಸ್ಪಷ್ಟವಾಗಿತ್ತು. ಪುಲ್ಲಿಂಗ ಸೂಚಕ ಪದಕ್ಕೆ 'ಇ' ಪ್ರತ್ಯಯ ಸೇರಿಸಿದರೆ ಅದು ಆ ಪುರುಷನ ಪತ್ನಿಯನ್ನು ಸೂಚಿಸುತ್ತದೆ ಎಂಬುದೇ ಈ ಸೂತ್ರ. ಹಾಗಾಗಿ ಗೋಪೀ ಎಂದರೆ ಗೋಪನ ಪತ್ನಿ ಎಂದಾಗುತ್ತದೆ. ಅದೇ ರೀತಿ ಪಾಣಿಗೃಹೀತ್ರೀ ಎಂಬುದನ್ನು ಪಾಣಿಗೃಹೀತನ ಪತ್ನಿ (ಪಾಣಿಗ್ರಹೀತೃವಿನ ಸ್ತ್ರೀವಾಚಿ) ಎಂದು ತೆಗೆದುಕೊಳ್ಳಬೇಕು ; ಆದರೆ ಇದು ಸರಿಯಲ್ಲ. ಪತಂಜಲಿಯ ಮಹಾಭಾಷ್ಯದ ಅನುಸಾರ "ಅಕಾರಾಂತಾತ್ ಪುಂವಾಚಕಾತ್ ಶಬ್ದಾತ್ ಇತಿ ವ್ಯಾಖ್ಯಾತವ್ಯಮ್." ಹಾಗಾಗಿ ಪತಂಜಲಿ ಈ ಸೂತ್ರದ ಅನ್ವಯವನ್ನು 'ಅ'ಕಾರಾಂತ ಪುಲ್ಲಿಂಗ ಶಬ್ದಗಳಿಗೆ ಮಾತ್ರ ಸೀಮಿತಗೊಳಿಸಿರುವನು. ಪರಿಶೀಲನೆಯಲ್ಲಿರುವ ಪದವು 'ತೃ'ವಿನಿಂದ ಕೊನೆಗೊಳ್ಳುತ್ತದೆ, ಆದ್ದರಿಂದ ಇದು ಈ ಸೂತ್ರದ ವ್ಯಾಪ್ತಿಯಿಂದ ಹೊರತಾಗಿದೆ. ಅಷ್ಟೇ ಅಲ್ಲದೆ, ಪಾಣಿನಿಯ 'ಕರ್ತರಿ ತೃಚ್' ಸೂತ್ರದಿಂದ 'ತೃ' ಪ್ರತ್ಯಯ ವಾಸ್ತವವಾಗಿ ಕರ್ತೃವನ್ನು ಸೂಚಿಸುತ್ತದೆ. ಎಂದರೆ 'ಪ್ರತಿಗೃಹೀತ್ರೀ ಮಾತಾ' ಎಂದರೆ ಈ ಕಾರ್ಯದಲ್ಲಿ–ಎಂದರೆ ದತ್ತು ಸ್ವೀಕಾರದ ಸಮಾರಂಭದಲ್ಲಿ–ವಾಸ್ತವವಾಗಿ ಪಾಲ್ಗೊಳ್ಳುವ ತಾಯಿ ಎಂದು ಮಾತ್ರವಾಗುತ್ತದೆ. ಸರ್ ಅಲ್ಲಾಡಿ ಮತ್ತು ಶ್ರೀ ರಾಜಗೋಪಾಲ ಅಯ್ಯಂಗಾರ್‌ರವರ ವಾದ ಸಾಧಾರವಾಗಿತ್ತು. ವಾಸ್ತವವಾಗಿ ಭಾಷಾಂತರಕಾರರೇ ತಪ್ಪು ಮಾಡಿದ್ದವರು. ತತ್ಪರಿಣಾಮವಾಗಿ, ಮೂವರು ನ್ಯಾಯಮೂರ್ತಿಗಳ ಪೂರ್ಣಪೀಠದ ತೀರ್ಪಿನ 23 ವರ್ಷಗಳ ತರುವಾಯ, ಈ ಪ್ರಶ್ನೆಯನ್ನು ಪರಿಶೀಲಿಸುವ ಸಲುವಾಗಿ ಐವರು ನ್ಯಾಯಮೂರ್ತಿಗಳ ಪೂರ್ಣತರ ಪೀಠವನ್ನು ನೇಮಿಸಲಾಯಿತು. ಈ ಪೂರ್ಣತರಪೀಠ ಮೊದಲಿನ ಪೂರ್ಣಪೀಠದ ತೀರ್ಪನ್ನು ರದ್ದುಪಡಿಸಿತು. (ನೋಡಿ : **ಶಿವಕಾಮಿ ಆಚಿ** ವಿ. **ಸೋಮಸುಂದರಂ**[15]) ಎರಡು ದಶಕಗಳ ತರುವಾಯವಾದರೂ ಶ್ರೀ ಅಲ್ಲಾಡಿಯವರ ನಿಲುವು ಸಮರ್ಥಿತವಾದುದು ನನಗೆ ವೈಯಕ್ತಿಕವಾಗಿ ತೃಪ್ತಿದಾಯಕವಾದ ಅಂಶವೇ ; ಏಕೆಂದರೆ ನಾನು ಅವರಲ್ಲಿ ಅಭ್ಯಾಸಿಯಾಗಿದ್ದೆ ಮತ್ತು ಅವರ ಸ್ಫೂರ್ತಿದಾಯಕ ಮಾರ್ಗದರ್ಶನದಲ್ಲಿ ಅವರ ಛೇಂಬರಿನಲ್ಲಿ ಅಧ್ಯಯನ ನಡೆಸಿದ್ದೆ. ನನ್ನ ಮಾವನವರಾದ ದಿವಂಗತ ಶ್ರೀ ನ್ಯಾಯಮೂರ್ತಿ ಚ. ರಾಘವರಾವ್ (ಮದ್ರಾಸ್ ಹೈಕೋರ್ಟು) ಅವರೇ ಈ ವಿಷಯವನ್ನು ಪೂರ್ಣತರ ನ್ಯಾಯಪೀಠದ ಪರಿಶೀಲನೆಗಾಗಿ ಕಳುಹಿಸಿದುದು ಎಂಬ ಅಂಶದಿಂದ ನನ್ನ ತೃಪ್ತಿಯ ಭಾವನೆ ಮತ್ತಷ್ಟು ಪೂರ್ಣಗೊಂಡಿದೆ. ಈ ವಿಷಯ ಅವರ ಮುಂದೆ ದ್ವಿತೀಯ ಮನವಿಯಾಗಿ ಬಂದಿತು ಮತ್ತು

ತಮ್ಮ ಮೇಲೆ ಬಂಧಕವಾಗಿದ್ದ ಮೊದಲ ಪೂರ್ಣಪೀಠದ ತೀರ್ಪನ್ನು ಅನುಸರಿಸಿ ದೈನಂದಿನ ವ್ಯಾವಹಾರಿಕ ರೀತಿಯಲ್ಲಿ ಅಪಕೊಟ್ಟರೇ ಈ ವಿಷಯವನ್ನು ಇತ್ಯರ್ಥಮಾಡಿ ಬಿಡಬಹುದಾಗಿತ್ತು. ನ್ಯಾಯಮೂರ್ತಿಯಾಗಿದ್ದು ಅಪಾರ ಪಾಂಡಿತ್ಯ ಪಡೆದಿದ್ದ, ಅಂತರಂಗದಲ್ಲಿಯೂ ನ್ಯಾಯನಿಷ್ಠರಾಗಿದ್ದ ಅವರಿಗೆ ಈ ಪ್ರಕರಣವನ್ನು ಯಾಂತ್ರಿಕವಾಗಿ ಇತ್ಯರ್ಥಮಾಡುವುದಾಗಲಿಲ್ಲ. ಇದರ ಪರಿಣಾಮ ಪೂರ್ಣತರ ಪೀಠದ ರಚನೆಯಾಗಿದ್ದು, ಮೊದಲಿನ ಪೂರ್ಣಪೀಠದ ತೀರ್ಪನ್ನು ರದ್ದುಪಡಿಸಿದುದಾಗಿದೆ. ಮೂಲಕ್ಕೆ ಸ್ವಲ್ಪವಾದರೂ ವಿರುದ್ಧವಾದಲ್ಲಿ ಭಾಷಾಂತರದ ಕಾಲದಲ್ಲಿ ಮನಗಾಣದ ತೀವ್ರತರ ಪರಿಣಾಮಗಳಾಗಬಹುದು ಎಂಬುದು ಈ ಪ್ರಕರಣದಿಂದ ಸ್ಪಷ್ಟವಾಗಿದೆ.

(4)

ವಾಕ್ಯರಚನಾ ವಿನ್ಯಾಸ : ಭಾಷಾಂತರಗಳಲ್ಲಿ ಇಂಗ್ಲಿಷ್ ಮೂಲದ ವಾಕ್ಯರಚನಾ ವಿನ್ಯಾಸವನ್ನು ಹಿಂದುಮುಂದು ನೋಡದೆ ಏಕೆ ಅಳವಡಿಸಿಕೊಳ್ಳಲಾಗುತ್ತಿದೆ ಎಂದು ಪತ್ರಿಕೆಗಳಲ್ಲಿ ತೀವ್ರವಾಗಿ ಚರ್ಚಿಸಲಾಗುತ್ತಿದೆ. ಒಂದು ದೀರ್ಘ ಮಿಶ್ರವಾಕ್ಯದಲ್ಲಿ ವ್ಯಕ್ತಪಡಿಸಲಾಗಿರುವ ಕಾಯ್ದೆಯ ಒಂದು ಪ್ರಕರಣವನ್ನು ಅನುಕೂಲಕರವಾಗಿ ಎರಡು ಅಥವಾ ಅದಕ್ಕಿಂತ ಹೆಚ್ಚು ಸರಳ ವಾಕ್ಯಗಳಾಗಿ ವಿಭಜಿಸಬಾರದೇಕೆ ಎಂಬ ಪ್ರಶ್ನೆಯನ್ನು ಎತ್ತಲಾಗಿದೆ. ವಾಕ್ಯರಚನಾ ವಿನ್ಯಾಸಕ್ಕೆ ಸಂಬಂಧಿಸಿದಂತೆಯೂ ಮೂಲಕ್ಕೆ ವಿಧೇಯತೆಯಿಂದಿರುವುದರ ಪ್ರಾಮುಖ್ಯ ಪಾಟ್ನಾ ಹೈಕೋರ್ಟಿನ ಈ ಮುಂದಣ ತೀರ್ಪಿನಿಂದ ಸ್ಪಷ್ಟವಾಗುತ್ತದೆ.

ವಾಚಸ್ಪತಿಮಿಶ್ರನ 'ವಿವಾದಚಿಂತಾಮಣಿ'ಯ ಒಂದು ಭಾಗದ ಬಗ್ಗೆ ಪಾಟ್ನಾ ಹೈಕೋರ್ಟ್ ಪರಿಶೀಲಿಸುತ್ತಿತ್ತು. **ರಾಜರಮಿ ದಿವ್ಯ ವಿ. ಗೋಮತಿ ದಿವ್ಯ**[16] ಪ್ರಕರಣದಲ್ಲಿ ಸ್ತ್ರೀಧನದ ಉತ್ತರಾಧಿಕಾರದಲ್ಲಿ ಶ್ರಾದ್ಧ ಮಾಡಲು ಸಮರ್ಥಳಲ್ಲದ ವಿಧವೆ ಪುತ್ರಿ ಅಂಥದಕ್ಕೆ ಅರ್ಹಳಾಗಿರುವ ವಿವಾಹಿತ ಪುತ್ರಿಯಿಂದ ಹೊರತಾಗುವಳೇ ಎಂಬುದು ಪ್ರಶ್ನೆಯಾಗಿತ್ತು. **ಸಾವಿತ್ರಿ ಠಾಕುರಾಯಿನ್ ವಿ. ಶ್ರೀಮತಿ ಸವಿ**[17] ಈ ಪ್ರಕರಣದಲ್ಲಿ ಒಬ್ಬ ವಿಧವೆಯು ತನ್ನ ಪತಿಯ ಅವಿಭಾಜಿತರಕ್ತಸಂಬಂಧಿ (nephew)ಯಿಂದ, ತನ್ನ ಪತಿಯ ಶ್ರಾದ್ಧಕ್ಕಾಗಿ ತಾನು ಮಾಡಿದ ವೆಚ್ಚಗಳನ್ನು ವಸೂಲುಮಾಡಿಕೊಳ್ಳಬಹುದೇ ಎಂಬುದು ಪ್ರಶ್ನೆಯಾಗಿತ್ತು. ಈ ಎರಡೂ ಪ್ರಕರಣಗಳಲ್ಲಿನ ಹಕ್ಕು 'ವಿವಾದ ಚಿಂತಾಮಣಿ'ಯಲ್ಲಿನ ಈ ಮುಂದಣ ಭಾಗದಮೇಲೆ ಅವಲಂಬಿತವಾಗಿತ್ತು.

> ಅನಪತ್ಯಸ್ಯ ಪುತ್ರಪೌತ್ರಪ್ರಪೌತ್ರಹೀನಸ್ಯ ಪುತ್ರಃ ಪೌತ್ರಃ ಪ್ರಪೌತ್ರೋ ವೇತ್ಯಾದಿನಾ ಅಮೀಷಾಂ ಪಾರಿಕಕ್ರಮೇಣೈವ ಸ್ವತಃ ಅಧಿಕಾರೇ ಸಿದ್ಧೇ ತತ್ಸಮಾನಶೀಲಸ್ಯ ಋಕ್ತಗ್ರಹಣಸ್ಯಾಪಿ ತಥೈವಾಧಿಕಾರಸಿದ್ಧೇಃ ॥ ಏವಂ ಚ ಪ್ರಪೌತ್ರಾಭಾವೇ ಪತ್ನ್ಯಾಧಿಕಾರಃ"

ಈ ಭಾಗವು ಬಾಬೂ ಪ್ರಸನ್ನ ಕುಮಾರ ಟಾಗೂರರ ಭಾಷಾಂತರದಲ್ಲಿ ಈ ರೀತಿ ಇದೆ:

The right of performing funeral obsequies is

settled according to the following authority : 'the son, the son of a son, and the son of a grandson'. Hence the right of inheritance is likewise established. Therefore in default of a great-grandson the estate devolves the widow.'

[ಇದನ್ನು ಈ ರೀತಿ ಅನುವಾದಿಸಬಹುದು : ಮರಣೋತ್ತರ ಸಂಸ್ಕಾರಾದಿಗಳ ಹಕ್ಕನ್ನು ಈ ಮುಂದಿನ ಪ್ರಮಾಣಾನುಸಾರ ಇತ್ಯರ್ಥಪಡಿಸಬಹುದು–ಮಗ, ಮಗನ ಮಗ ಮತ್ತು ಮೊಮ್ಮಗನ ಮಗ. ಇದೇ ಪ್ರಕಾರವಲ್ಲಿ ಉತ್ತರಾಧಿಕಾರದ ಹಕ್ಕೂ ಸ್ಥಾಪಿತವಾಗುವುದು. ಆದ್ದರಿಂದ ಮರಿಮಗನು ಇಲ್ಲದಿದ್ದರೆ ಆಸ್ತಿಯು ವಿಧವೆಗೆ ಪ್ರಾಪ್ತವಾಗುವುದು.]

ಈ ಭಾಷಾಂತರವನ್ನು ಮೂಲದೊಡನೆ ಹೋಲಿಸಿ ಖ್ಯಾತ ನ್ಯಾಯಮೂರ್ತಿಗಳು ಈ ರೀತಿ ಅಭಿಪ್ರಾಯಪಟ್ಟರು :

"ಟಾಗೂರರ ಭಾಷಾಂತರದಲ್ಲಿ ಕೊನೆಯ ವಾಕ್ಯವು ಮೂಲದಲ್ಲಿನ ಆದ್ದರಿಂದ (therefore) ಎಂಬ ಪದವಿಲ್ಲದ ಮುಂದಣ ಪ್ಯಾರಾದ ಒಂದು ಭಾಗ ; **ಇದು ಈ ಭಾಗದ** ಇಡೀ ಸ್ವರೂಪವನ್ನೇ ಬದಲಾಯಿಸುತ್ತದೆ. ಟಾಗೂರರ ಭಾಷಾಂತರದ therefore (ಆದ್ದರಿಂದ) ಇಲ್ಲದಿದ್ದರೆ ವಾದಿಯ ಪ್ರಕರಣವೇ ನಿಲ್ಲುವುದಿಲ್ಲ.... ಟಾಗೂರರ 'ವಿವಾದ ಚಿಂತಾಮಣಿ'ಯ ಭಾಷಾಂತರ ಅನೇಕ ತಪ್ಪುಗಳಿಂದ ಕೂಡಿದೆ. ಎರಡೂ ಪಕ್ಷಗಳ ಮಾನ್ಯ ನ್ಯಾಯವಾದಿಗಳು ಈ ಅಂಶವನ್ನು ಒಪ್ಪಿಕೊಂಡರು ; ಟಾಗೂರರ ಅನಿಷ್ಪಷ್ಟತೆಯನ್ನು ಇತ್ಯರ್ಥವಾದ ಪ್ರಕರಣಗಳಲ್ಲಿ ಗುರುತಿಸಲಾಗಿದೆ." ಮೂಲದ ಒಂದು ವಾಕ್ಯವನ್ನು ಎರಡಾಗಿ ವಿಭಜಿಸಿ, ಎರಡು ವಾಕ್ಯಗಳನ್ನು ಮೂಲದಲ್ಲಿ ಇಲ್ಲದ therefore ಎಂಬ ಪದದಿಂದ ಸೇರಿಸಿದುದರಿಂದ ಇಡೀ ಅರ್ಥಸ್ವರೂಪವೇ ತುಂಬ ಬದಲಾಗಿಬಿಟ್ಟಿತು. ಉತ್ತರಾಧಿಕಾರಕ್ಕೆ ಹಕ್ಕು ಶ್ರಾದ್ಧಮಾಡಲು ಹಕ್ಕಿನ ಪರಿಣಾಮ ಎಂಬ ಅರ್ಥವನ್ನು ಭಾಷಾಂತರ ನೀಡುತ್ತದೆ. ಮೂಲದಲ್ಲಿ ಆ ಭಾವವಿಲ್ಲ. ಹಾಗಾಗಿ ವಿಧವೆಪುತ್ರಿಗಿಂತ ವಿವಾಹಿತ ಪುತ್ರಿಯ ಪರವಾಗಿ ಹಕ್ಕು ಈ ಭಾಷಾಂತರದಿಂದ ಲಭಿಸಿತ್ತು. ಮೂಲದೊಡನೆ ತಾಳೆ ನೋಡಿದನಂತರ ಈ ತಪ್ಪುಭಾವನೆಯನ್ನು ನಿವಾರಿಸಲಾಯಿತು ; ಇಬ್ಬರು ಪುತ್ರಿಯರಿಗೂ ಉತ್ತರಾಧಿಕಾರದಲ್ಲಿ ಪಾಲು ದೊರೆಯಿತು. ಇದೇ ಆಧಾರದ ಮೇಲೆಯೇ ಎರಡನೆಯ ಪ್ರಕರಣದಲ್ಲಿ ಶ್ರಾದ್ಧದ ವೆಚ್ಚಗಳ ವಸೂಲಿಯ ಹಕ್ಕನ್ನು ತಳ್ಳಿಹಾಕಲಾಯಿತು.

ಆದ್ದರಿಂದ ಅತ್ಯಂತ ವಿವೇಕದ ಮಾರ್ಗವೆಂದರೆ, ಮೂಲದ ವಾಕ್ಯರಚನಾ ವಿನ್ಯಾಸವನ್ನು ವಿಧೇಯವಾಗಿ ಅನುಸರಿಸುವುದಾಗಿದೆ ; ಹಾಗೆ ಮಾಡುವುದರಿಂದ ಸ್ವಲ್ಪಮಟ್ಟಿನ ಕೃತಕತೆಯುಂಟಾದರೂ ತೊಂದರೆಯಿಲ್ಲ. ಸಂಬಂಧಪಟ್ಟ ಶಾಸನದಲ್ಲಿ ಕಾಪಾಡಿಕೊಂಡು ಬರಲಾಗಿರುವ ವ್ಯಕ್ತಿಗಳ ಕಾನೂನಿನ ಹಕ್ಕುಗಳನ್ನು ರಕ್ಷಿಸಲು ಹಾಗೂ ಅವನ್ನು ಅದೇ ರೀತಿ ಉಳಿಸಿಕೊಂಡು ಬರಲು ನಾವು ತೆರಬೇಕಾದ ಮೌಲ್ಯ ಇದೇ ಆಗಿದೆ. ಭಾಷಾ-

ಲಾಲಿತ್ಯದ ಯಾವುದೇ ಲಾಭದ ದೃಷ್ಟಿಯಿಂದ ಈ ಹಕ್ಕುಗಳನ್ನು ಅಪಾಯಕ್ಕೆ ಗುರಿ ಮಾಡುವಂತಿಲ್ಲ.

ಭಿನ್ನವಾದ ದೃಷ್ಟಿಕೋನವನ್ನು ಅನುಸರಿಸಿ, ಸಾಹಿತ್ಯಕ ಅಭಿವ್ಯಕ್ತಿಯಲ್ಲಿ ಹೆಚ್ಚಿನ ಲಾಲಿತ್ಯದ, ಸರಳತೆಯ ದೃಷ್ಟಿಯಿಂದಾಗಿ, ವಾಕ್ಯರಚನಾ ವಿನ್ಯಾಸವನ್ನು ವ್ಯತ್ಯಾಸ ಮಾಡಿದರೆ ಆಗ ನಮಗೆ ಲಭಿಸುವುದು ಯಥಾರ್ಥ ಪಾಠವಾಗುವುದಿಲ್ಲ ; ಆದರೆ ಅದು ಪ್ರಾದೇಶಿಕ ಭಾಷೆಯಲ್ಲಿ ಅಳವಡಿಸಿದಂತೆ ಮಾತ್ರವಾಗುತ್ತದೆ ; ಇದು ಮೂಲಪಾಠಕ್ಕೆ ಪರಿಪೂರ್ಣವಾಗಿ ವಿಧೇಯವಾಗಿರುವುದಿಲ್ಲ. ಪ್ರೀವಿ ಕೌನ್ಸಿಲ್ **ಇಮಾಮ್ ಬಂದಿ ವಿ. ಮುತ್ಸದ್ದಿ**[18] ಪ್ರಕರಣದಲ್ಲಿ ನೀಡಿದ ತೀರ್ಪಿನಲ್ಲಿನ ಉದ್ಧರಣದಿಂದ ಈ ಅಂಶ ಸ್ಪಷ್ಟವಾಗುತ್ತದೆ.

ಆ ಪ್ರಕರಣದಲ್ಲಿ ಪ್ರೀವಿ ಕೌನ್ಸಿಲ್ *Hedayah*ನ ಕೆಲವು ಭಾಗಗಳ ಹ್ಯಾಮಿಲ್ಟನ್‌ನ ಭಾಷಾಂತರ ಮತ್ತು *Fatwai Alamgiri*ಯ ಕೆಲವು ಭಾಗಗಳ ಬೈಲಿಯ ಭಾಷಾಂತರ – ಇವನ್ನು ಪರಿಶೀಲಿಸುತ್ತಿತ್ತು. ಅನಧೀಕೃತ ವ್ಯಕ್ತಿಗಳಿಂದ ಮಾರಾಟಕ್ಕೆ ಸಂಬಂಧಿಸಿದಂತೆ ಬೈಲಿಯ ಭಾಷಾಂತರ :

> "When a person sells the property of another the sale is *suspended* for the sanction or ratification of the proprietor."

("ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯ ಆಸ್ತಿಯನ್ನು ಮಾರಾಟ ಮಾಡಿದರೆ ಮಾರಾಟವನ್ನು ಮಾಲೀಕನ ಮಂಜೂರಾತಿ ಅಥವಾ ಸ್ಥಿರೀಕರಣಕ್ಕಾಗಿ **ತಡೆ ಹಿಡಿದಿಡಲಾಗುವುದು.**") ಈ ಭಾಗವು ಮದ್ರಾಸ್ ಹೈಕೋರ್ಟ್ ಅನುಭೋಗಿ ರಕ್ಷಕನಿಂದ (*de facto* guardian) ಮಾರಾಟವು ತಡೆದಿಡಲಾಗಿರುವುದು (suspended) ಮಾತ್ರವಾಗಿರುವುದರಿಂದ ಅದು ಆರಂಭದಿಂದಲೇ ಅನೂರ್ಜಿತಗೊಳ್ಳುವುದಿಲ್ಲ ಎಂಬ ತೀರ್ಮಾನಕ್ಕೆ ಬರಲು ಕಾರಣವಾಯಿತು. ಈ ಅಭಿಪ್ರಾಯವನ್ನು ತಳ್ಳಿಹಾಕುತ್ತಾ ನ್ಯಾಯಮೂರ್ತಿ ಅಮೀರ್ ಅಲಿ ಸಂಬಂಧಪಟ್ಟ ಭಾಷಾಂತರದ ಬಗ್ಗೆ ಈ ಅಭಿಪ್ರಾಯ ವ್ಯಕ್ತಪಡಿಸಿದರು :

> "Both Mr. Hamilton and Mr. Bailee in their *renderings* have with the object of elucidation added phrases which donot exist in the original.... The word translated as 'suspended' is derived from the same root as the word that has been translated in the Heading as Dependent and in this connection really "is dependent upon." Also

the word 'ratification' has been introduced by Bailee by way of explanation."

ಈ ಬಗೆಯ ಭಾಷಾಂತರವನ್ನು ನ್ಯಾಯಮೂರ್ತಿ ಅಮಿರ್ ಅಲಿಯವರು "ಇಂಗ್ಲಿಷಿಗೆ ಭಾವಾನುವಾದ", ಕೇವಲ "ಅನುವಾದ"ವೆಂದು ಹೇಳಿರುವರು. ಇದೇ ರೀತಿ ನಾವು ಇಂಗ್ಲಿಷ್‌ನ ಶಾಸನಗಳನ್ನು ಪ್ರಾದೇಶಿಕ ಭಾಷೆಗಳು ಮತ್ತು ಹಿಂದಿಗೆ ಅನುವಾದಿಸಿಕೊಳ್ಳಬಹುದು. ಶಾಸನ ಪಾಠದಲ್ಲಿಲ್ಲದ ಪದಗಳನ್ನು ವಿವರಣೆಯ ರೂಪದಲ್ಲಿ ಸೇರಿಸುವುದು, ವಾಕ್ಯರಚನಾ ವಿನ್ಯಾಸದ ವಿರುದ್ಧವಾಗಿ ರಚಿಸುವುದು, ಏಕರೂಪ ಪಾರಿಭಾಷಿಕ ಶಬ್ದಾವಳಿಯನ್ನು ಕಟ್ಟುನಿಟ್ಟಾಗಿ ಪಾಲಿಸದಿರುವುದು–ಹೀಗೆ ಮಾಡುತ್ತಿರುವವರೆವಿಗೆ, ಅವು ನ್ಯಾಯಮೂರ್ತಿ ಅಮಿರ್ ಅಲಿಯವರ ಮಾತಿನಲ್ಲಿಯೇ ಹೇಳಬೇಕೆಂದರೆ ಮೂಲದ "ಭಾವಾನುವಾದ"ಗಳಾಗಿ ಉಳಿಯುವುದೇ ವಿನಾ ಅದಕ್ಕಿಂತ ಹೆಚ್ಚೇನೂ ಆಗಲಾರವು. ಅವು ವಾಸ್ತವವಾಗಿ ಸಾರ್ವಜನಿಕರಿಗೆ ಕಾನೂನು ಸುಲಭವಾಗಿ ಲಭ್ಯವಾಗುವಂತೆ ಮಾಡುವ ಅತ್ಯಂತ ಉಪಯುಕ್ತ ಉದ್ದೇಶವನ್ನು ಪೂರೈಸುತ್ತವೆ, ಆದರೆ ಅವು ಯಥಾರ್ಥ ಪಾಠಗಳಾಗುವುದಿಲ್ಲ ಎಂಬುದನ್ನು ಗೌರವದಿಂದ ಒಪ್ಪಿಕೊಳ್ಳಬೇಕು.

ಕೊನೆಯದಾಗಿ, ಇಂಗ್ಲಿಷ್ ಭಾಷೆಯಲ್ಲಿರುವ ಶಾಸನಗಳಿಗೆ ಪ್ರಾದೇಶಿಕ ಭಾಷೆಗಳಲ್ಲಿ ಯಥಾರ್ಥ ಪಾಠವನ್ನು ಸಿದ್ಧಪಡಿಸುವಲ್ಲಿ ಶಾಸನ ರಚನೆಯ ಈ ಮುಂದಣ ತತ್ತ್ವಗಳನ್ನು ಕಟ್ಟುನಿಟ್ಟಾಗಿ ಗಮನಿಸಬೇಕು.

(i) **ಅಭಿವ್ಯಕ್ತಿಯ ಏಕರೂಪತೆ** (Uniformity of expression) :

ಒಂದು ವಿಶಿಷ್ಟ ಕಾನೂನು ಪರಿಕಲ್ಪನೆಯನ್ನು ಸೂಚಿಸಲು ಒಂದೇ ರೀತಿಯ ಪದ ವಿನ್ಯಾಸ (ಅಭಿವ್ಯಕ್ತಿ ಕ್ರಮ)ವನ್ನು ಇಟ್ಟುಕೊಳ್ಳುವುದರಿಂದ ಈ ಧ್ಯೇಯವನ್ನು ಸಾಧಿಸಬಹುದಾಗಿದೆ. ಹಿಂದಿ ಹಾಗೂ ಪ್ರತಿಯೊಂದು ಪ್ರಾದೇಶಿಕ ಭಾಷೆಯ ಮೂಲಾರ್ಥದ ಜೊತೆಗೆ ಹೆಚ್ಚಿನ ಅರ್ಥಗಳನ್ನು ನೀಡುವ ರೂಪುರೇಖೆಗಳನ್ನು ಈ ಧ್ಯೇಯ ಸಾಧನೆಗಾಗಿ ಸೂಕ್ತವಾಗಿ ವಿವರಿಸಬೇಕು ; ಏಕೆಂದರೆ ಈ ವಿಷಯದಲ್ಲಿ ಪರಿಚಯವಿರುವವರಿಗೆ ಪ್ರಸಕ್ತ ಲೋಪ–ದೋಷಗಳ ಬಗ್ಗೆ ಸಂಪೂರ್ಣ ಅರಿವಿದೆ. ಇಂಗ್ಲಿಷ್ ಭಾಷೆಯಲ್ಲಿ ಕರ್ತವ್ಯ (duty) ಎಂಬುದು ಹಕ್ಕಿನೊಡನೆ (right) ಪರಸ್ಪರ ಸಂಬಂಧ ಪಡೆದಿರುವುದು (ಎಂದರೆ ಒಂದಕ್ಕೆ ಹಕ್ಕಿರುವುದಾದರೆ ಮತ್ತೊಂದಕ್ಕೆ ಸಂವಾದಿಯಾದ ಕರ್ತವ್ಯವಿರುವುದು), ಹೊಣೆಗಾರಿಕೆಯು ಅಧಿಕಾರದೊಡನೆ ಪರಸ್ಪರ ಸಂಬಂಧ ಪಡೆದಿರುವುದು, ವಿನಾಯಿತಿ (immunity) ಎಂಬುದು ಅಸಮರ್ಥತೆ (disability) ಎಂಬುದರೊಡನೆ ಪರಸ್ಪರ ಸಂಬಂಧ ಪಡೆದಿರುವುದಾದರೆ, ವಿಮುಕ್ತತೆಗೆ (Liberty) ಪರಸ್ಪರ ಸಂಬಂಧ ಸೂಚಿಸುವ ಪದವೇ ಇಲ್ಲ ಎಂಬುದನ್ನು ಸಾಲ್ಮಂಡ್ ಸೂಚಿಸಿದರು. ಹಾಗಾಗಿ ವಿಮುಕ್ತತೆಗೆ (Liberty) ಪರಸ್ಪರ ಸಂಬಂಧದ ಪದ ಸೂಚಿಸಲು ಹೋಫೆಲ್ಡ್ ರೂಪಿಸಿದ 'No-right' ಎಂಬ ಪದವನ್ನು ಆ ಮಹಾನ್ ನ್ಯಾಯಶಾಸ್ತ್ರ ಕೋವಿದರು ಅಂಗೀಕರಿಸಿದರು ಮತ್ತು ಅದನ್ನು ಈ ರೀತಿ ವಿವರಿಸಿದರು ; B ಗೆ ವಿರುದ್ಧವಾಗಿ A ಗೆ

ವಿಮುಕ್ತತೆಯಿವೆ ; ಅದಕ್ಕೆ ಸಂವಾದಿಯಾಗಿ A ಗೆ ಪ್ರತಿಯಾಗಿ B ಗೆ ಹಕ್ಕಿಲ್ಲ. ಒಂದು ಭಾಷೆಯು ಹಿಂದೆ ಸಿದ್ಧವಾಗಿರದ ಆಗತ್ಯತೆಗಳನ್ನು ಪೂರೈಸಬೇಕಾದಲ್ಲಿ ಹೊಸ ಪದಗಳ ಸೃಷ್ಟಿಯಿಂದ ಭಾಷಾ ವಿಸ್ತರಣೆಯನ್ನು ತಪ್ಪಿಸಲಾಗುವುದಿಲ್ಲ.

(ii) **ಅಭಿಪ್ರಾಯದ ಏಕರೂಪತೆ** (Uniformity of import) : ಆಯಾ ಪ್ರಾದೇಶಿಕ ಭಾಷೆಯು ಜಾಯಮಾನ ಅವಕಾಶ ನೀಡುವಷ್ಟರಮಟ್ಟಿಗೆ ಮೂಲದ ವಾಕ್ಯರಚನಾ ವಿನ್ಯಾಸವನ್ನು ಅನುಸರಿಸುವುದರ ಮೂಲಕ ಮತ್ತು ಮೂಲ ಪಾಠದಲ್ಲಿ ಕಂಡುಬರದ ಅರ್ಥವನ್ನು ಪ್ರಕ್ಷೇಪಮಾಡಿ ವಿಶದೀಕರಿಸುವುದನ್ನು ತಪ್ಪಿಸು ವುದರಿಂದ ಈ ಧ್ಯೇಯ ಸಾಧಿಸಬಹುದು. ಮೂಲಪಾಠ ಯಾವಾಗಲೂ ಅಥವಾ ಆತ್ಯಗತ್ಯವಾಗಿ ಪರಿಪೂರ್ಣವಾಗಿರುತ್ತದೆ ಎಂದು ಇದರ ಅರ್ಥವಲ್ಲ. ವಾಸ್ತವವಾಗಿ ಶಾಸನ ರಚನಾಕಾರನ ಅನೇಕ ದೋಷಗಳಿಂದ ಅದು ಕೆಟ್ಟು ಹೋಗಿರಲೂಬಹುದು. ಆದರೆ ಅಂಥ ದೋಷಗಳನ್ನು ಸರಿಪಡಿಸುವುದು ಭಾಷಾಂತರಕಾರನ ಕಾರ್ಯವಲ್ಲ ಎಂದು ಒತ್ತಿ ಹೇಳಲಾಗಿದೆ. ಪ್ರಾಯಃ ಅವನ್ನು ಅರ್ಥೈಸುವ ಪ್ರಕ್ರಿಯೆಯಲ್ಲಿ ಖ್ಯಾತ ನ್ಯಾಯಾಧೀಶರು ಅವುಗಳಲ್ಲಿನ ದೋಷಗಳನ್ನು ಮೊದಲು ಕಂಡುಹಿಡಿದನಂತರ ಅದು ಶಾಸಕರಿಗಾಗಿಯೇ ಇರುವ ಕಾರ್ಯವಾಗುತ್ತದೆ.[19]

ಅಡಿಟಿಪ್ಪಣಿಗಳು

** ಕೇಂದ್ರ ಸರಕಾರ : 5–6–61 ರಿಂದ ಅಧ್ಯಕ್ಷರು : ಶ್ರೀ ಆರ್.ಎನ್. ಶರ್ಮ

1 ಗುಜರಾತ್ : 6–6–64 ರಿಂದ ಅಧ್ಯಕ್ಷರು : ಶ್ರೀ ವೈ.ಎನ್. ಮೆಹತಾ

2 ಕೇರಳ : 14–6–68 ರಿಂದ ಅಧ್ಯಕ್ಷರು : ಶ್ರೀ ಎಂ. ಪ್ರಭ

3 ಮೈಸೂರು : 6–4–64 ರಿಂದ ಅಧ್ಯಕ್ಷರು : ಶ್ರೀ ಎಸ್.ಎಸ್. ಮಳೀಮಠ

4 ತಮಿಳುನಾಡು : 16–12–65 ರಿಂದ ಅಧ್ಯಕ್ಷರು : ಶ್ರೀ ಎಂ. ಅನಂತ ನಾರಾಯಣ

5 ಪಶ್ಚಿಮ ಬಂಗಾಳ : 17–9–64 ರಿಂದ ಅಧ್ಯಕ್ಷರು : ಶ್ರೀ ಪಿ. ಚಕ್ರವರ್ತಿ

6 ಆಂಧ್ರ ಪ್ರದೇಶ : 1–9–64 ರಿಂದ ಅಧ್ಯಕ್ಷರು : ಮಾನ್ಯ ಪಿ. ವಿ. ನರಸಿಂಹ ರಾವ್, ಶಿಕ್ಷಣ ಸಚಿವರು

7 ಅಸ್ಸಾಂ : ಅಧ್ಯಕ್ಷರು : ಮಾನ್ಯ ಶ್ರೀ ಬಿ. ಹಜ್ಜರ್, ಶಿಕ್ಷಣ ಸಚಿವರು

8 ಮಹಾರಾಷ್ಟ್ರ : 14–2–61 ರಿಂದ ಅಧ್ಯಕ್ಷರು : ವೈ.ಆರ್. ಧಾತೆ

9 (1899) I.L.R. 22 Mad. 398 : L.R. 26 I.A. 113 : 9 M.L.J. 67 (P.C.)

10 (1899) I.L.R. 22 Mad 398 : L. R. 26.I.A. 133 : 9 M.L.J. 67 (P.C.)

11 (1915) I.L.R. 37 All 604 : L.R. 42 I.A. 208 : 29 M.L.J. 434 (P.C.)

12 (1915) I.L.R. 42 Cal. 384 : L.R. 41, I.A. 290 : 27 MLJ 333 (P.C.)

13 (1881) I.L.R. 6 Cal. 119 : 6 Cal. L R. 500 (F.B.)

14 (1933) I.L.R. 56 Mad. 759 : 65 M.L.J. 58 (F.B.)

15 I.L R. (1956) Mad. 459 : (1956) 1 M.L.J. 441 (F.B.)

16 (1928) I.L.R. 7 Pat. 820

17 (1933) I.L.R. 12 Pat. 359

18 (1918) I.L.R. 45 Cal. 878 : L.R. 45 I.A. 73 : 35 M.L.J. 422 (P.C.)

19 ಈ ಅನುವಾದಕ P.V. Kane ಯವರ *History of Dharmasāstra* ದ ಅನುವಾದದ ಸಂಪಾದನ ಕಾರ್ಯದಲ್ಲಿ ತೊಡಗಿದ್ದಾಗ ಪ್ರಾಸಂಗಿಕವಾಗಿ ಗಮನಿಸಿದ ಅಂಶ : Sutherland wrongly introduced the word 'marriage' after *niyoga* in his translation and some of the High Courts in India, following this wrong translation evolved the rule that no one could be adopted whose mother the adopting father could not have legally married in her maiden state. [Vol. I, Part II, p. 922[(ನೋಡಿ : I.L.R. 11 Mad. 49 (F.B.), I.L R. 27 All. 417, I.L.R. 43 Mad. 830)

[ಸದರ್‌ಲ್ಯಾಂಡ್ ತನ್ನ ಅನುವಾದದಲ್ಲಿ "ನಿಯೋಗ" ಎಂಬ ಪದದ ನಂತರ "ವಿವಾಹ" ಎಂಬ ಪದವನ್ನು ತಪ್ಪಾಗಿ ಸೇರಿಸಿದನು. ಭಾರತದ ಕೆಲವು ಹೈಕೋರ್ಟುಗಳು ಈ ತಪ್ಪು ಅನುವಾದವನ್ನು ಅನುಸರಿಸಿ ದತ್ತು ಸ್ವೀಕಾರ ಮಾಡಿಕೊಳ್ಳುವ ತಂದೆಯು ಯಾವೊಬ್ಬಳನ್ನಾದರೂ ಅವಳ ಕನ್ಯಾಸ್ಥಿತಿಯಲ್ಲಿ ವಿಧಿಬದ್ಧವಾಗಿ ವಿವಾಹ ಮಾಡಿಕೊಳ್ಳದಿದ್ದರೆ ಅಂಥವಳ ಮಗನನ್ನು ದತ್ತು ತೆಗೆದುಕೊಳ್ಳುವಂತಿಲ್ಲ ಎಂಬ ವಿಧಿಯನ್ನು ರೂಪಿಸಿದುವು.]

ಕಾನೂನು ನಮ್ಮ ಜೀವನದ ಒಂದು ಅಂಗ. ಮಾನವ ಶಾಂತಿಯುತ ಜೀವನವನ್ನು ನಡೆಸಬೇಕಾದರೆ ಅವನಿಗೆ ಭದ್ರತೆ ಹಾಗೂ ರಕ್ಷಣೆ ಅತ್ಯಗತ್ಯ. ಅಂತಹ ಅಗತ್ಯವನ್ನು ಪೂರೈಸುವುದರಲ್ಲಿ ರಾಷ್ಟ್ರದ ಕಾನೂನುಗಳ ಪಾತ್ರ ಮಹತ್ತರ ಹಾಗೂ ಅತಿ ಮುಖ್ಯ. ಅಂತೆಯೇ ಅವುಗಳ ಬಗೆಗೆ ಸಾಮಾನ್ಯ ಮನುಷ್ಯನಿಗೆ ತಿಳಿವಳಿಕೆ ನೀಡಬೇಕಾದುದೂ ರಾಷ್ಟ್ರದ ಕರ್ತವ್ಯ. ಕಾನೂನಿನ ಬಗ್ಗೆ ಅಜ್ಞಾನ ಕ್ಷಮ್ಯವಲ್ಲವಾದರೂ, ಸಾಮಾನ್ಯ ಮನುಷ್ಯನ ಬಾಗಿಲಿಗೆ ಕಾನೂನನ್ನು ಒಯ್ದು ಅವನಿಗೆ ಅದರ ಅರಿವುಂಟು ಮಾಡಬೇಕಾದದ್ದು ಪ್ರತಿಯೊಬ್ಬ ವಕೀಲನ ಹಾಗೂ ನ್ಯಾಯಶಾಸ್ತ್ರಜ್ಞನ ಕರ್ತವ್ಯ.

ಅಂತೆಯೇ ಆಯಾ ರಾಜ್ಯಗಳಲ್ಲಿ ಜನರು ಆಡುವ ಪ್ರಮುಖ ಭಾಷೆಗಳಲ್ಲಿ ಕಾನೂನಿನ ಅನುವಾದವಾಗಬೇಕು. ಇದನ್ನೊಂದು ಪವಿತ್ರ ಕರ್ತವ್ಯವೆಂದು ಕಾನೂನಿನ ಅರಿವುಳ್ಳವರೆಲ್ಲರೂ ಪರಿಗಣಿಸಬೇಕು . . . .

‘ ಭಾರತದ ಸಂವಿಧಾನಾತ್ಮಕ ಇತಿಹಾಸ ’
ಎ. ಬಿ. ಕೀತ್ (ಅನು : ಕೃಷ್ಣಮೂರ್ತಿ ಸಿರ್ಸಿ)
ಸಿ. ಕೆ. ಎನ್. ರಾಜ ಅವರ ಮುನ್ನುಡಿಯಿಂದ

ಡಿ. ಎಲ್. ಪಾಟೀಲ

ವೈಜ್ಞಾನಿಕತೆ - ವೈಚಾರಿಕತೆಯ ಎರಡನೆಯ ಮುಖ

ಅಧುನಿಕ ಯುಗದಲ್ಲಿ ಅಂದರೆ ೧೬ನೇ ಶತಮಾನದಿಂದೀಚೆಗೆ ವೈಜ್ಞಾನಿಕತೆ ವೈಚಾರಿಕತೆಯ ಅತ್ಯಂತ ಪ್ರಬಲವಾದ ಅಭಿವ್ಯಕ್ತಿಯಾಗಿದೆ. ವೈಚಾರಿಕತೆ ಎಂದರೆ ವೈಜ್ಞಾನಿಕತೆಯೇ ಎನ್ನುವುದರ ವೈಪರೀತ್ಯಕ್ಕೂ ಕೆಲವು ಮಂದಿ ಹೋಗಿದ್ದಾರೆ. ಆದರೆ ವೈಜ್ಞಾನಿಕತೆ ವೈಚಾರಿಕತೆಯ ಒಂದು ಮಹತ್ವದ ಮುಖ ಮಾತ್ರ. ಅದು ವೈಚಾರಿಕತೆಯನ್ನು ಸಂಪೂರ್ಣವಾಗಿ ಅಭಿವ್ಯಕ್ತಿಸುವುದಿಲ್ಲ. ಏಕೆ ಎಂಬುದನ್ನು ಮುಂದೆ ಈ ಪ್ರಬಂಧದಲ್ಲಿ ಚರ್ಚಿಸಲಾಗುವುದು.

ಆಧುನಿಕ ವಿಜ್ಞಾನ ಮತ್ತು ವೈಜ್ಞಾನಿಕತೆಗಳು ೧೬ನೇ ಶತಮಾನದಿಂದೀಚೆಗೆ ತೀವ್ರವಾಗಿ ಬೆಳೆದು ಬಂದವು. ಅದಕ್ಕೂ ಹಿಂದೆ ವೈಜ್ಞಾನಿಕತೆ ಅಥವಾ ವಿಜ್ಞಾನ ಇರಲೇಇಲ್ಲ ಎಂದಲ್ಲ. ಎಲ್ಲಾ ಪುರಾತನ ಸಂಸ್ಕೃತಿಗಳಲ್ಲಿ (ಉದಾ :- ಭಾರತ, ಚೀನಾ, ಗ್ರೀಸ್ ಇತ್ಯಾದಿ) ಕೆಲವು ವಿಚಾರವಂತರಾದರೂ ವೈಜ್ಞಾನಿಕವಾಗಿ ಯೋಚಿಸಲು ಪ್ರಯತ್ನಿಸಿದ್ದಾರೆ. ಗ್ರೀಸ್ ದೇಶದಲ್ಲಿ ಪೈಥಾಗರಾಸ್, ಡೆಮಾಕ್ರಿಟಸ್, ಯೂಕ್ಲಿಡ್, ಆರ್ಕಿಮಿಡಿಸ್ ಮುಂತಾದವರು ; ಭಾರತದಲ್ಲಿ ಆರ್ಯಭಟ, ಭಾಸ್ಕರ, ಬ್ರಹ್ಮಗುಪ್ತ, ಚರಕ, ಧನ್ವಂತರಿ, ಶುಶ್ರುತ ಮುಂತಾದರು ನಿಂಸ್ಸದೇಹವಾಗಿ ಭೌತಿಕ ಪ್ರಪಂಚವನ್ನು ವೈಜ್ಞಾನಿಕವಾಗಿ ಸಂಶೋಧಿಸಿದವರ ಗುಂಪಿಗೆ ಸೇರುತ್ತಾರೆ. ಆದರೆ ವೈಜ್ಞಾನಿಕತೆ ನಿಜವಾಗಿಯೂ ಪ್ರಬುದ್ಧವಾದದ್ದು ಮತ್ತು ಫಲಪ್ರದವಾದದ್ದು. ಹದಿನಾರನೆಯ ಶತಮಾನದಿಂದಲೇ ಎನ್ನಬಹುದು.

I) ವೈಜ್ಞಾನಿಕತೆ ಎಂದರೇನು ?

ವೈಜ್ಞಾನಿಕತೆ ಎನ್ನುವ ಪದ ವಿಜ್ಞಾನಗಳ ಸಂಶೋಧನಾ ವಿಧಾನಕ್ಕೆ ಸಂಬಂಧಿಸಿರಬಹುದಾದರೂ ಅದರ ವ್ಯಾಪ್ತಿ ವಿಚಾರಗಳಿಗೇ ಸೀಮಿತವಾಗಿಲ್ಲ. ಐತಿಹಾಸಿಕ ಕಾರಣಗಳಿಂದಾಗಿ ಮತ್ತು ವಸ್ತು ಸ್ವರೂಪದಿಂದಾಗಿ ಅಧುವಿಕ ಅರ್ಥದಲ್ಲಿ ವೈಜ್ಞಾನಿಕತೆಯನ್ನು ಯಶಸ್ವಿಯಾಗಿ ಮತ್ತು ಯೋಗ್ಯವಾಗಿ ವಿಜ್ಞಾನಗಳಲ್ಲಿ ಅನ್ವೈಸಿಕೊಳ್ಳಲಾಗಿದೆ. ಆದರೆ ವೈಜ್ಞಾನಿಕತೆಯ ವ್ಯಾಪ್ತಿ ಅಲ್ಲಿಗೇ ಸೀಮಿತವಾಗಿಲ್ಲ. ವೈಜ್ಞಾನಿಕತೆ ಹೆಚ್ಚು ಕಡಿಮೆ

ಮಾನವ ತಾತ್ವಿಕವಾಗಿ ಮತ್ತು ತಾರ್ಕಿಕವಾಗಿ ವಿಚಾರ ಮಾಡಲಾರಂಭಿಸಿದಂದಿನಿಂದಲೇ ಅಸ್ತಿತ್ವಕ್ಕೆ ಬಂದಿತು ಎನ್ನಬಹುದು. ಹದಿನಾರು ಮತ್ತು ಹದಿನೇಳನೆಯ ಶತಮಾನದಲ್ಲಿದ್ದ ಯೂರೋಪಿಯನ್ನರಾದ ಗೆಲಿಲಿಯೋ, ಕೋಪರ್ನಿಕಸ್, ಡೇಕಾರ್ಟೆ ಬೇಕನ್, ನ್ಯೂಟನ್ ಮುಂತಾದವರ ಪ್ರಯತ್ನದಿಂದ ಮಾತ್ರ ವೈಜ್ಞಾನಿಕತೆ ಸ್ಥಾಪಿತವಾಗಲಿಲ್ಲ ಎಂದು ತಿಳಿದುಕೊಳ್ಳುವುದು ಮುಖ್ಯ. ಅವರೆಲ್ಲರಿಗಿಂತಲೂ ಹಿಂದೆ ಇದ್ದ ತತ್ವಜ್ಞಾನಿಗಳು, ತಾರ್ಕಿಕರು ಮತ್ತು ಇತರರೂ ವೈಜ್ಞಾನಿಕತೆಗೆ ತಮ್ಮ ಅಮೂಲ್ಯ ಕಾಣಿಕೆ ಸಲ್ಲಿಸಿದ್ದಾರೆ. ಹಿಂದು ಗಣಿತ ಶಾಸ್ತ್ರಜ್ಞರು ಮತ್ತು ತತ್ವಜ್ಞಾನಿಗಳು, ಗ್ರೀಕ್ ತತ್ವಜ್ಞಾನಿಗಳು ಮತ್ತು ಅರಿಸ್ಟಾಟಲ್‌ರಂಥ ಅಸಮಾನ್ಯ ತರ್ಕಶಾಸ್ತ್ರಜ್ಞರು ಪುರಾತನ ಕಾಲದಲ್ಲಿ ವ್ಯವಸ್ಥಿತವಾಗಿ ಮತ್ತು ಕ್ರಮಬದ್ಧವಾಗಿ ವಿಚಾರ ಮಾಡದಿದ್ದರೆ, ಆಧುನಿಕ ವೈಜ್ಞಾನಿಕತೆ ಹುಟ್ಟುತ್ತಿರಲಿಲ್ಲ ಮತ್ತು ಸ್ಥಾಪಿತವಾಗುತ್ತಿರಲಿಲ್ಲ. ಆದ್ದರಿಂದ ವೈಜ್ಞಾನಿಕತೆಯ ವ್ಯಾಪ್ತಿಯನ್ನು ವಿಜ್ಞಾನಿಗಳಿಗೇ ಸೀಮಿತಗೊಳಿಸಬಾರದು.

ವೈಜ್ಞಾನಿಕತೆಯ ಮೂಲಭೂತ ಸ್ವರೂಪ ಮತ್ತು ಅದರ ಅನ್ವಯಿಕತೆಯನ್ನು ವಿಜ್ಞಾನಿಗಳ ಸಂಶೋಧನಾ ವಿಧಾನದಲ್ಲಿ, ಅವರು ತಮ್ಮ ಸಂಶೋಧನೆಯ ಸಿದ್ಧಾಂತಗಳನ್ನು ಮಂಡಿಸುವ ರೀತಿಯಲ್ಲಿ ಮತ್ತು ಅವರ ಸಂಶೋಧನಾ ಪ್ರಬಂಧಗಳಲ್ಲಿ ಕಾಣಬಹುದು. ಒಬ್ಬ ವಿಜ್ಞಾನಿ ತನ್ನ ವೈಜ್ಞಾನಿಕ ಸಂಶೋಧನೆಯಲ್ಲಿ ಹೀಗೆ ವರ್ತಿಸುತ್ತಾನೆ. ಅವನು ಒಂದು ಘಟನೆ ಅಥವಾ ಒಂದು ವಸ್ತುವಿನ ಕುತೂಹಲ ಕೆರಳಿಸುವ ವರ್ತನೆ ಅಥವಾ ಸ್ವರೂಪವನ್ನು ಅವಲೋಕಿಸುತ್ತಾನೆ. ಹಾಗೆ ಅವಲೋಕಿಸಿದಾಗ ಅವನಿಗೆ ಅನಿಸುತ್ತದೆ "ಈ ಘಟನೆಗೆ ಕಾರಣ ಯಾವುದಿರಬಹುದು ?" ಅಥವಾ "ಈ ವಸ್ತುವಿನ ಈ ವರ್ತನೆಗೆ ಅಥವಾ ಇದರ ಈ ವಸ್ತುಸ್ಥಿತಿಗೆ ಏನು ಕಾರಣಗಳಿರಬಹುದು ?" ಇಂತಹ ಅನಿಸಿಕೆ ವೈಜ್ಞಾನಿಕತೆಗೆ ಬಹಳ ಮಹತ್ವ. ಏಕೆಂದರೆ ವೈಜ್ಞಾನಿಕತೆ ಪ್ರಪಂಚದಲ್ಲಿ ಸಂಭವಿಸುವ ಘಟನೆಗಳಿಗೆ ಮತ್ತು ವಸ್ತುಗಳ ವರ್ತನೆಗಳಿಗೆ ನೈಜ ಕಾರಣಗಳನ್ನು ಸುಸಂಬದ್ಧವಾಗಿ ಸಂಶೋಧಿಸುವ ಪ್ರಾಮಾಣಿಕ ಪ್ರಯತ್ನವಲ್ಲವೆ ಬೇರೇನೂ ಅಲ್ಲ. ಯಾವುದೇ ವಿಖ್ಯಾತ ವಿಜ್ಞಾನಿಯ ಸಂಶೋಧನೆಯನ್ನು ಅಭ್ಯಸಿಸಿದರೂ ಮೇಲಿನ ಸಂಗತಿ ಗೊತ್ತಾಗುತ್ತದೆ. ವಸ್ತುಗಳು ಏಕೆ ಚಲಿಸುತ್ತವೆ ? ಏಕೆ ಚಲಿಸದೆ ಒಂದೇ ಸ್ಥಳದಲ್ಲಿ ಇರುತ್ತವೆ ? ಚಲಿಸಲು ಪ್ರಾರಂಭಿಸಿದರೆ ಒಂದೇ ದಿಕ್ಕಿನಲ್ಲಿ ಏಕೆ ಚಲಿಸುತ್ತವೆ ? ಅಥವಾ ಅವು ಏಕೆ ತಮ್ಮ ದಿಕ್ಕುಗಳನ್ನು ಬದಲಿಸುತ್ತವೆ ಮುಂತಾದ ವಸ್ತುಗಳ ಸ್ವಾಭಾವಿಕ ವರ್ತನೆಗಳು ನ್ಯೂಟನ್‌ನ ಸಂಶೋಧನೆಗಳಿಗೆ ವಿಷಯಗಳಾದವು. ಅವನು ತನ್ನ ಜಗತ್‌ಪ್ರಸಿದ್ಧ ಮೂರು ಚಲನೆಯ ನಿಯಮಗಳಿಂದ ಭೌತಿಕ ವಸ್ತುಗಳ ಸ್ವಾಭಾವಿಕ ವರ್ತನೆಗಳನ್ನು ವಿವರಿಸುತ್ತಿರುವುದು ಎಲ್ಲರಿಗೂ ತಿಳಿದ ವಿಷಯ. ಕೆಲವು ಬಾರಿ ಒಂದೇ ಒಂದು ನಿರ್ದಿಷ್ಟ ಗುರಿ ವಿಜ್ಞಾನಿಗೆ ಇರುತ್ತದೆ. ಉದಾಹರಣೆಗೆ ರಾಬರ್ಟ್ ಮಿಲಿಕನ್‌ರ ಸಂಶೋಧನೆಯ ಗುರಿ ಒಂದೇ ಒಂದು–ಎಲೆಕ್ಟ್ರಾನಿನ ಚಾರ್ಜನ್ನು ಅಳತೆ ಮಾಡುವುದಾಗಿತ್ತು. ಇದನ್ನು ರಾಬರ್ಟ್ ಮಿಲಿಕನ್ (Robert A Millican)ರು ತಮ್ಮ ಜಗತ್ ಪ್ರಸಿದ್ಧ "ಎಣ್ಣೆ–ಹನಿ"

ಪ್ರಯೋಗದಿಂದ (Oil drop experiment) ಸಾಧಿಸಿದರು. ಮಿಲಿಕನ್‌ರ ಈ ಮಹತ್ವದ ಪ್ರಯೋಗದಿಂದ ತಿಳಿದುಬರುವುದೇನೆಂದರೆ ಒಂದು ವೈಜ್ಞಾನಿಕ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ವಿಜ್ಞಾನಿಗಳು ಪ್ರಯೋಗಶೀಲರಾಗಿರುತ್ತಾರೆ.

ಇನ್ನೊಂದು ಉದಾಹರಣೆ ತೆಗೆದುಕೊಳ್ಳಬಹುದಾದರೆ ೧೯ನೇ ಶತಮಾನದ ಕೊನೆಯಲ್ಲಿ ಮೈಕಲ್‌ಸನ್ ಮತ್ತು ಮೋರ್ಲೆ ಎಂಬ ಇಬ್ಬರು ಅಮೇರಿಕನ್ ವಿಜ್ಞಾನಿಗಳು ಒಂದು ಮಹತ್ವದ ಪ್ರಯೋಗ ನಡೆಸಿದರು. ಅದೆಂದರೆ ಅಲ್ಲಿಯವರೆಗೆ ಹೆಚ್ಚು ಕಡಿಮೆ ಎಲ್ಲ ವಿಜ್ಞಾನಿಗಳೂ ನಂಬಿದ್ದ "ಈಥರ್" ಎಂಬ ದ್ರವ್ಯ ನಿಜವಾಗಿಯೂ ವಿಶ್ವದಲ್ಲಿ ಕಣ್ಣಿಗೆ ಕಾಣದಂತೆ ವ್ಯಾಪಿಸಿದೆಯೇ ಎಂಬುದು. ನ್ಯೂಟನ್‌ನಂಥ ವಿಜ್ಞಾನಿಯೂ ಸಹ ಅಂತಹ ದ್ರವ್ಯದ ಅಸ್ತಿತ್ವವನ್ನು ಒಪ್ಪಿಕೊಂಡಿದ್ದನು. "ಈಥರ್" ಎಂಬ ದ್ರವ್ಯ ನಿಜವಾಗಿಯೂ ಇರುವುದಾದರೆ ಸೂರ್ಯನ ಸುತ್ತಲೂ ತಿರುಗುವ ಭೂಮಿಯ ಮೇಲೆ ಅದರ ಪರಿಣಾಮವೇನಾದರೂ ಇರಬೇಕಲ್ಲವೆ? ಆದರೆ ಮೈಕಲ್‌ಸನ್ ಮತ್ತು ಮೋರ್ಲೆಯವರು ಮಾಡಿದ ನಿರ್ಣಾಯಕ ಪ್ರಯೋಗದಿಂದ "ಈಥರ್"ನಂತಹ ದ್ರವ್ಯದ ಯಾವ ಅಸ್ತಿತ್ವವೂ ಶೋಧವಾಗಲಿಲ್ಲ.

ವಿಜ್ಞಾನಿಗಳನ್ನು ಸಾಮಾನ್ಯವಾಗಿ ಸೈದ್ಧಾಂತಿಕ ವಿಜ್ಞಾನಿಗಳು ಮತ್ತು ಪ್ರಯೋಗಾತ್ಮಕ ವಿಜ್ಞಾನಿಗಳೆಂದು ವಿಂಗಡಿಸಿದ್ದಾರೆ. ವೈಜ್ಞಾನಿಕತೆಯ ಮೂಲಭೂತ ಸ್ವರೂಪದ ದೃಷ್ಟಿಯಿಂದ ಈ ವಿಂಗಡಣೆ ಅಷ್ಟು ಸಮಂಜಸವಲ್ಲದಿದ್ದರೂ, ವಿಜ್ಞಾನ ಮತ್ತು ವೈಜ್ಞಾನಿಕತೆಯ ಸ್ವರೂಪ, ವಿಧಾನ ಮತ್ತು ಗುರಿಗಳನ್ನು ಅರ್ಥೈಸುವುದಕ್ಕೆ ಅದು ಸಹಾಯಕವಾಗುತ್ತದೆ. ಕೋಪರನಿಕಸ್, ಗೆಲಿಲಿಯೋ, ನ್ಯೂಟನ್‌ರು ಸೈದ್ಧಾಂತಿಕ ವಿಜ್ಞಾನಿಗಳೂ ಹೌದು ಮತ್ತು ಪ್ರಯೋಗಶೀಲ ವಿಜ್ಞಾನಿಗಳೂ ಹೌದು. ಆದರೆ ಬಾಯ್ಲ್, ಟೊರಿಸಿಲಿ, ವ್ಯಾಟ್, ಎಡಿಸನ್, ಲೂಯಿಪ್ಯಾಶ್ಚರ್‌ರು ಮುಖ್ಯವಾಗಿ ಪ್ರಯೋಗಾತ್ಮಕ ವಿಜ್ಞಾನಿಗಳು. ಇಪ್ಪತ್ತನೆಯ ಶತಮಾನ ವಿಜ್ಞಾನಿಗಳನ್ನು ವಿಂಗಡಿಸಬಹುದಾದರೆ ಐನ್‌ಸ್ಟೀನ್, ಪ್ಲಾಂಕ್, ಹೈಸೆನ್‌ಬರ್ಗ್, ಡಿರ್ಯಾಕ್, ಶ್ರೊಡಿಂಗರ್, ಬ್ರೊಗ್ಲಿ ಮುಂತಾದವರು ಮುಖ್ಯವಾಗಿ ಅಥವಾ ಸಂಪೂರ್ಣವಾಗಿ ಸೈದ್ಧಾಂತಿಕ ವಿಜ್ಞಾನಿಗಳು.

ಮಿಲಿಕನ್, ಮೈಕಲ್‌ಸನ್ ಮತ್ತು ಮೋರ್ಲೆ, ಫರ್ಮಿ, ಎಡಿಂಗ್‌ಟನ್, ವಿಲ್‌ಸನ್, ರುಥರ್‌ಫೋರ್ಡ್ ಮುಂತಾದವರನ್ನು ಪ್ರಯೋಗಾತ್ಮಕ ವಿಜ್ಞಾನಿಗಳೆನ್ನಬಹುದು.

ಸೈದ್ಧಾಂತಿಕ ಮತ್ತು ಪ್ರಯೋಗಾತ್ಮಕ ವಿಜ್ಞಾನಿಗಳೆಂದು ವಿಂಗಡಿಸುವುದು ವಿಜ್ಞಾನದ ವ್ಯಾಪ್ತಿಯನ್ನು ತಿಳಿದುಕೊಳ್ಳುವುದರ ಜೊತೆಗೆ, ಕೆಲವು ಜನರ ಮನಸ್ಸಿನಲ್ಲಿ ವಿಜ್ಞಾನದ ಬಗ್ಗೆ ಇರುವ ಒಂದು ತಪ್ಪು ಭಾವನೆಯನ್ನು ಹೋಗಲಾಡಿಸಲೂ ಸಹಾಯವಾಗುವುದು. ಕೆಲವು ಜನರು ವಿಜ್ಞಾನದ ತಿರುಳು ಪ್ರಯೋಗ ಮತ್ತು ಪರೀಕ್ಷೆಗಳಲ್ಲಿದೆ ಎಂದು ಭಾವಿಸಿದ್ದಾರೆ. ಪ್ರಯೋಗ ಮತ್ತು ಪರೀಕ್ಷೆಗಳು ವೈಜ್ಞಾನಿಕ ಸಿದ್ಧಾಂತಗಳನ್ನು ಸ್ಥಾಪಿಸಲು ಅನಿವಾರ್ಯವಾದರೂ, ಅವುಗಳ ಸಹಾಯವಿಲ್ಲದೆಯೇ ಮಹತ್ವದ ಮತ್ತು

ಕ್ರಾಂತಿಕಾರಿ ವೈಜ್ಞಾನಿಕ ಸಿದ್ಧಾಂತಗಳನ್ನು ಸ್ಥಾಪಿಸಿದ್ದಾರೆ. ಮನಸ್ಸಿಗೆ ಕೂಡಲೇ ಬರುವ ದೃಷ್ಟಾಂತಗಳೆಂದರೆ ಮಹಾವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್ ಮತ್ತು ೨೦ನೇ ಶತಮಾನದ ಮತ್ತೊಬ್ಬ ಪ್ರತಿಭಾವಂತ ವಿಜ್ಞಾನಿ ಡಿರ್ಯಾಕ್. ಐನ್‌ಸ್ಟೀನರು ಯಾವ ಪ್ರಯೋಗಗಳನ್ನೂ ನಡೆಸಲಿಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಗಣಿತದ ಲೆಕ್ಕಾಚಾರದಿಂದಲೇ ಅವರು ತಮ್ಮ ಜಗತ್ ಪ್ರಸಿದ್ಧ ಭೌತಿಕ ಸಿದ್ಧಾಂತಗಳಾದ 'ವಿಶೇಷ ಸಾಪೇಕ್ಷ ಸಿದ್ಧಾಂತ' ಮತ್ತು 'ಸಾಮಾನ್ಯ ಸಾಪೇಕ್ಷ ಸಿದ್ಧಾಂತ'ಗಳನ್ನು ಸ್ಥಾಪಿಸಿದರು. ಅವರ ಈ ಕೇವಲ ಸೈದ್ಧಾಂತಿಕ ಶೋಧನೆಗಳನ್ನು ಪ್ರಯೋಗಾತ್ಮಕವಾಗಿ ಸ್ಥಾಪಿಸಿದ ಕೀರ್ತಿ ಆರ್ಥರ್ ಎಡಿಂಗ್‌ಟನ್‌ರವರಿಗೆ ಸಲ್ಲುತ್ತದೆ. ಇಂಗ್ಲಿಷ್ ವಿಜ್ಞಾನಿ ಡಿರ್ಯಾಕ್‌ರೂ ಸಹ ಗಣಿತದ ಲೆಕ್ಕಾಚಾರದ ಆಧಾರದಿಂದ ಪರಮಾಣು (Particle)ಅಸ್ತಿತ್ವದಲ್ಲಿದೆ ಎಂದು ಸಿದ್ಧಮಾಡಿದರು. ಆಮೇಲೆ ಅದು ವಾಸ್ತವವಾಗಿ ಇರುವುದನ್ನು ಪ್ರಯೋಗಾತ್ಮಕವಾಗಿ ತೋರಿಸಲಾಯಿತು.

ಮೇಲಿನ ಚರ್ಚೆಯ ಅರ್ಥವೇನು ? ವೈಜ್ಞಾನಿಕ ಮುನ್ನಡೆಗೆ ಪ್ರಯೋಗಗಳು ಅನಿವಾರ್ಯವಲ್ಲ ಎಂಬುದು. ಸಿದ್ಧಾಂತಗಳನ್ನು ಇಂದ್ರಿಯಾನುಭವಾತ್ಮಕವಾಗಿ ಸಿದ್ಧ ಮಾಡುವುದಕ್ಕೆ ಪ್ರಯೋಗಗಳು ಅನಿವಾರ್ಯ. ಆದರೆ ವೈಜ್ಞಾನಿಕ ಸತ್ಯಗಳ ಶೋಧನೆಗೆ ಪ್ರಯೋಗಗಳು ಅವಶ್ಯವೇನಲ್ಲ ಎಂಬುದನ್ನು ಆಧುನಿಕ ವಿಜ್ಞಾನವೇ ತೋರಿಸಿಕೊಟ್ಟಿದೆ. ಆದ್ದರಿಂದ ವೈಜ್ಞಾನಿಕತೆಯ ಎಲ್ಲಾ ತಿರುಳು ಪ್ರಯೋಗಗಳಲ್ಲಿ ಇಲ್ಲ ಎನ್ನುವುದು ಗೊತ್ತಾಗುತ್ತದೆ. ಈ ಅಂಶದಿಂದ ಒಂದು ಮಹತ್ವದ ವಿಚಾರ ಮೂಡುತ್ತದೆ. ಅದೇನೆಂದರೆ ವೈಜ್ಞಾನಿಕತೆ ಸುಸಂಬದ್ಧ ತಾರ್ಕಿಕತೆಯಿಂದ ಸಾಧ್ಯ ಅಥವಾ ಸುಸಂಬದ್ಧ ತಾರ್ಕಿಕತೆಯೇ ವೈಜ್ಞಾನಿಕತೆಯ ನಿಜವಾದ ಸ್ವರೂಪ. ಇನ್ನೊಂದು ವಿಷಯ. ಈ ಶತಮಾನದ ಆದಿಯಲ್ಲಿ ಜಗತ್ ಪ್ರಸಿದ್ಧ ತತ್ವಜ್ಞಾನಿಗಳಾದ ಬರ್ಟ್ರೆಂಡ್ ರಸೆಲ್ ಮತ್ತು ಎ. ಎನ್. ವೈಟ್‌ಹೆಡ್‌ರು ತಮ್ಮ ಬೃಹದ್ ಗ್ರಂಥವಾದ Principia Mathematicaದಲ್ಲಿ ಗಣಿತಶಾಸ್ತ್ರವು ತರ್ಕಶಾಸ್ತ್ರದ ಒಂದು ಶಾಖೆ ಎಂದು ಸಿದ್ಧಮಾಡಲು ಪ್ರಯತ್ನಿಸಿದರು. ಅವರ ಅಭಿಪ್ರಾಯವನ್ನು ಎಲ್ಲಾ ಗಣಿತ ಶಾಸ್ತ್ರಜ್ಞರೂ ಒಪ್ಪಿಕೊಂಡಿಲ್ಲವಾದರೂ ಗಣಿತ ಶಾಸ್ತ್ರದಲ್ಲಿ ಪ್ರತಿಜ್ಞೆಗಳನ್ನು (Axioms) ಸಿದ್ಧಮಾಡಲು ತಾರ್ಕಿಕ ಅನುಮಾನಗಳನ್ನು ಬಳಸಿಕೊಳ್ಳಲಾಗುತ್ತಿದೆ ಎಂಬುದು ಗೊತ್ತಾಗುತ್ತದೆ. ಪ್ರಸ್ತುತದ ಚರ್ಚೆ ವೈಜ್ಞಾನಿಕತೆಯ ಸ್ವರೂಪದ ಮೇಲೆ ಮಹತ್ವದ ಬೆಳಕನ್ನು ಚೆಲ್ಲುತ್ತದೆ. ಅದೇನೆಂದರೆ ವಿಜ್ಞಾನಗಳಲ್ಲಿ ಧಾರಾಳವಾಗಿ (ಇದು ಅತ್ಯಂತ ಮುಖ್ಯವಾಗಿ ಭೌತಶಾಸ್ತ್ರಕ್ಕೆ ಅನ್ವಯಿಸುತ್ತದೆ) ಉಪಯೋಗಿಸಿಕೊಳ್ಳಲಾಗುತ್ತಿರುವ ಗಣಿತದ ಸೂತ್ರಗಳ ಮೂಲಭೂತ ಸಾರ ತಾರ್ಕಿಕತೆಯಲ್ಲಿದೆ. ಆದ್ದರಿಂದ ವೈಜ್ಞಾನಿಕತೆಯ ತಿರುಳು ಇಂದ್ರಿಯಾನುಭವದಲ್ಲಿ ಆಧಾರಗೊಂಡ ಅವಲೋಕನ ಪ್ರಯೋಗಗಳಲ್ಲಿದೆಯೋ ಅಥವಾ ಗಣಿತದ ಸುಸಂಬದ್ಧ ಲೆಕ್ಕಾಚಾರದಲ್ಲಿ (Calculation) ಇದೆಯೊ ?

ಜರ್ಮನ್ ತತ್ವಜ್ಞಾನಿ ಕ್ಯಾಂಟನು ಈ ಸಮಸ್ಯೆಯನ್ನು ಆಳವಾಗಿ ಅಭ್ಯಾಸಮಾಡಿ

ಕೇವಲ ಇಂದ್ರಿಯಾನುಭವದಲ್ಲಿ ನಿಸ್ಪಷ್ಟವಾದ ವಿಜ್ಞಾನ ತಾರ್ಕಿಕ ಅವಶ್ಯಕತೆ ಮತ್ತು ಸಾರ್ವಕಾಲಿಕ ಅಂಶಗಳನ್ನು ಹೊಂದಿರುವುದಿಲ್ಲ ಎಂದು ತಿಳಿಸಿ, ಈ ಅಂಶಗಳು ವಿಜ್ಞಾನ ವಲ್ಲಿರಬೇಕಾದರೆ ಇಂದ್ರಿಯಾನುಭವದಿಂದ ಸ್ವತಂತ್ರವಾದ ತತ್ವಗಳೂ ವಿಜ್ಞಾನಕ್ಕೆ ಅವಶ್ಯವೆಂದು ತಿಳಿದಿದ್ದನು. ಇಂದ್ರಿಯಾನುಭವ ತೋರಿಸುವುದು ಪ್ರತ್ಯೇಕಗಳನ್ನು ಮಾತ್ರ. ಸಾಮಾನ್ಯ ಅಥವಾ ಸಾರ್ವಕಾಲಿಕಗಳನ್ನಲ್ಲ. ಅಂದಮೇಲೆ ವೈಜ್ಞಾನಿಕ ಸಿದ್ಧಾಂತಗಳು ಮತ್ತು ನಿಯಮಗಳು (Laws) ಸಾರ್ವಕಾಲಿಕವಾಗಬೇಕಾದರೆ ನಿಸ್ಸಂಶಯವಾಗಿ ಸಾರ್ವಕಾಲಿಕ ಸತ್ಯತೆಯನ್ನು ಮತ್ತು ತಾರ್ಕಿಕ ಅವಶ್ಯಕತೆ (Logical Necessity) ಯನ್ನು ಪ್ರದರ್ಶಿಸುವ ಗಣಿತದ ಸೂತ್ರಗಳು ವಿಜ್ಞಾನಕ್ಕೆ ಅನಿವಾರ್ಯ. ಆದರೆ ಗಣಿತಶಾಸ್ತ್ರ ಮತ್ತು ಅದರ ಸೂತ್ರಗಳು ಇಂದ್ರಿಯಾನುಭವಜನ್ಯವಲ್ಲ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಇಂಗ್ಲಿಷ್ ತತ್ವಜ್ಞಾನಿ J. S. Mill ಮಾತ್ರ ಈ ಸಾಮಾನ್ಯ ಅಭಿಪ್ರಾಯಕ್ಕೆ ಅಪವಾದ. ಅರ್ನೆಸ್ಟ್ ಮ್ಯಾಕ್ ಎಂಬ ಫ್ರೆಂಚ್ ತತ್ವಜ್ಞಾನಿ ಇಂದ್ರಿಯಾನುಭವ ವಾದವನ್ನು (Empiricism) ಸಂಪೂರ್ಣ ಒಪ್ಪಿದ್ದವನು. ಆದ್ದರಿಂದ ಅವನು ವೈಜ್ಞಾನಿಕ ಸಿದ್ಧಾಂತಗಳು ಸಾರ್ವಕಾಲಿಕವಲ್ಲ ಎಂಬ ಅತಿರೇಕದ ಅಭಿಪ್ರಾಯವನ್ನು ಹೊಂದಿದ್ದನು. ಮ್ಯಾಕ್‌ನ ಅಭಿಪ್ರಾಯವನ್ನು ಐನ್‌ಸ್ಟೀನ್ ಒಪ್ಪಿಕೊಂಡಿರಲಿಲ್ಲ ಎಂಬುದು ಗಮನಿಸಬೇಕಾದ ವಿಷಯ.

ಇಲ್ಲಿಯವರೆಗಿನ ಚರ್ಚೆಯ ಉದ್ದೇಶ ಇಷ್ಟೆ. ವೈಜ್ಞಾನಿಕತೆಗೆ ಇಂದ್ರಿಯಾನುಭವ ಅವಲೋಕನ ಮತ್ತು ಪ್ರಯೋಗಗಳು ಎಷ್ಟು ಅವಶ್ಯವೋ ಶುದ್ಧ ವೈಚಾರಿಕತೆ ಅಥವಾ ತಾರ್ಕಿಕತೆಯೂ ಅಷ್ಟೇ ಅವಶ್ಯ. ಸ್ವೀಡನ್ ದೇಶವು ನೋಬೆಲ್ ಪುರಸ್ಕಾರಗಳನ್ನು ವಿಜ್ಞಾನರಂಗದಲ್ಲಿ ಮಹತ್ವದ ಶೋಧನೆಗಳನ್ನು ಮಾಡಿದವರಿಗೆ ಪ್ರತಿವರ್ಷ ನೀಡುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಪುರಸ್ಕಾರಗಳನ್ನು ಪಡೆಯುವಾಗ ಅವನ್ನು ಪಡೆದ ವಿಜ್ಞಾನಿಗಳು ತಾವು ಮಾಡಿದ ಶೋಧನೆಗಳ ಬಗ್ಗೆ ಒಂದು ಉಪನ್ಯಾಸ ಕೊಡಬೇಕು. ಅಂತಹ ಉಪನ್ಯಾಸಗಳನ್ನು ಗ್ರಂಥರೂಪದಲ್ಲಿ 'Nobel Lectures' ಎಂದು ಸಂಗ್ರಹಿಸಲಾಗಿದೆ. ಮಹಾವಿಜ್ಞಾನಿಗಳಾದ ಐನ್‌ಸ್ಟೀನ್, ಬೋರ್, ಮಿಲಿಕನ್, ಡೆ ಬ್ರೊಗ್ಲಿ, ಡಿರಾಕ್ ಮುಂತಾದವರು ತಮ್ಮ ಶೋಧನೆಗಳ ಬಗ್ಗೆ ಎಲ್ಲರಿಗೂ ಅರ್ಥವಾಗುವಂತೆ ನೀಡಿದ ನೋಬೆಲ್ ಉಪನ್ಯಾಸಗಳನ್ನು ಓದಿದರೆ ಅಲ್ಲಿ ಅಭಿವ್ಯಕ್ತವಾದ ವೈಜ್ಞಾನಿಕತೆಯ ಮತ್ತು ಪ್ರಬಲವಾದ ತಾರ್ಕಿಕತೆಯ ಪರಿಚಯವಾಗುತ್ತದೆ. ಸಮರ್ಥ ತಾರ್ಕಿಕತೆ ವೈಜ್ಞಾನಿಕತೆಯ ಜೀವಾಳ ಎನ್ನಬಹುದು. ಆದ್ದರಿಂದ ತಾರ್ಕಿಕ ಆಭಾಸಗಳು ವೈಜ್ಞಾನಿಕತೆಯಲ್ಲಿ ಪ್ರವೇಶಿಸದಂತೆ ನೋಡಿಕೊಳ್ಳುವುದು ಅವಶ್ಯ.

* * * *

ಫ್ರೆಂಚ್ ತತ್ವಜ್ಞಾನಿ ಡೇಕಾರ್ಟ್ ತನ್ನ ಒಂದು ಮಹತ್ವದ ಗ್ರಂಥವಾದ 'Discourse on Method'ನಲ್ಲಿ ವಿಚಾರ ಮಾಡುವಾಗ ನಮ್ಮ ಮನಸ್ಸು ಯಾವ ನಿಯಮಗಳನ್ನು ಪಾಲಿಸಬೇಕು ಎಂಬುದನ್ನು ಹೇಳಿದ್ದಾನೆ. ನಿಯಮಗಳು ಹೀಗಿವೆ :–

i) 'Scrupulously to avoid precipitancy and prejudice, and in the judgements I passed to include nothing additional to what had presented itself to my mind so clearly and so distinctly that I could have no occasion for doubting it'

ii) 'To divide each of the difficulties I examined into as many parts as may be required for its adequate solution.'

iii) 'To arrange my thoughts in order, beginning with things the simplest and easiest to know so that I may then ascend little by little, as it were step by step, to the knowledge of the more complex....'

iv) 'In all cases to make enumerations so complete, and reviews so general, that I should be assured of omitting nothing.'[1]

ಡೇಕಾರ್ಟನ ಈ ನಿಯಮಗಳು ವೈಜ್ಞಾನಿಕತೆಯಲ್ಲಿ ಶುದ್ಧ ವೈಚಾರಿಕತೆಯ ಪಾತ್ರವೇನು ? ಎಂಬುದನ್ನು ವಿಶದಪಡಿಸುತ್ತವೆ. ಇತ್ತೀಚೆಗೆ ವೈಜ್ಞಾನಿಕತೆಯ ಸ್ವರೂಪವನ್ನು ವಿಜ್ಞಾನಿಗಳು ತಮ್ಮ ಪರಿಶೋಧನೆಗಳನ್ನು ನಡೆಸುವಾಗ ಪಾಲಿಸಿಕೊಂಡು ಹೋಗುವ ವಿಧಾನದ ಪರೀಕ್ಷೆಯಿಂದ ವಿವರಿಸಲಾಗುತ್ತಿದೆ. ವಿಜ್ಞಾನಿಯ ಸಂಶೋಧನ ಕ್ರಮದಲ್ಲಿ ಏಳು ಹಂತಗಳು ಅಥವಾ ಹೆಜ್ಜೆಗಳನ್ನು ಗುರುತಿಸಲಾಗಿವೆ. ಅವು ಯಾವುವೆಂದರೆ 1) ಸಮಸ್ಯೆಯ ಅರಿವು 2) ಪ್ರಾಥಮಿಕ ಊಹೆ 3) ಹೆಚ್ಚಿನ ಸಂಗತಿಗಳ (Facts) ಸಂಗ್ರಹ 4) ಊಹೆಯ ನಿರೂಪಣೆ 5) ಊಹೆಯಿಂದ ಪರಿಣಾಮಗಳನ್ನು ತೆಗೆಯುವುದು (ಹೀಗೆ ಊಹೆಯಿಂದ ಪರಿಣಾಮಗಳನ್ನು ತೆಗೆಯದಿದ್ದರೆ ಊಹೆಗಳ ಸತ್ಯಾಸತ್ಯತೆಯ ಪರೀಕ್ಷೆ ಅಸಾಧ್ಯ) 6) ಊಹೆಗಳ ಪರೀಕ್ಷೆ 7) ವೈಜ್ಞಾನಿಕ ಸಿದ್ಧಾಂತಗಳ ಸ್ಥಾಪನೆ.

ಈ ಏಳು ಹಂತಗಳ ಸವಿಸ್ತಾರ ಸೋದಾಹರಣ ವಿವರಣೆ ಯಾವುದೇ ಉತ್ತಮ ಮಟ್ಟದ ತರ್ಕಶಾಸ್ತ್ರದ ಪುಸ್ತಕದಲ್ಲಿ ನೋಡಬಹುದು. ಆದರೆ ಈ ವಿವರಣೆಗಳನ್ನು ಓದುವಾಗ ಒಂದು ಅಂಶವನ್ನು ಗಮನದಲ್ಲಿಟ್ಟಿರಬೇಕು. ಅದೇನೆಂದರೆ ವೈಜ್ಞಾನಿಕ ಸಂಶೋಧನೆಯ ಕ್ರಮದಲ್ಲಿ ಗಣಿತದಲ್ಲಿ ಆಧಾರಗೊಂಡ ತಾರ್ಕಿಕತೆ ಅಥವಾ ವೈಚಾರಿಕತೆ ವಹಿಸುವ ಪಾತ್ರ. ವೈಜ್ಞಾನಿಕ ಸಮಸ್ಯೆಯ ಸಮರ್ಥ ನಿರೂಪಣೆಯಲ್ಲಿ, ಸಮಂಜಸ (Relevent) ವಾದ ಸಂಗತಿಗಳ ಸಂಗ್ರಹದಲ್ಲಿ, ಒಳ್ಳೆಯ ಫಲಿತಾಂಶ ನೀಡುವ ಊಹೆಗಳನ್ನು ಊಹಿಸುವುದರಲ್ಲಿ ಮತ್ತು ವೈಜ್ಞಾನಿಕ ಸಿದ್ಧಾಂತಗಳ ಸಾಮಾನ್ಯೀಕರಣ

(Generalization)ದಲ್ಲಿ ತಾರ್ಕಿಕತೆಯ ಪಾತ್ರ ಬಹಳ ಮಹತ್ವವಾದದ್ದು ಮತ್ತು ಸೂಕ್ಷ್ಮವಾದದ್ದು. ಇಲ್ಲಿ ಡೇಕಾರ್ಟನ ವೈಚಾರಿಕತೆಯ ನಿಯಮಗಳ ಮಹತ್ವದ ಪರಿಚಯವಾಗುತ್ತದೆ.

ಇಲ್ಲಿಯವರೆಗಿನ ಚರ್ಚೆ ವೈಜ್ಞಾನಿಕತೆಗೂ ಮತ್ತು ಅವೈಜ್ಞಾನಿಕತೆಗೂ ಇರುವ ದೊಡ್ಡ ವ್ಯತ್ಯಾಸವನ್ನು ತಿಳಿದುಕೊಳ್ಳಲು ಸಹಾಯಕವಾಗುವುದು. ಅವೈಜ್ಞಾನಿಕ ಮನೋಭಾವನೆ ನಮ್ಮ ಅನೇಕ ಮೂಢನಂಬಿಕೆಗಳ ಕಾರಣ. ಒಬ್ಬ ವಿಜ್ಞಾನಿಯಲ್ಲಿಯೂ ಅನೇಕ ತಪ್ಪು ಅಭಿಪ್ರಾಯಗಳು ಇರಬಹುದು. ಮೂಢನಂಬಿಕೆಗಳನ್ನು ನಂಬಿರುವವರಿಗೂ ಮತ್ತು ವಿಜ್ಞಾನಿಗಳಿಗೂ ಇರುವ ಮುಖ್ಯ ವ್ಯತ್ಯಾಸವೆಂದರೆ, ಮೊದಲನೆಯವರು ತಮ್ಮ ಮೂಢನಂಬಿಕೆಗಳನ್ನು ಪರೀಕ್ಷೆಗೆ ಒಡ್ಡಲು ಸಿದ್ಧರಿರುವುದಿಲ್ಲ. ಆದರೆ ಎರಡನೆಯವರು ತಮ್ಮ ವೈಜ್ಞಾನಿಕ ಊಹೆಗಳನ್ನು ಪರೀಕ್ಷೆಗೆ ಒಡ್ಡದೆ ಒಪ್ಪಿಕೊಳ್ಳುವುದಿಲ್ಲ. ಅವೈಜ್ಞಾನಿಕ ಮನೋಭಾವನೆಯುಳ್ಳವರು ತಾವು ನಂಬಿದ್ದೆಲ್ಲ ಪರಮ ಸತ್ಯ ಅಥವಾ ತ್ರಿಕಾಲ ಸತ್ಯ ಎಂದು ತಿಳಿದಿರುತ್ತಾರೆ. ಇಂಗ್ಲಿಷಿನಲ್ಲಿ ಅಂತಹವರನ್ನು ಡಾಗ್‌ಮಾಟಿಕ್ (Dogmatic) ಎಂದು ಕರೆಯಲಾಗಿದೆ. ಸಾಮಾನ್ಯವಾಗಿ ತಮ್ಮ ತಮ್ಮ ಧರ್ಮದ ಸಿದ್ಧಾಂತಗಳಲ್ಲಿ ಅಂಧಶ್ರದ್ಧೆಯನ್ನಿಟ್ಟುಕೊಂಡವರನ್ನು ಡಾಗ್‌ಮಾಟಿಕ್ ಎಂದು ಕರೆಯಲಾಗುತ್ತಿದೆ. ಡಾಗ್‌ಮಾಟಿಕ್ ಎಂದರೆ ಅವೈಚಾರಿಕ (irrational) ಎಂದು ಅರ್ಥ. ಆದರೆ ಇಲ್ಲಿ ಗಮನಿಸಬೇಕಾದ ವಿಷಯವೆಂದರೆ ವೈಚಾರಿಕರೂ ಡಾಗ್‌ಮಾಟಿಕ್ ಆಗಿರಬಹುದು. ಆಧುನಿಕ ಪಾಶ್ಚಾತ್ಯ ತತ್ವಶಾಸ್ತ್ರದಲ್ಲಿ ವೈಚಾರಿಕರೆಂದು ಪ್ರಸಿದ್ಧರಾದ ಡೇಕಾರ್ಟ್, ಸ್ಪಿನೋಜಾ ಮತ್ತು ಲೈಬ್ನಿಜ್‌ರು ನೂತನ ಸತ್ಯಗಳನ್ನು ಶೋಧಿಸುವುದಕ್ಕೆ ಶುದ್ಧ ವಿಚಾರ (Pure Reason)ವೇ ನಿಜವಾದ ಸಾಧನವೆಂದು ಸಂಪೂರ್ಣವಾಗಿ ನಂಬಿದ್ದರು. ಇಂತಹ ಅಂಧ ನಂಬಿಕೆಯೂ ಡಾಗ್‌ಮಾಟಿಕ್ ಆಗುತ್ತದೆ. ಶುದ್ಧ ವೈಚಾರಿಕರಲ್ಲಿ ಅಭಿವ್ಯಕ್ತವಾದ ಸೂಕ್ಷ್ಮ ಅವೈಚಾರಿಕತೆಯ ಅಂಶಗಳನ್ನು ಕ್ಯಾಂಟ್ ತತ್ವಜ್ಞಾನಿ ಶುದ್ಧ ವೈಚಾರಿಕತೆಯ ಇತಿಮಿತಿಗಳನ್ನು ಪ್ರದರ್ಶಿಸಿ ದೊಡ್ಡ ತತ್ವಜ್ಞಾನಿ ಎನಿಸಿಕೊಂಡನು. ಮೂಢನಂಬಿಕೆಗಳನ್ನು ಪರೀಕ್ಷಿಸಬೇಕಾದದ್ದು ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಿಕೊಳ್ಳುವ ಹಾದಿಯಲ್ಲಿ ಮೊದಲ ಹೆಜ್ಜೆ ಎನ್ನಬಹುದು. ಒಂದು ಮೂಢನಂಬಿಕೆ ಪರೀಕ್ಷೆಯಲ್ಲಿ ಪಾಸಾದರೆ ಒಂದು ಮೂಢನಂಬಿಕೆಯಾಗಿ ಉಳಿಯುವುದಿಲ್ಲ, ಜ್ಞಾನವಾಗುತ್ತದೆ.

ಎರಡನೆಯದಾಗಿ ಅವೈಜ್ಞಾನಿಕ ಸಿದ್ಧಾಂತಗಳಿಗೆ ಅಥವಾ ನಂಬಿಕೆಗಳಿಗೆ ಸಕಾರಣ ಆಧಾರಗಳು ಇರುವುದಿಲ್ಲ. ಇದನ್ನೇ ಇಂಗ್ಲಿಷ್‌ನಲ್ಲಿ *evidence* ಎನ್ನುವುದು. ಅನುಭವದಲ್ಲಿಯಾಗಲೀ ಅಥವಾ ತಾರ್ಕಿಕತೆಯಲ್ಲಾಗಲೀ ಆಧಾರವಿಲ್ಲದ ಯಾವ ಸಿದ್ಧಾಂತ ಅಥವಾ ನಂಬಿಕೆಯೂ ಜ್ಞಾನ ಅಥವಾ ವಿಜ್ಞಾನವಾಗಲಾರದು. ಜ್ಞಾನವಿಲ್ಲದೆ ವಿಜ್ಞಾನವಿಲ್ಲ. ತಮ್ಮ ನಂಬಿಕೆಗಳನ್ನು ಎಂದೂ ಬದಲಾಯಿಸಿಕೊಳ್ಳಲು ಸಿದ್ಧರಿಲ್ಲದ ಅವೈಚಾರಿಕರ ಮನೋಭಾವನೆ ಹೇಗಿರುತ್ತದೆ ಎಂಬುದಕ್ಕೆ ಒಂದು ನಿದರ್ಶನ

ಗೆಲಿಲಿಯೋ ವಿಜ್ಞಾನಿಯ ಜೀವನದಿಂದ ಕೊಡಬಹುದು. ಗೆಲಿಲಿಯೋ ಜುಪಿಟರ್ ಗ್ರಹಕ್ಕೆ ಇರುವ ಚಂದ್ರರನ್ನು ಹೊಸದಾಗಿ ಶೋಧಿಸಿದ್ದನಂತೆ. ತನ್ನ ಶೋಧನೆಗಳನ್ನು ನಂಬದ ಕ್ರೈಸ್ತ ಧರ್ಮಾಧಿಕಾರಿಗಳಿಗೆ ದೂರದರ್ಶಕದ ಮೂಲಕ ಹೊಸದಾಗಿ ತಾನು ಕಂಡು ಹಿಡಿದ ಚಂದ್ರರನ್ನು ತೋರಿಸುವುದಾಗಿ ಅವರನ್ನು ಆಹ್ವಾನಿಸಿದಾಗ ಆ ಧರ್ಮಾಧಿಕಾರಿಗಳು ಅದಕ್ಕೆ ಒಪ್ಪಲಿಲ್ಲವಂತೆ. ಅಂದರೆ ಅವರು ತಮಗೆ ಇಷ್ಟವಿಲ್ಲದ ಮತ್ತು ತಮ್ಮ ನಂಬಿಕೆಗಳು ಸುಳ್ಳಾಗುವ ಸಾಧ್ಯತೆ ಇರುವ ಯಾವ ಸಾಕ್ಷ್ಯಾಧಾರಗಳನ್ನು ಪರೀಕ್ಷಿಸಲು ಸಿದ್ಧರಿರಲಿಲ್ಲ. ಆದರೆ ಇತ್ತೀಚೆಗೆ ನಮ್ಮ ದೇಶದ ಅನೇಕ ಯೋಗಿಗಳು ತಮ್ಮ ಯೌಗಿಕ ಸಾಧನೆಗಳನ್ನೂ ಮತ್ತು ಅನುಭವಗಳನ್ನೂ ವೈಜ್ಞಾನಿಕ ಪರೀಕ್ಷೆಗಳಿಗೆ ಒಡ್ಡಲು ಸಿದ್ಧರಾಗುತ್ತಿರುವುದು ನಿಜವಾಗಿಯೂ ಒಳ್ಳೆಯ ಸಂಗತಿ ಮತ್ತು ಅದು ಅಂತಹ ಯೋಗಿಗಳ ವೈಜ್ಞಾನಿಕ ಮನೋಭಾವಕ್ಕೆ ಸಾಕ್ಷಿ.

ನಮ್ಮ ಮೂಢನಂಬಿಕೆಗಳನ್ನು ಮತ್ತು ತಾತ್ವಿಕ ಸಿದ್ಧಾಂತಗಳನ್ನು ವೈಜ್ಞಾನಿಕ ಊಹೆಗಳ ರೀತಿಯಲ್ಲಿ ಪರೀಕ್ಷೆಗೆ ಒಳಪಡಿಸಬೇಕಾದ ಅವಶ್ಯಕತೆಯನ್ನು ಒಪ್ಪಿಕೊಂಡೂ ಒಂದು ಮಹತ್ವದ ಅಂಶವನ್ನು ಕುರಿತು ಚರ್ಚಿಸಬೇಕು. ಅದೇನೆಂದರೆ ಅವನ್ನು ವೈಜ್ಞಾನಿಕ ಊಹೆಗಳನ್ನು ಪರೀಕ್ಷಿಸುವ ವಿಧಾನದಲ್ಲಿಯೇ ಪರೀಕ್ಷಿಸಬೇಕೆ ಅಥವಾ ಬೇರೆ ವಿಧಾನದಿಂದ ಪರೀಕ್ಷಿಸಬೇಕೆ ? ಅನೇಕ ಪ್ರಕಾರದ ಮೂಢನಂಬಿಕೆಗಳನ್ನು ಪರೀಕ್ಷೆಗೆ ಒಳಪಡಿಸುವುದು ಸುಲಭ. ಉದಾಹರಣೆಗೆ ಎರಡು ಮೂರು ಮೂಢ ನಂಬಿಕೆಗಳನ್ನು ತೆಗೆದುಕೊಳ್ಳಬಹುದು. ಬೆಕ್ಕು ಅಡ್ಡ ದಾಟಿದರೆ ಅಪಶಕುನ, ಹೊರಟ ಕೆಲಸಕ್ಕೆ ವಿಘ್ನ ಎನ್ನುವುದೊಂದು ಜಿಡ್ಡುಗಟ್ಟಿದ ಮೂಢನಂಬಿಕೆ. ಈ ಮೂಢ ನಂಬಿಕೆಯನ್ನು ಬೆಕ್ಕು ಅಡ್ಡ ದಾಟಿದಾಗಲೆಲ್ಲ ಆದ ಅಪಶಕುನವೇನು ಅಥವಾ ಪರಿಣಮಿಸಿದ ವಿಘ್ನವೇನು ಎಂದು ಗುರುತು ಹಾಕಿಟ್ಟುಕೊಂಡು ಒಟ್ಟಿನಲ್ಲಿ ಪರೀಕ್ಷಿಸಿದರೆ ಆ ಮೂಢನಂಬಿಕೆಯ ಸತ್ಯಾಸತ್ಯತೆಯನ್ನು ನಿರ್ಧರಿಸಬಹುದು. ಹಲ್ಲಿಗಳ ಲೊಚಗುಟ್ಟುವಿಕೆಗಳಲ್ಲಿ ಸೂಚಿತವಾಗಬಹುದಾದ ಮೂಢನಂಬಿಕೆಗಳನ್ನೂ ಇದೇ ರೀತಿ ಪರೀಕ್ಷೆಗೆ ಒಳಪಡಿಸಬಹುದು. ಇದನ್ನೆ ವೈಜ್ಞಾನಿಕ ಪರೀಕ್ಷೆ (Scientific Verification) ಎನ್ನಬಹುದು. ಅತೀ ಹೆಚ್ಚಿನ ಸಂಖ್ಯೆಯಲ್ಲಿ ಮೂಢ ನಂಬಿಕೆಗಳಿಗೆ ಕಾರಣವಾದ ಘಟನೆಗಳು ಅಸತ್ಯವಾದರೆ, ಅವನ್ನು ಅವೈಜ್ಞಾನಿಕ ಎಂದು ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸಬೇಕು. ನಮ್ಮ ಅನುಭವದ ಕೆಲವೇ ಕೆಲವು ಸಂದರ್ಭಗಳಲ್ಲಿ ಮೂಢ ನಂಬಿಕೆಗಳಿಗೆ ಕಾರಣವಾಗುವ ಘಟನೆಗಳು ಸತ್ಯವಾಗಿದ್ದರೆ ಅಂದರೆ ನಾಲ್ಕಾರು ಬಾರಿ ಬೆಕ್ಕು ಅಡ್ಡ ದಾಟಿದ್ದರಿಂದ ವಿಘ್ನ ಸಂಭವಿಸಿದ್ದರೆ ಅಂತಹ ಘಟನೆಗಳು ಮೂಢನಂಬಿಕೆಗಳು ಸತ್ಯ ಎಂಬುವನ್ನು ಸಿದ್ಧ ಮಾಡಲಾರವು. ಘಟನೆಗೂ (ಬೆಕ್ಕು ಅಡ್ಡ ಬರುವುದಕ್ಕೂ) ಮತ್ತು ವಿಘ್ನಕ್ಕೂ (ರೈಲು ತಪ್ಪುವುದಕ್ಕೂ) ಯಾವ ಅವಶ್ಯಕ ಸಂಬಂಧ (Necessary Connection) ಇರಲಾರದು. ಅವಶ್ಯಕ ಕಾರ್ಯ ಕಾರಣ ಸಂಬಂಧವಿಲ್ಲದ ಎರಡು ಘಟನೆಗಳು ಒಂದಕ್ಕೊಂದು ಹೊಂದಿಕೊಂಡು ಸಂಭವಿಸಿದರೆ ಅವೆರಡರ ಮಧ್ಯೆ ಇರುವ ಸಂಬಂಧವನ್ನೂ ಕಾರ್ಯ

ಕಾರಣವಲ್ಲದ ಆದ್ದರಿಂದ ವೈಜ್ಞಾನಿಕವಾಗಿ ಮಾನ್ಯವಲ್ಲದ ಸಂಬಂಧವೆಂದು ತಿಳಿಯಬೇಕು. ಎರಡು ಘಟನೆಗಳು ಯಾವಾಗಲೂ ಒಂದಕ್ಕೊಂದು ಹೊಂದಿಕೊಂಡು (constant conjunction) ಅಥವಾ ಯಾವಾಗಲೂ ಒಂದರ ತರುವಾಯ ಇನ್ನೊಂದು ಸಂಭವಿಸುತ್ತಿದ್ದರೆ ಅವೆರಡರ ಮಧ್ಯೆ ಅವಶ್ಯಕ ಕಾರ್ಯಕಾರಣವಿದೆಯೆಂದು ನಾವು ತಿಳಿಯುತ್ತೇವೆ. ಇದಕ್ಕೆ ತಾರ್ಕಿಕ ಆಧಾರವಿಲ್ಲ ಎಂದು ಡೇವಿಡ್ ಹ್ಯೂಮ್ ಸಮರ್ಥವಾಗಿ ತೋರಿಸಿದ್ದಾನೆ. ಆದ್ದರಿಂದ ಹಾಗೆ ನೋಡಿದರೆ ಮೂಢನಂಬಿಕೆಗಳಿಗೆ ಕಾರಣವಾಗುವ ಎರಡು ಘಟನೆಗಳು ಯಾವಾಗಲೂ ಒಂದಾದಮೇಲೆ ಒಂದು ಸಂಭವಿಸುತ್ತಿದ್ದರೂ (ಉದಾ: ಬೆಕ್ಕು ಅಡ್ಡ ಬರುವುದು ಮತ್ತು ಕೆಲಸ ತಪ್ಪುವುದು) ಅಂತಹ ಮೂಢನಂಬಿಕೆಗಳು ಅವೈಜ್ಞಾನಿಕವಾಗಿರಬಹುದು. ಆದರೆ ಎಲ್ಲ ಪ್ರಕಾರದ ಮೂಢನಂಬಿಕೆಗಳು ಬೆಕ್ಕು ಅಡ್ಡ ಬರುವಂತಹ ಮೂಢನಂಬಿಕೆಗಳಲ್ಲ. ದೆವ್ವ, ಭೂತ, ದೇವರು ಮತ್ತು ಪುನರ್ಜನ್ಮಗಳಂತಹ ನಂಬಿಕೆಗಳನ್ನು ಸಾಮಾನ್ಯ ಮೂಢನಂಬಿಕೆಗಳ ರೀತಿಯಲ್ಲಿ ಪರೀಕ್ಷೆಗೆ ಹಾಕುವುದು ಅಸಾಧ್ಯ. ಅಂತಹ ನಂಬಿಕೆಗಳನ್ನು ವೈಜ್ಞಾನಿಕವಾಗಿ ಪರೀಕ್ಷಿಸುವುದು ಹೇಗೆ? ಒಳ್ಳೆಯ ವೈಜ್ಞಾನಿಕ ಊಹೆಗಳಿಂದ (Hypotheses) ಪರೀಕ್ಷಿಸಬಹುದಾದ ಪರಿಣಾಮಗಳನ್ನು ತೆಗೆಯಬಹುದಾದ್ದರಿಂದ ಅಂತಹ ಊಹೆಗಳ ಸತ್ಯಾಸತ್ಯತೆಯನ್ನು ನಿರ್ಧರಿಸುವುದಕ್ಕೆ ವಿಜ್ಞಾನಿಗಳಿಗೆ ಸಾಧ್ಯವಾಗುತ್ತದೆ ಎಂದು ತಿಳಿಯಲಾಗಿದೆ. ದೆವ್ವ, ಭೂತ, ದೇವರು, ಪುನರ್ಜನ್ಮ ಇತ್ಯಾದಿ ನಂಬಿಕೆಗಳಿಂದಲೂ ಕೆಲವು ಪರಿಣಾಮಗಳನ್ನು ತೆಗೆಯಬಹುದು ಅಥವಾ ತೋರಿಸಬಹುದು. ಅಂತಹ ಪರಿಣಾಮಗಳ ಆಧಾರದ ಮೇಲೆ ಆಸ್ತಿಕರು ವಸ್ತುಗಳು ಇರುವುದನ್ನು ಸಿದ್ಧ ಮಾಡಬಹುದು. ನಾಸ್ತಿಕರಿಗೆ ಇರಬಹುದಾದಷ್ಟು ಆಧಾರಗಳು ಆಸ್ತಿಕರಿಗೂ ಇವೆ. ಕೊನೆಯಲ್ಲಿ ಅವರವರ ಶ್ರದ್ಧೆಯೊಂದೇ (ಈ ಮಾತು ನಾಸ್ತಿಕರಿಗೂ ಅನ್ವಯಿಸುತ್ತದೆ) ಅವರವರ ನಂಬಿಕೆಗಳಿಗೆ ತಳಹದಿಯಾಗಬಹುದು. ಅನೇಕ ಸಮಕಾಲೀನ ತತ್ವಶಾಸ್ತ್ರಜ್ಞರ ಪ್ರಕಾರ ನಮ್ಮ ಎಲ್ಲಾ ನಂಬಿಕೆಗಳಿಗೆ ನಿರ್ಣಯಾತ್ಮಕ (conclusive) ಸಕಾರಣಗಳ (reason)ನ್ನು ಕೊಡಲು ಸಾಧ್ಯವಾಗದಿದ್ದ ಮಾತ್ರಕ್ಕೆ ಅವುಗಳು ಸುಳ್ಳು ನಂಬಿಕೆಗಳಾಗುವುದಿಲ್ಲ. ಉದಾಹರಣೆಗೆ ನಾವು ಭೌತಿಕ ಪ್ರಪಂಚದ ಅಸ್ತಿತ್ವವನ್ನು ನಂಬುತ್ತೇವೆ (ಇದು ಕೇವಲ ನಂಬಿಕೆ ಮಾತ್ರ ಎಂದು ಹ್ಯೂಮ್ ವಾದಿಸಿದ್ದಾನೆ). ನಮ್ಮ ಈ ನಂಬಿಕೆಗೆ ನಿರ್ಣಯಾತ್ಮಕ ತಾರ್ಕಿಕ ಆಧಾರ (logical evidence)ವನ್ನು ನಮಗೆ ಕೊಡಲಿಕ್ಕೆ ಸಾಧ್ಯವಿಲ್ಲದಿದ್ದರೂ ಆ ನಂಬಿಕೆ ಸತ್ಯ ಎಂದು ಸಮಕಾಲೀನ ಪ್ರತಿಭಾವಂತ ಇಂಗ್ಲಿಷ್ ತತ್ವಜ್ಞಾನಿಗಳಲ್ಲಿ ಒಬ್ಬನಾದ ಜಿ.ಇ. ಮೂರ್ (G. E. Moore) ಅಭಿಪ್ರಾಯಪಟ್ಟಿದ್ದಾನೆ. ಈ ಅಂಶವನ್ನು ಆಧುನಿಕ ವೈಜ್ಞಾನಿಕತೆಗೆ ಪೂರ್ತಿ ಮಾರುಹೋದವರು ಗಮನಿಸಬೇಕಾದುದು ವೈಚಾರಿಕತೆಯ ದೃಷ್ಟಿಯಿಂದ ಮಹತ್ವದ್ದು. ಹೀಗೆಂದ ಮಾತ್ರಕ್ಕೆ ಭೂತ, ದೇವರು, ಪುನರ್ಜನ್ಮದಂತಹ ನಂಬಿಕೆಗಳನ್ನು ವೈಜ್ಞಾನಿಕ ವಿಧಾನದಿಂದ ಪರೀಕ್ಷೆಗೆ ಒಳಪಡಿಸುವುದೇ ತಪ್ಪು ಎನ್ನುವುದು ಅವೈಚಾರಿಕತೆ. ಇದರಿಂದ ವೈಜ್ಞಾನಿ

ಕತೆಯ ಇತಿಮಿತಿಗಳ ಪರಿಚಯವಾಗುತ್ತದೆ.

ವೈಜ್ಞಾನಿಕ ವಿಧಾನದ ಮಿತಿಗಳು :—

ವೈಜ್ಞಾನಿಕತೆ ಮತ್ತು ವಿಜ್ಞಾನಗಳ ಮಿತಿಗಳು ಇತ್ತೀಚೆಗೆ ಹೆಚ್ಚು ಹೆಚ್ಚು ಬೆಳಕಿಗೆ ಬರುತ್ತಿವೆ. ೧೮ ಮತ್ತು ೧೯ನೇ ಶತಮಾನದ ವಿಜ್ಞಾನಿಗಳಿಗೆ ವಿಜ್ಞಾನದ ಮತ್ತು ಅದರ ವಿಧಾನದ ಬಗೆಗೆ ಇದ್ದ ಪೂರ್ಣ ವಿಶ್ವಾಸ ೨೦ನೇ ಶತಮಾನದ ವಿಜ್ಞಾನಿಗಳಿಗೆ ಇಲ್ಲವೆಂದು ಹೇಳಬಹುದು. ವಿಜ್ಞಾನ ನಮ್ಮ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಬಲ್ಲದು ಎನ್ನುವವರ ಸಂಖ್ಯೆ ಕ್ರಮೇಣ ಕಡಿಮೆಯಾಗುತ್ತಿದೆ. ಮಾನವರ ಮೂಲಭೂತ ಸಮಸ್ಯೆಗಳನ್ನು ವಿಜ್ಞಾನ ಪರಿಹರಿಸಬಹುದೆ ಎನ್ನುವುದು ಸಂದೇಹಾತ್ಮಕವಾಗುತ್ತಿದೆ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ 'anti-science' ಮನೋಭಾವನೆ ಅನೇಕ ಗಂಭೀರ ಚಿಂತನಕಾರರಲ್ಲಿ ಕಾಣಿಸಿಕೊಳ್ಳುತ್ತಿದೆ. ಈ ದಾರಿಯಲ್ಲಿ ಆಲೋಚಿಸುವುದು ನಮ್ಮ ಪ್ರಸ್ತುತ ಉದ್ದೇಶವಲ್ಲ. ವಿಜ್ಞಾನ ಮತ್ತು ವೈಜ್ಞಾನಿಕತೆಗಳ ಬಗ್ಗೆ ಇತ್ತೀಚಿನ ಮನೋಭಾವನೆ ಏನೇ ಇರಲಿ, ವೈಜ್ಞಾನಿಕ ವಿಧಾನದ ಇತಿಮಿತಿಗಳು ಇರುವುದು ಗಂಭೀರ ತಾರ್ಕಿಕ ಕಾರಣಗಳಿಂದಾಗಿ. ಈ ತಾರ್ಕಿಕ ಕಾರಣಗಳ ಸಂಕ್ಷಿಪ್ತ ವಿವರಣೆಯೊಂದಿಗೆ ಈ ಪ್ರಬಂಧ ಮುಗಿಯುತ್ತದೆ.

ವೈಜ್ಞಾನಿಕ ವಿಧಾನ ಅಥವಾ ವೈಜ್ಞಾನಿಕತೆ ತರ್ಕಶಾಸ್ತ್ರದಲ್ಲಿ ಸವಿಸ್ತಾರವಾಗಿ ಚರ್ಚಿಸಲ್ಪಟ್ಟಿವೆ. ತರ್ಕಶಾಸ್ತ್ರದಲ್ಲಿ ಅನುಮಾನವನ್ನು (Inference) ಎರಡು ಪ್ರಕಾರವಾಗಿ ವಿಂಗಡಿಸಲಾಗಿದೆ. ಒಂದು ನಿಗಮನ ಅನುಮಾನ (Deductive Inference) ಇನ್ನೊಂದು ಅನುಗಮನ ಅನುಮಾನ (Inductive Inference). ಮೊದಲನೆಯ ಅನುಮಾನವು ಸಿದ್ಧಾಂತಗಳನ್ನು ಮಾಡುವಾಗ ಅಥವಾ ಪ್ರತಿಜ್ಞೆಗಳನ್ನು ಸಿದ್ಧ ಮಾಡುವಾಗ ಸಾಮಾನ್ಯ ತತ್ವಗಳಿಂದ ಪ್ರತ್ಯೇಕಗಳ ಕಡೆಗೆ ಹೋಗುತ್ತದೆ. ಉದಾ : ಎಲ್ಲಾ ಗ್ರಹಗಳು ಸೂರ್ಯನ ಸುತ್ತ ತಿರುಗುತ್ತಿವೆ. ಭೂಮಿಯು ಒಂದು ಗ್ರಹ. ಅದ್ದರಿಂದ ಭೂಮಿಯು ಸೂರ್ಯನ ಸುತ್ತ ತಿರುಗುತ್ತಿದೆ. ಇದು ನಿಗಮನ ಅನುಮಾನ. ಆದರೆ ಅನುಗಮನ ಅನುಮಾನ ಪ್ರತ್ಯೇಕಗಳ ಅವಲೋಕನದಿಂದ ಸಾಮಾನ್ಯ ತತ್ವಗಳತ್ತ ಹೋಗುತ್ತದೆ. ಉದಾ : ಗ್ರಹವಾದ ಭೂಮಿಯೂ ಸೂರ್ಯನ ಸುತ್ತ ತಿರುಗುತ್ತಿದೆ. ಮಂಗಳ ಗ್ರಹವು ಸೂರ್ಯನ ಸುತ್ತ ತಿರುಗುತ್ತಿದೆ. ಇವರಂತೆ ಗುರು, ಶನಿ ಇತ್ಯಾದಿ ಗ್ರಹಗಳು ಸೂರ್ಯನ ಸುತ್ತ ತಿರುಗುತ್ತಿವೆ. ಅದ್ದರಿಂದ ಎಲ್ಲಾ ಗ್ರಹಗಳು ಸೂರ್ಯನ ಸುತ್ತ ತಿರುಗುತ್ತಿವೆ. ಇಲ್ಲಿ ಗಮನಿಸಬೇಕಾದ ಮಹತ್ವದ ಅಂಶವೆಂದರೆ ನಿಗಮನ ವಿಧಾನದ ಅನುಮಾನ ಶುದ್ಧ ಆಕಾರಾತ್ಮಕ ತಾರ್ಕಿಕ ಅನುಮಾನದ ನಿಯಮಗಳನ್ನು ಅವಲಂಬಿಸಿದ್ದು ಅಲ್ಲಿ ಇಂದ್ರಿಯಾನುಭವ (Experience)ದ ಪಾತ್ರ ಇಲ್ಲ. ಆದರೆ ಅನುಗಮನ ಪದ್ಧತಿಯಲ್ಲಿ ಅನುಮಾನವು ಅನುಭವದಿಂದಲೇ ಪ್ರಾರಂಭವಾಗಬೇಕು. ಅಂದರೆ ಪ್ರತ್ಯೇಕಗಳ (particulars) ಅವಲೋಕನಕ್ಕೆ ಇಂದ್ರಿಯಾನುಭವ ಅನಿವಾರ್ಯ.

ಆದ್ದರಿಂದ ಅನುಗಮನ ಅನುಮಾನಕ್ಕೆ ತಾರ್ಕಿಕ ತಳಹದಿ ಇಂದ್ರಿಯಾನುಭವವೇ ಹೊರತು ಶುದ್ಧ ವಿಚಾರವಲ್ಲ.

ಅನುಗಮನ ವಿಧಾನಕ್ಕೆ (Induction) ಅನುಭವವೇ ಆಧಾರವೆಂಬುದು ಅದರ ಅನೇಕ ತಾರ್ಕಿತ ಇತಿಮಿತಿಗಳಿಗೆ ಮತ್ತು ತೊಂದರೆಗಳಿಗೆ ಕಾರಣವಾಗಿದೆ. ಅನುಗಮನ ವಿಧಾನದ ಮುಖ್ಯ ತಾರ್ಕಿಕ ತೊಂದರೆಗಳನ್ನು ಗುರುತಿಸಿದ ಶ್ರೇಯಸ್ಸು ಬ್ರಿಟಿಷ್ ತತ್ವಜ್ಞಾನಿ ಹ್ಯೂಮ್‌ಗೆ ಸಲ್ಲುತ್ತದೆ.

ಡೇವಿಡ್ ಹ್ಯೂಮ್‌ಸು (David Hume 1711-1776) ಪಾಶ್ಚಾತ್ಯ ತತ್ವಶಾಸ್ತ್ರ ಇತಿಹಾಸದಲ್ಲಿ ಸಂದೇಹವಾದಿ ಎಂದು ಪ್ರಸಿದ್ಧಿಯಾಗಿದ್ದಾನೆ. ಹ್ಯೂಮ್‌ನ ಉದ್ದೇಶ ಶುದ್ಧ ವೈಚಾರಿಕತೆಯ ಬೇರುಗಳನ್ನು ಕತ್ತರಿಸುವುದಾಗಿತ್ತು ಮತ್ತು ಅದರೊಂದಿಗೇ ಇಂದ್ರಿಯಾನುಭವದ ಇತಿಮಿತಿಗಳನ್ನು ಗುರುತಿಸುವುದಾಗಿತ್ತು. ಡೇಕಾರ್ಟ, ಸ್ಪಿನೋಜಾ ಮತ್ತು ಲೈಬ್ನಿಜ್‌ರ (Descartes, Spinoza, Leibniz) ಶುದ್ಧ ವೈಚಾರಿಕತೆಯ ಮೂಲ ಬೇರುಗಳನ್ನೇ ನಾಶಮಾಡುವುದು ಹ್ಯೂಮ್‌ನ ನೇರವಾದ ಉದ್ದೇಶವಾಗಿದ್ದರೂ ಪರೋಕ್ಷವಾಗಿ ಅವನು ವಿಜ್ಞಾನಗಳ ತಳಹದಿಗಳನ್ನೇ ಸಡಿಲಿಸಿದ್ದಾನೆ. ಹೇಗೆ ?

ವಿಜ್ಞಾನಗಳು ಎರಡು ಮೂಲಭೂತ ಗೃಹೀತ ತತ್ವಗಳ (Pre-suppositions) ಮೇಲೆ ತಮ್ಮ ಸೌಧಗಳನ್ನು ಕಟ್ಟಿವೆ. ಅವು ಯಾವುವೆಂದರೆ ೧) ಎರಡು ಘಟನೆಗಳ ಮಧ್ಯೆ ಆವಶ್ಯಕ ಸಂಬಂಧ (necessary connection) ವಿದ್ದರೆ ಅವರಲ್ಲಿ ಒಂದು ಕಾರಣ ಮತ್ತು ಇನ್ನೊಂದು ಕಾರ್ಯವಾಗಿರುತ್ತದೆ. ಸಂಕ್ಷಿಪ್ತವಾಗಿ ಹೇಳಬೇಕಾದರೆ ವಿಜ್ಞಾನಗಳ ಪ್ರಕಾರ ಕಾರ್ಯಕಾರಣ ಸಂಬಂಧ ಆವಶ್ಯಕ ಸಂಬಂಧ. ೨) ವಿಜ್ಞಾನಗಳ ಎರಡನೆಯ ಗೃಹೀತ ತತ್ವವೆಂದರೆ "ಒಂದೇ ಬಗೆಯ ಸನ್ನಿವೇಶಗಳಲ್ಲಿ ಒಂದೇ ಬಗೆಯ ಪರಿಣಾಮಗಳು ಸಂಭವಿಸುತ್ತವೆ" ("Under Similar conditions, Similar effects occur").

ವಿಜ್ಞಾನಗಳ ಈ ಮೇಲಿನ ಎರಡೂ ತತ್ವಗಳನ್ನು ವೈಚಾರಿಕವಾಗಿ ಒಪ್ಪಿಕೊಳ್ಳಲು ಯಾವ ತಾರ್ಕಿಕ ಆಧಾರಗಳೂ ಇಲ್ಲ ಎಂದು ಹ್ಯೂಮ್ ತೋರಿಸಿದ್ದಾನೆ. ಉದಾಹರಣೆಗೆ ವಿಜ್ಞಾನಗಳ ಮೊದಲನೆಯ ತತ್ವ ವಿಮರ್ಶಿಸೋಣ. ಪ್ರಕೃತಿಯಲ್ಲಿ ಸಂಭವಿಸುವ ಎರಡು ಘಟನೆಗಳ ಮಧ್ಯೆ ಆವಶ್ಯಕ ಸಂಬಂಧವಿದೆ ಎಂಬುದನ್ನು ಸಿದ್ಧ ಮಾಡುವುದು ಹೇಗೆ ? ನಮ್ಮ ಅನುಭವ ಎರಡು ಘಟನೆಗಳು ಸಂಭವಿಸಿದವು ಎಂದು ಮಾತ್ರ ತೋರಿಸುತ್ತದೆ. ಅಥವಾ ಒಂದು ಘಟನೆಯಾದ ಮೇಲೆ ಇನ್ನೊಂದು ಘಟನೆ ಸಂಭವಿಸಿತು ಎಂದು ತೋರಿಸಬಹುದು. ಆದರೆ ಎರಡು ಘಟನೆಗಳ ಮಧ್ಯೆ ಆವಶ್ಯಕ ಕೊಂಡಿ ಇದೆ ಎಂದು ಅನುಭವ ತೋರಿಸುವುದಿಲ್ಲ. ಅಂತಹ ಆವಶ್ಯಕ ಕೊಂಡಿ ಇದೆ ಎಂಬುದು ಕೇವಲ ನಮ್ಮ ನಂಬಿಕೆ. ಈ ನಂಬಿಕೆಗೆ ತಾರ್ಕಿಕತೆಯಲ್ಲಿಯಾಗಲೀ ಅನುಭವದಲ್ಲಿಯಾಗಲೀ ಯಾವ ಆಧಾರವೂ ಇಲ್ಲ ಎಂದು ಹ್ಯೂಮ್ ಬಹಳ ಸಮರ್ಥವಾಗಿ ತೋರಿಸಿದ್ದಾನೆ. ಹೂಮ್‌ನ ಈ ವಾದ

ದಲ್ಲಿ ಸತ್ಯಾಂಶವಿದ್ದರೆ, ವಿಜ್ಞಾನಗಳ ಒಂದು ಸ್ತಂಭ ಸಡಿಲಾಗುತ್ತದೆ. ವಿಜ್ಞಾನದ ಮಿತಿ ಅಥವಾ ವ್ಯಾಪ್ತಿ ಬಹಳ ಸಂಕುಚಿತವಾಗುತ್ತದೆ.

ಹ್ಯೂಮ್‌ನ ಇನ್ನೊಂದು ವಾದವೂ ವಿಜ್ಞಾನಿಗಳಿಗೆ ಮಾರಕವಾಗಿ ಕಾಣುತ್ತದೆ. ಅವನೆಂದರೆ ಭೂತಕಾಲದಲ್ಲಿಯೂ (Past time) ಮತ್ತು ವರ್ತಮಾನ ಕಾಲದಲ್ಲಿಯ ಅನುಭವಗಳಿಂದ ಸಿದ್ಧವಾದ ಸತ್ಯಗಳು ಭವಿಷ್ಯತ್ತಿನಲ್ಲಿಯೂ ಸತ್ಯವಾಗಿಯೇ ಇರುತ್ತವೆ ಎಂಬುದಕ್ಕೆ ಯಾವ ತಾರ್ಕಿಕ ಆಧಾರವೂ ಇಲ್ಲ ಎನ್ನುತ್ತಾನೆ ಹ್ಯೂಮ್. ಇದಕ್ಕೆ ಬಹಳ ಸರಳವಾದ ಉದಾಹರಣೆಯೆಂದರೆ ಸೂರ್ಯನು ನಿನ್ನೆಯವರೆಗೆ ಮತ್ತು ಇಂದು ಪೂರ್ವಕ್ಕೆ ಉದಯಿಸಿದನು ಎಂದು ನಮ್ಮ ಅನುಭವ ತೋರಿಸಿರಬಹುದು. ಆದರೆ ಇದನ್ನೇ ಆಧಾರವಾಗಿಟ್ಟುಕೊಂಡು ಸೂರ್ಯನು ನಾಳೆಯೂ ಪೂರ್ವಕ್ಕೆ ನಿಶ್ಚಯವಾಗಿ ಉದಯಿಸುತ್ತಾನೆ ಎಂಬುದಕ್ಕೆ ನಮಗೆ ನಿಜವಾದ ತಾರ್ಕಿಕ ಆಧಾರವಿಲ್ಲ. ಅಂದರೆ ಹಿಂದಿನ ಮತ್ತು ಇಂದಿನ ಅನುಭವಗಳು ಮುಂದಿನ (ನಾಳೆಯ) ಘಟನೆಗಳ ಬಗ್ಗೆ ಏನನ್ನೂ ಖಚಿತವಾಗಿ ಸಿದ್ಧ ಮಾಡಲಾರವು. ಹ್ಯೂಮ್‌ನ ಈ ವಾದವು ನಿಜವಾಗಿದ್ದರೆ ವಿಜ್ಞಾನಗಳು ಅವ್ಯಕ್ತ ಕಾರ್ಯಕಾರಣ ಸಂಬಂಧಗಳ ಅಥವಾ ಭೂತ ವರ್ತಮಾನ ಕಾಲಗಳ ಅನುಭವಗಳ ಆಧಾರದ ಮೇಲೆ ಬಹುದೂರದ ಭವಿಷ್ಯತ್ತಿನಲ್ಲಿ ಸಂಭವಿಸಬಹುದಾದ ಘಟನೆಗಳ ಬಗ್ಗೆ ಊಹಿಸುವುದು (Predict) ತಪ್ಪು. ಹ್ಯೂಮ್‌ನ ಈ ಸಿದ್ಧಾಂತಗಳ ಬಗ್ಗೆ ವಿಜ್ಞಾನಿಗಳು ತಲೆ ಕೆಡಿಸಿಕೊಂಡಿಲ್ಲವಾದರೂ ಜರ್ಮನ್ ತತ್ತ್ವಜ್ಞಾನಿ ಕ್ಯಾಂಟ್ (Kant) ನಿಂದ ಹಿಡಿದು ಇಂಗ್ಲಿಷ್ ತತ್ತ್ವಜ್ಞಾನಿ ಬರ್ಟ್ರೆಂಡ್ ರಸೆಲ್‌ನ (Bertrand) ವರೆಗೆ ತತ್ತ್ವಜ್ಞಾನಿಗಳು ಹ್ಯೂಮ್‌ನ ಸಿದ್ಧಾಂತಗಳನ್ನು ಖಂಡಿಸಲು ಪ್ರಯತ್ನಿಸಿದ್ದಾರೆ. ಆದರೆ ಹ್ಯೂಮ್‌ನ ಸಿದ್ಧಾಂತಗಳನ್ನು ಪೂರ್ತಿಯಾಗಿ ಯಾರೂ ಇನ್ನೂ ಅಸತ್ಯ ಎಂದು ಸಿದ್ಧ ಮಾಡಿ ತೋರಿಸಿಲ್ಲ. ನಿಜವಾಗಿ ನೋಡಿದರೆ ಹ್ಯೂಮ್‌ನ ತತ್ತ್ವಶಾಸ್ತ್ರ ಅನುಗಮನ (Induction) ವಿಧಾನ ಅಥವಾ ವೈಜ್ಞಾನಿಕ ವಿಧಾನದ ಆಧಾರಗಳು (Foundations) ದೋಷಯುಕ್ತವಾಗಿವೆ ಎಂದು ಪ್ರತಿಪಾದಿಸುತ್ತದೆ. ಅನುಗಮನ ವಿಧಾನದಲ್ಲಿರುವ ತಾರ್ಕಿಕ ದೋಷಗಳ ಪ್ರವರ್ತನದಿಂದ ಆದ ಪರಿಣಾಮವೆಂದರೆ ಇಂದು ಯಾವ ವಿಜ್ಞಾನಿಯೂ ತನ್ನ ವೈಜ್ಞಾನಿಕ ಸಿದ್ಧಾಂತಗಳು (Scientific Theories) ಸಂಪೂರ್ಣ ನಿರ್ಣಯಾತ್ಮಕ ಎಂದು ತಿಳಿಯುವುದಿಲ್ಲ. ಅವು ಅತೀ ಸಂಭವ (highly probable) ಮಾತ್ರ.

ವೈಜ್ಞಾನಿಕತೆಯ ಅಥವಾ ವೈಚಾರಿಕತೆಯ ಬಗ್ಗೆ ಚರ್ಚೆ ಶುರುವಾದಾಗ ಸಾಮಾನ್ಯವಾಗಿ ಬರ್ಟ್ರೆಂಡ್ ರಸೆಲ್‌ನನ್ನು ವೈಚಾರಿಕತೆಗೆ ಮಾದರಿಯಾಗಿ ಇಟ್ಟುಕೊಳ್ಳುವ ಪದ್ಧತಿ ಇದೆ. ರಸೆಲ್ ತೀವ್ರ ವೈಚಾರಿಕ ನಿಜ. ಆದರೆ ರಸೆಲ್ ವೈಜ್ಞಾನಿಕತೆಯ ಮತ್ತು ವೈಚಾರಿಕತೆಯ ಇತಿಮಿತಿಗಳನ್ನು ಸಂಪೂರ್ಣ ಅರಿತಿದ್ದವನು. ಅದರ ಬಗ್ಗೆ ತನ್ನ ಅನೇಕ ಗ್ರಂಥಗಳಲ್ಲಿ ಬರೆದಿದ್ದಾನೆ. ಅವನ "Scientific outlook" ಎಂಬ ಗ್ರಂಥದ ಮೂರನೆಯ ಅಧ್ಯಾಯದಲ್ಲಿ ವೈಜ್ಞಾನಿಕ ವಿಧಾನದ ಮಿತಿಗಳು

ಯಾವುವು ಎಂಬುದನ್ನು ಸಂಕ್ಷಿಪ್ತವಾಗಿಯಾದರೂ ಮನದಟ್ಟಾಗುವಂತೆ ಪ್ರತಿಪಾದಿಸಿದ್ದಾನೆ. ಅಲ್ಲಿ ಒಂದು ಕಡೆ ವಿಜ್ಞಾನ ಮತ್ತು ವೈಜ್ಞಾನಿಕತೆಗಳನ್ನು ತೀವ್ರವಾಗಿ ಮತ್ತು ಕಟುವಾಗಿ ಹೀಗೆ ವಿಮರ್ಶಿಸಿದ್ದಾನೆ:

"It is characteristic of the advance of science that less and less is found to be datum, and more and more is found to be inference. The inference is, of course, quite unconscious, except in those who have trained themselves to philosophical scepticism ; but it must not be supposed that an unconscious inference is necessarily valid. Babies think that there is another baby on the other side of the looking-glass, and although they have not arrived at this conclusion by a logical process, it is nevertheless mistaken. Many of our unconscious inferences, which are, in fact, conditioned reflexes acquired in early infancy, are highly dubious as soon as they are subjected to logical scrutiny. Physics has been compelled by its own necessities to take account of some of these "*unwarrantable prejudices.*"[2]

ಬರ್ಟ್ರೆಂಡ್ ರಸೆಲ್ಲರ ಇಂಗ್ಲಿಷಿನಲ್ಲಿರುವ ಮೇಲಿನ ವಿಚಾರಗಳನ್ನು ಕನ್ನಡಕ್ಕೆ ಅನುವಾದಿಸುವ ಸಾಹಸಕ್ಕೆ ಕೈ ಹಾಕದೇ ಇಷ್ಟು ಮಾತ್ರ ಹೇಳಬಹುದು. ಅಲ್ಲಿ ಅಭಿವ್ಯಕ್ತವಾಗಿರುವ ವಿಚಾರಗಳು ಮೇಲೆ ವಿವರಿಸಿದ ಹ್ಯೂಮ್‌ನ ಸಂದೇಹಾತ್ಮಕ ವಿಚಾರಗಳಿಗೆ ಸರಿಸಮಾನವಾಗಿವೆ. ವೈಜ್ಞಾನಿಕ ಸಂದೇಹಾತ್ಮಕತೆಯು (Scientific Scepticism) ತೀವ್ರವಾಗುತ್ತಿರುವ ಇತ್ತೀಚಿನ ದಿನಗಳಲ್ಲಿ ರಸೆಲ್ಲರ ಈ ವಿಚಾರಗಳು ಅವರ ಮುಕ್ತ ವೈಚಾರಿಕತೆಗೆ ಕನ್ನಡಿ ಹಿಡಿದಿವೆ.

ಅಡಿಟಿಪ್ಪಣಿಗಳು

1 See Descarte's Discourse on Method
2 Bertrand Russell – Scientific Outlook. ALLEN & UNWIN. London pp. 75–76.

ಹಿಂದಿನ ತಾತ್ತ್ವಿಕರು ಜ್ಞಾನದ ವಿಚಾರವಾಗಿ ಕೇಳಿದ ಪ್ರಶ್ನೆ ಇದು : ನಮ್ಮ ಜ್ಞಾನ ಹೇಗೆ ಹುಟ್ಟುತ್ತದೆ ? ಅದಕ್ಕೆ ಕಾರಣ ಯಾವುದು ? ಅದು ಯಾವುದರಿಂದ ಹುಟ್ಟುತ್ತದೆ ? ಈರೀತಿ ಪ್ರಶ್ನೆ ಕೇಳುವುದು ಅಯುಕ್ತವೆಂದು ಕಾಂಟನ ನಿಲವು. ಏಕೆಂದರೆ ಈ ರೀತಿ ಪ್ರಶ್ನೆ ಕೇಳಿದಾಗ ಜ್ಞಾನ ಹುಟ್ಟುವುದಕ್ಕೆ ಮುಂಚೆ ಅದಕ್ಕೆ ಹೊರತಾದ ಯಾವುದೋ ಒಂದರಿಂದ ಅನುಭವದ ಹುಟ್ಟನ್ನು ತಿಳಿಸಲು ಪ್ರಯತ್ನಿಸುತ್ತೇವೆ. ಅಂದರೆ ಅನುಭವವಿಲ್ಲದ ಅಥವಾ ತಿಳಿಯದ ಅಂಶದ ಮೂಲಕ ತಿಳಿದುದರ ಕಾರಣವನ್ನು ವಿವರಿಸಲು ಪ್ರಯತ್ನಿಸುತ್ತೇವೆ. ಮುಖ್ಯವಾಗಿ ಲಕ್ಷಿಸಬೇಕಾದುದು ಇದು : ನಮಗೆ ಅನುಭವವಿದೆ, ಗಣಿತ ಜ್ಞಾನವಿದೆ, ಭೌತಶಾಸ್ತ್ರ ಜ್ಞಾನವಿದೆ. ಗಣಿತ ಜ್ಞಾನ ಸಾಧ್ಯವಾಗಿರುವುದು ಹೇಗೆ ? ಭೌತಶಾಸ್ತ್ರ ಜ್ಞಾನ ಸಾಧ್ಯವಾಗಿರುವುದು ಹೇಗೆ ? ಈ ಪ್ರಶ್ನೆಗಳನ್ನು ಬಗೆಹರಿಸಲು ನಾವು ನಮಗೆ ಸಾಧ್ಯವಾಗಿರುವ ಜ್ಞಾನದಲ್ಲೇ ಹುದುಗಿರುವ ಭಾವನಾರೂಪಗಳನ್ನು (ಫಾರಮ್ಸ್) ವಿಶದಪಡಿಸಬೇಕು. ಆದ್ದರಿಂದ ಯುಕ್ತವಾದ ಮಾರ್ಗ ನಿರ್ವಿಚಾರವಾದವೂ (ಡಾಗ್ಮ್ಯಾಟಿಸಂ) ಅಲ್ಲ, ಕೇವಲ ಅನುಭವಾರೂಢವಾದವೂ (ಎಂಪಿರಿಸಿಸಂ) ಅಲ್ಲ. ಅದು ವಿಮರ್ಶಾವಾದ (ಕ್ರಿಟಿಸಿಸಂ)

[ಕನ್ನಡ ವಿಶ್ವಕೋಶ, ಸಂಪುಟ ೪, ಪು. ೩೭೩–೭೪]

ಜಿ. ಎಚ್. ಸುರೇಶ್
ಮತ್ತು
ವೈ. ಎ. ದೇವಪಾಲ್

ಭಾರತೀಯ ರೈಲು ವ್ಯವಸ್ಥೆ - ಒಂದು ನೋಟ

ನಮ್ಮ ದೇಶದ ಜನತೆಗೆ ಅತೀ ಸುಲಭವಾಗಿ ಮತ್ತು ಕಡಿಮೆ ವೆಚ್ಚದಲ್ಲಿ ಆಗುವುದೆಂದರೆ – ರೈಲು ಪ್ರಯಾಣ. ರೈಲು 1853ರಲ್ಲಿ ಬೋರಿಬಂದರ್‌ನಿಂದ ಥಾಣದವರೆಗೆ, ತನ್ನ ಮೊಟ್ಟಮೊದಲ ಪ್ರಯಾಣವನ್ನು ಮಾಡಿತು. ಭಾರತದಲ್ಲಿನ ರೈಲು ಅಭಿವೃದ್ಧಿಗೆ ನಾವು ಬ್ರಿಟಿಷರಿಗೆ ಕೃತಜ್ಞರಾಗಿರಬೇಕು. ಬ್ರಿಟಿಷರು ವ್ಯಾಪಾರಕ್ಕೆಂದು ಬಂದು, ತಮ್ಮ ವ್ಯಾಪಾರಾಭಿವೃದ್ಧಿಗೆ ಅನುಗುಣವಾಗಿ ಕಲ್ಕತ್ತ, ಮದ್ರಾಸ್, ಮುಂಬಯಿ ಮುಂತಾದ ದೊಡ್ಡ ಬಂದರುಗಳಿಂದ ದೇಶದ ಒಳಭಾಗಗಳಿಗೆ ರೈಲಿನ ಸೌಲಭ್ಯವನ್ನು ಕಲ್ಪಿಸಿದರು.

ರೈಲುಗಳು ಅತಿ ಕಡಿಮೆ ದರದಲ್ಲಿ ಅಗಾಧ ಪ್ರಮಾಣದ ಸರಕು ಸಾಗಾಣಿಕೆ ಮತ್ತು ದೂರ ಪ್ರಯಾಣದ ಸೌಲಭ್ಯವನ್ನು ಕಲ್ಪಿಸಿದವು. ರೈಲು ಅಭಿವೃದ್ಧಿ ಹೊಂದಿದಂತೆ ಆಹಾರ ಸಾಮಗ್ರಿಗಳನ್ನು ಅವಶ್ಯಕತೆ ಇರುವ ಪ್ರದೇಶಗಳಿಗೆ ತಲುಪಿಸಲು ನೆರವಾಯಿತು ಮತ್ತು ಕೈಗಾರಿಕೆಗಳನ್ನು ಮಾರುಕಟ್ಟೆಯ ಸಮೀಪದಲ್ಲಿ ಪ್ರಾರಂಭ ಮಾಡಲು ಅನುಕೂಲ ದೊರಕಿತು.

ರೈಲಿನ ಜೊತೆ ಸರಿಸಮಾನವಾಗಿ ಬೆಳೆಯಲು ಪ್ರಯತ್ನಿಸಿದ ರಸ್ತೆ ಮತ್ತು ಆಕಾಶ ಮಾರ್ಗಗಳು ಸ್ಪರ್ಧೆಯಲ್ಲಿ ಹಿಂದುಳಿದಿವೆ. ರಸ್ತೆ ಮತ್ತು ಆಕಾಶ ಮಾರ್ಗಗಳಲ್ಲಿನ ನ್ಯೂನತೆಗಳು, ಪ್ರಯಾಣದರ ಮತ್ತು ಬಾಡಿಗೆಗಳನ್ನು ಭರಿಸಲಾಗದ ನಮ್ಮಲ್ಲಿಯ ಬಡತನ ಈ ಪರಿಸ್ಥಿತಿಗೆ ಮುಖ್ಯ ಕಾರಣ. 1947ರ ನಂತರ ನಮ್ಮ ರೈಲು, ರಸ್ತೆ ಮತ್ತು ಇತರ ಸಾರಿಗೆ ಮಾರ್ಗಗಳಲ್ಲಿ ಬಹಳಷ್ಟು ಬಲಶಾಲಿಯಾಗಿದೆ. ರಸ್ತೆ ಮತ್ತು ರೈಲು ಸರಕು ಸಾಗಾಣಿಕೆ ಇತ್ತೀಚಿನ ದಿನಗಳಲ್ಲಿ ಸುದೀರ್ಘವಾಗಿ ಬೆಳೆದಿದೆ. ಅಂಕಿ ಅಂಶಗಳನ್ನು ಗಮನಿಸಿದಾಗ ಭಾರತೀಯ ರೈಲು ಪ್ರಪಂಚದಲ್ಲಿಯೇ ದೊಡ್ಡ ಸರಕು ಸಾಗಾಣಿಕೆಯ ಸಾಧನವಾಗಿದೆ. ಇತ್ತೀಚಿನ ದಿನಗಳಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಅನೇಕ ಸೌಲಭ್ಯಗಳನ್ನು ಕಲ್ಪಿಸಿದೆ. ರಾತ್ರಿ ಪ್ರಯಾಣಕ್ಕೆ ಬೇಕಾಗುವ ಸೌಲಭ್ಯಗಳನ್ನು ಉತ್ತಮ ಪಡಿಸಿದೆ. ಪ್ರಪಂಚದ ಇತರ ದೇಶದ ಜನರು ಪಾವತಿ ಮಾಡುವ ದರ ಮತ್ತು

ಪಡೆಯುವ ಸೌಲಭ್ಯಗಳ ಜೊತೆ ನಮ್ಮ ರೈಲು ಪ್ರಯಾಣಿಕರು ಭರಿಸುವ ದರ ಮತ್ತು ಪಡೆಯುವ ಸೌಲಭ್ಯಗಳನ್ನು ಹೋಲಿಸಿದಾಗ ನಮ್ಮ ರೈಲುಗಳು ಉತ್ತಮವಾದ ಕೆಲವು ಸೌಲಭ್ಯಗಳನ್ನು ಕೊಡುತ್ತವೆಂದು ಹೆಮ್ಮೆಯಿಂದ ಹೇಳಬಹುದು.

ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದ ರೈಲು ಪ್ರಯಾಣ ದರದಲ್ಲಿ ಕೆಲವಾರು ವ್ಯತ್ಯಾಸಗಳಿದ್ದವು. ದೇಶ ವಿಶಾಲವಾದ್ದರಿಂದ ಆಡಳಿತ ಮತ್ತು ನಿರ್ವಹಣೆ ಬಹಳ ಕಷ್ಟ ಸಾಧ್ಯವಾಗಿತ್ತು. ದಕ್ಷ ನಿರ್ವಹಣೆಗೆ ಅನುಕೂಲವಾಗಲು ಇಡೀ ರೈಲು ವ್ಯವಸ್ಥೆಯನ್ನು ವಿಭಜಿಸಿ ಅನೇಕ ವಿಭಾಗಗಳನ್ನು ಮಾಡಿದ್ದರು, ಪ್ರತಿಯೊಂದು ವಿಭಾಗವು ತನ್ನದೇ ಆದಂಥ ಪ್ರಯಾಣ ದರಗಳನ್ನು ನಿಗದಿ ಪಡಿಸುವ ಸಾಧ್ಯತೆ ಇದ್ದಿತು. ಕಲ್ಲಿದ್ದಲು ಗಣಿಗಳಿಗೆ ಹತ್ತಿರ ಎನ್ನುವ ಕಾರಣದಿಂದ ಮತ್ತು ಜನರ ಸಾಂದ್ರತೆಯನ್ನು ಪರಿಗಣಿಸಿ ಕಡಿಮೆ ದರಗಳನ್ನು ಕೆಲವು ವಿಭಾಗಗಳು ನಿಗದಿ ಪಡಿಸಿದ್ದವು. ಈ ರೀತಿ ಅತೀ ಹೆಚ್ಚಿನ ದರವನ್ನು ನಿಗದಿಪಡಿಸಿದ್ದವರು ದಕ್ಷಿಣ ವಿಭಾಗದವರು. ಈ ವಿಭಾಗ ಕಲ್ಲಿದ್ದಲು ಗಣಿಗಳಿಗೆ ದೂರವಾಗಿರುವುದು ಇದಕ್ಕೆ ಮುಖ್ಯ ಕಾರಣವಾಗಿತ್ತು. ಇದೇ ರೀತಿ ಪೂರ್ವ ವಿಭಾಗದವರು ಅತೀ ಕಡಿಮೆ ದರವನ್ನು ನಿಗದಿಪಡಿಸಿ ಪ್ರಯಾಣಿಕರಿಗೆ ಅನುಕೂಲಪಡಿಸಿದ್ದರು.

ಸ್ವಾತಂತ್ರ್ಯನಂತರದ ಪರಿಸ್ಥಿತಿ

1947ರ ನಂತರ ಅಧಿಕಾರಕ್ಕೆ ಬಂದ ಸರ್ಕಾರ ಎಲ್ಲಾ ತರಹದ ವ್ಯತ್ಯಾಸಗಳಿಗೆ ಇತಿಶ್ರೀ ಹೇಳಿ ಎಲ್ಲಾ ವಿಭಾಗದವರಿಗೂ ಏಕ ರೀತಿಯಾದ ಪ್ರಯಾಣ ದರಗಳನ್ನು ನಿಗದಿ ಪಡಿಸಿದರು. ವ್ಯವಸಾಯ ಪ್ರಧಾನ ನಮ್ಮ ಜನರನ್ನು ಶಿಸ್ತು ಸಂಹಿತೆ, ನಿತ್ಯ ಹಾಜರಿ ಗುಂಪು ಸಹಕಾರ ಮತ್ತು ಸಂಘಟನೆಯಲ್ಲಿ ಪಳಗಿಸಿ ಕೈಗಾರಿಕಾ ವೃತ್ತಿಗಳಿಗೆ ಹೊಂದುವಂತೆ ಮಾಡಲು ಬಹಳ ಶ್ರಮವಾಯಿತು. ಈ ದಿಶೆಯಲ್ಲಿ ಜನರನ್ನು ಪರಿವರ್ತಿಸಬೇಕಾದಾಗ ಅಭಿವೃದ್ಧಿ ಕಾರ್ಯವು ಮುಂದವಾಗಿ ಸಾಗಿತು ಅಲ್ಲದೆ ಅನೇಕ ಅಪಘಾತಗಳನ್ನು ಎದುರಿಸಬೇಕಾಯಿತು. ಅಂಕಿ ಅಂಶಗಳನ್ನು ಗಮನಿಸಿದಾಗ 1976–77 ಅಭಿವೃದ್ಧಿ ಕಾರ್ಯ ನಡೆಯುತ್ತಿತ್ತು. ತದನಂತರ ಅದರ ದಕ್ಷತೆ ಕುಂಠಿತವಾಗುತ್ತಾ ಬಂತು. ಆದರೂ 1981ರ ವೇಳೆಗೆ ಅದು ತನ್ನ ಮೊದಲಿನ ದಕ್ಷತೆಯನ್ನು ಉತ್ತಮ ಆಡಳಿತದಿಂದಾಗಿ ರೂಢಿಸಿಕೊಂಡಿತು,

ಕೆಲವು ಅಂಕಿ ಅಂಶಗಳು

1977–78ರ ಸಾಲಿಗೆ ಹೋಲಿಸಿದಾಗ 1981–82ರಲ್ಲಿ ಸರಕು ಸಾಗಾಣಿಕೆಯು ಪ್ರತಿದಿನ ಪ್ರತಿ ಸರಕು ಬೋಗಿಗೆ 81.9 ಕಿ. ಮೀ. ಗಳಿಂದ 83.6 ಕಿ. ಮೀ.ಗೆ ವೃದ್ಧಿಗೊಂಡಿತು. 1976–77ರ ಸಾಲಿಗೆ ಹೋಲಿಸಿದಾಗ 1981–82ರಲ್ಲಿ ಜನ ಸಾಗಾಣಿಕೆಯು 306 ಕಿ. ಮೀ. ಗಳಿಂದ 342 ಕಿ. ಮೀ. ಗಳಿಗೆ ಏರಿತು. ಈ ರೀತಿಯಾಗಿ ತುಲನೆ ಮಾಡಿದಾಗ 1950–51ನೇ ಸಾಲಿಗಿಂತ 1976–77ರಲ್ಲಿ ಶೇ. 35ರಷ್ಟು

ಹೆಚ್ಚುವರಿಯಾಗಿವೆ. ಮೇಲಿನ ಅಂಕಿ ಅಂಶಗಳನ್ನು ನೋಡಿದಾಗ ಪ್ರಪಂಚದಲ್ಲಿ ಜಪಾನಿನ ರೈಲು ವ್ಯವಸ್ಥೆಯ ನಂತರ ಭಾರತೀಯ ರೈಲು ವ್ಯವಸ್ಥೆ ಎರಡನೆಯ ಸ್ಥಾನವನ್ನು ಗಳಿಸಿದೆ. ಸರಕು ಬೋಗಿಗಳ ಆವರ್ತನವು 13½ ದಿನಗಳಿಗೆ ಇಳಿದಿದೆ. ಮತ್ತು ಕಲ್ಲಿದ್ದಲು ತುಂಬುವಿಕೆ ಶೇ. 30ರಷ್ಟು ಹೆಚ್ಚಾಗಿದೆ. ಅಗಲ ಹಳಿಯ ರೈಲುಗಳು ಶೇ. 80ಕ್ಕಿಂತಲೂ ಹೆಚ್ಚಿಗೆ ಸರಕನ್ನು ಸಾಗಿಸುತ್ತಿವೆ ಮತ್ತು ಅನೇಕ ಸೌಲಭ್ಯಗಳನ್ನೂ ಸಹ ಕಲ್ಪಿಸಿವೆ. 30 ವರ್ಷಗಳಲ್ಲಿ ಜನ ಸಾಗಾಣಿಕೆಯು, ಮೇಲ್ದರ್ಜೆಯಲ್ಲಿ ಶೇ. 330ರಷ್ಟು ಕೆಳವರ್ಜೆಯಲ್ಲಿ 370 ರಷ್ಟು ಹೆಚ್ಚಾಗಿದೆ. ಆದರೆ ಪ್ರಯಾಣಿಕರ ಸಂಖ್ಯೆ ಹೆಚ್ಚಿದಂತೆಲ್ಲಾ ಆದಕ್ಕೆ ತಕ್ಕಂತೆ ಆಹಾರ ಮತ್ತು ಇತರ ಸೌಲಭ್ಯಗಳು, ಸ್ವಚ್ಛತೆ ಮತ್ತು ಸ್ಥಳ ಮೀಸಲಾತಿಗಳಲ್ಲಿ ಬದಲಾವಣೆಯಾಗಲಿಲ್ಲ. ಇದರಿಂದಾಗಿ ಪ್ರಯಾಣಿಕರು ಸ್ವಲ್ಪ ತೊಂದರೆಗೊಳಗಾದರು. ರೈಲು ಆಡಳಿತ ಈ ಅಂಶವನ್ನು ಬಹಳ ಕೂಲಂಕಷವಾಗಿ ಗಮನಿಸಬೇಕು.

ಪ್ರಯಾಣಿಕರು ಹೆಚ್ಚಿದಂತೆ ರೈಲುಗಳ ಸಂಖ್ಯೆಯೂ ಹೆಚ್ಚಾಯಿತು. ಆದರೆ ಬೋಗಿಗಳ ಸಂಖ್ಯೆಯಲ್ಲಿ ಮಾತ್ರ ಸುಧಾರಣೆಯಾಗಲಿಲ್ಲ. ಇದರಿಂದ ಬಹುಪಾಲು ರೈಲುಗಳು ಕಡಿಮೆ ಸಂಖ್ಯೆಯ ಬೋಗಿಗಳ ಮೂಲಕ ಕಾರ್ಯ ನಿರ್ವಹಿಸುತ್ತಿವೆ. ಇಂದು ದೇಶದಲ್ಲಿ ಸುಮಾರು 1600 ಬೋಗಿಗಳ ಕೊರತೆ ಇದೆ.

ಪ್ರಯಾಣಿಕರ ಊಟದ ವ್ಯವಸ್ಥೆಯನ್ನು ರೈಲು ಆಡಳಿತ ವರ್ಗ ಗುತ್ತಿಗೆದಾರರಿಂದ ತಾನೇ ವಹಿಸಿಕೊಂಡರೂ ಅದರ ಕಾರ್ಯನಿರ್ವಹಣೆ ಅಷ್ಟು ತೃಪ್ತಿಕರವಾಗಿಲ್ಲ. ಸ್ಥಳಗಳ ಮುಂಗಡ ಕಾದಿರಿಸುವಿಕೆಯಲ್ಲಿ ನಡೆಯುವ ಮೋಸಗಳಿಗೆ, ಸೌಲಭ್ಯಗಳ ಕೊರತೆಯೂ ಮತ್ತು ಪೂರ್ವ ಯೋಜಿತರಲ್ಲದ ಪ್ರಯಾಣಿಕರೂ ಸಹ ಹೊಣೆಯಾಗುತ್ತಾರೆ ಛಾಯಾ ಚಿತ್ರಗಳುಳ್ಳ ಗುರುತಿನ ಚೀಟಿಗಳನ್ನು ಸ್ಥಳಗಳನ್ನು ಕಾದಿರಿಸುವ ಪ್ರಯಾಣಿಕರಿಗೆ ನೀಡಿದರೆ; ಈ ಮೋಸ ಮತ್ತು ಅನ್ಯಾಯಗಳನ್ನು ಸಾಧ್ಯವಾದಷ್ಟು ನಿವಾರಿಸಬಹುದು.

1976–77ರಲ್ಲಿ ಅಪಘಾತಗಳ ಸಂಖ್ಯೆ 780ರಷ್ಟಿತ್ತು. 1980–81ರಲ್ಲಿ ಇದರ ಪ್ರಮಾಣ 859ಕ್ಕೆ ಏರಿತು. 1981–82ರ 10 ತಿಂಗಳ ಅವಧಿಯಲ್ಲಿ ಅಪಘಾತಗಳ ಸಂಖ್ಯೆ 956ಕ್ಕೆ ಏರಿದೆ. ಈ ಅಪಘಾತಕ್ಕೆ ಶೇ. 97ರಷ್ಟು ಸಿಬ್ಬಂದಿಯೇ ಕಾರಣವೆಂದು ತಿಳಿದುಬಂದಿದೆ. ಹಳಿ ತಪ್ಪುವಿಕೆಯಿಂದಾದ ಅಪಘಾತಗಳಲ್ಲಿ ಶೇ. 45ರಷ್ಟು ರೈಲು ಸಿಬ್ಬಂದಿಯೇ ಹೊಣೆ ಎಂದು ಗುರುತಿಸಲಾಗಿದೆ ಮತ್ತು ಯಂತ್ರ ದೋಷಗಳು ಶೇ. 29ರಷ್ಟು ಅಪಘಾತಗಳಿಗೆ ಕಾರಣವಾಗಿವೆ. 1980–81ರಲ್ಲಿ ಆದ ಅಪಘಾತಗಳಲ್ಲಿ 244 ಜನ ಸಾವಿಗೀಡಾಗಿದ್ದಾರೆ. ಈ ಅಪಘಾತಗಳನ್ನು ನಿಯಂತ್ರಿಸಲು ಆಡಳಿತವರ್ಗ ಅನೇಕ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಶ್ರಮಿಸುತ್ತಿದೆ.

ಬೋಗಿಗಳ ಅಭಾವ

ಪ್ರಯಾಣಿಕರ ಬೋಗಿ ಮತ್ತು ವ್ಯಾಗನ್ನುಗಳ ವಿಳಂಬ ಬದಲಾವಣೆಯು ರೈಲ್ವೇಯಲ್ಲಿರುವ ಹಣದ ಕೊರತೆಯನ್ನು ತೋರಿಸುತ್ತದೆ. 6ನೇ ಪಂಚವಾರ್ಷಿಕ ಯೋಜನೆಯ

ಕೊನೆಯಲ್ಲಿ ಅತಿ ಹಳೆಯದಾದ 1000 ಬೋಗಿಗಳು ಮತ್ತು 10,000 ಸರಕು ಬೋಗಿಗಳು ಕೆಲಸ ಮಾಡುತ್ತಿರುತ್ತವೆಯೆಂದು ಅಂದಾಜು ಮಾಡಲಾಗಿದೆ. ಬೆಲೆ ಏರಿಕೆಯಿಂದಾಗಿ ಬೋಗಿಗಳ ಕೊಳ್ಳುವಿಕೆಯು ಕಡಿಮೆಯಾದಲ್ಲಿ ಮೇಲೆ ತಿಳಿಸಿದ ಅಂಕಿಗಳು ಇನ್ನೂ ಹೆಚ್ಚಾಗುತ್ತವೆ. ರೈಲ್ವೆ ಅಪಘಾತ ಸಮಿತಿಯು ಶಿಫಾರಸು ಮೇರೆಗೆ ಅಪಘಾತಗಳನ್ನು ಕಡಿಮೆ ಮಾಡಲು ಮತ್ತು ಸೌಲಭ್ಯಗಳನ್ನು ಹೆಚ್ಚಿಸಲು ಎಲ್ಲಾ ಪ್ರಯತ್ನಗಳು ನಡೆಯುತ್ತಿವೆಯಾದರೂ ಹಣದ ಕೊರತೆಯಿಂದಾಗಿ ಈ ಕಾರ್ಯ ನಿಧಾನವಾಗಿ ಸಾಗಿದೆ.

ಜಪಾನ್ ಮತ್ತು ಕೆಲವು ಯೂರೋಪ್ ರಾಷ್ಟ್ರಗಳ ರೈಲು ಅಪಘಾತಗಳ ಸಂಖ್ಯೆಗೆ ಹೋಲಿಸಿದಾಗ ನಮ್ಮ ರೈಲ್ವೆ ಅಪಘಾತಗಳ ಸಂಖ್ಯೆ ಹೆಚ್ಚಾಗಿದೆಯಾದರೂ, ನಮ್ಮ ನೆರೆಯ ರಾಷ್ಟ್ರಗಳಾದ ಪಾಕಿಸ್ತಾನ, ಇಸ್ರೇಲ್, ಸಿರಿಯಾ ಮತ್ತು ದೂರದ ಕೆನಡಾ ರಾಷ್ಟ್ರಗಳಲ್ಲಿ ಕಂಡುಬರುವ ಸಂಖ್ಯೆಗಿಂತ ಗಣನೀಯವಾಗಿ ಕಡಿಮೆಯಿದೆ. ಶಿಸ್ತು ಕಾಯ್ದೆಗಳನ್ನು ಬಿಗಿಗೊಳಿಸಿ, ಸಿಬ್ಬಂದಿಯವರಿಗೆ ಸೂಕ್ತ ತರಬೇತಿಯನ್ನು ನೀಡಿ ರಕ್ಷಣೆಗಳ ಬಗ್ಗೆ ಹೆಚ್ಚಿನ ತಿಳುವಳಿಕೆ ನೀಡುವುದರಿಂದ ಪ್ರಯಾಣಿಕರಿಗೆ ಹೆಚ್ಚಿನ ರಕ್ಷಣೆ ನೀಡಲು ಸಾಧ್ಯವಾಗುತ್ತದೆ.

ರೈಲ್ವೆ ಅಪಘಾತಗಳ ವಿಚಾರಣೆಯು ರೈಲ್ವೆಯ ರಕ್ಷಣೆ ಕಮಿಷನರ್‌ಗಳಿಂದ ನಡೆಯುತ್ತವೆ. ಕೆಲವು ತೀವ್ರ ಅಪಘಾತಗಳಲ್ಲಿ ಮತ್ತು ಅಪಘಾತಕ್ಕೆ ಖಚಿತವಾದ ಕಾರಣ ತಿಳಿಯದಿದ್ದಲ್ಲಿ ಸರ್ಕಾರವು ನ್ಯಾಯಾಂಗ ತನಿಖೆಗೆ ಆದೇಶವನ್ನು ನೀಡುತ್ತದೆ.

ಸಾರ್ವಜನಿಕ ಲೆಕ್ಕ ಸಮಿತಿಯು ರೈಲ್ವೆಯ ಕಾರ್ಯನಿರ್ವಹಣೆಯನ್ನು ಟೀಕಿಸಿದೆಯಾದರೂ ಅದು ತನ್ನ ವರದಿಯಲ್ಲಿ ನಷ್ಟದ ಬಗ್ಗೆ ಚರ್ಚಿಸಿರುವುದರಿಂದ, ಈ ಸಮಿತಿಯು ರೈಲು ವ್ಯವಸ್ಥೆಯ ಕಾರ್ಯನಿರ್ವಹಣೆ ಮತ್ತು ತಾಂತ್ರಿಕತೆಯ ಬಗ್ಗೆ ಚರ್ಚಿಸಿಲ್ಲ. ತಾಂತ್ರಿಕತೆಯ ಬಗ್ಗೆ ಪರಿಶೀಲನೆ ನಡೆಸಬೇಕಾದಲ್ಲಿ ಜಪಾನಿನಲ್ಲಿರುವಂತೆಯೇ ತಾಂತ್ರಿಕ ನಿರ್ದೇಶಕರಿಂದ ಪರಿಶೋಧನೆಯನ್ನು ನಡೆಸಬೇಕಾಗುತ್ತದೆ.

1967 ರಿಂದ ಭಾರತೀಯ ರೈಲ್ವೆಯು ಶೋಚನೀಯ ಸ್ಥಿತಿಯಲ್ಲಿ ಮುಂದುವರಿದಿದೆ. ಬೆಲೆ ಏರಿಕೆಗೆ ಸಮನಾಗಿ ಪ್ರಯಾಣ ದರಗಳನ್ನು, ಸರಕು ಸಾಗಾಣಿಕೆ ದರಗಳನ್ನು ಹೆಚ್ಚಿಸದಿರುವುದು ಮತ್ತು ಸವಕಳಿಗೆ ಹಾಗೂ ರಿಪೇರಿಗೆ ಹೆಚ್ಚಿನ ಹಣವನ್ನು ಒದಗಿಸದಿರುವುದು ಈ ಪರಿಸ್ಥಿತಿಗೆ ಮುಖ್ಯ ಕಾರಣ. ರೈಲ್ವೆಯ ಕಾರ್ಮಿಕರಿಗೆ ಸರಿಯಾದ ವೇತನವನ್ನು ಕೊಡುತ್ತಿಲ್ಲವಾದ್ದರಿಂದ ರೈಲ್ವೆಯ ಕಾರ್ಯದಕ್ಷತೆಯು ಇಳಿಯುತ್ತಿದೆ. 6ನೇ ಪಂಚವಾರ್ಷಿಕ ಯೋಜನೆಯಲ್ಲಿ ರೈಲ್ವೆಯ ಅಭಿವೃದ್ಧಿಗೆ 11 ಸಾವಿರ ಕೋಟಿಗಳ ಅವಶ್ಯಕತೆ ಇದ್ದರೂ ಯೋಜನಾ ಸಮಿತಿಯು ಅರ್ಧದಷ್ಟನ್ನು ಮಾತ್ರ ಒದಗಿಸುವ ಭರವಸೆಯನ್ನು ನೀಡಿದೆ.

ರೈಲುಗಳಿಂದ ಸರ್ಕಾರಕ್ಕೆ ನಷ್ಟವಾಗುತ್ತಿದ್ದರೂ ಹರ್ಷದ ಸಂಗತಿಯೆಂದರೆ ಅವುಗಳ ಬಂಡವಾಳದ ಬೆಲೆಯು ಪುಸ್ತಕ ಬೆಲೆಗಿಂತ ನಾಲ್ಕು ಪಟ್ಟು ಹೆಚ್ಚಾಗಿದೆ.

ಸರಕು ಸಾಗಾಣಿಕೆ ಮತ್ತು ಪ್ರಯಾಣಿಕರ ಸಾಗಾಣಿಕೆಯಲ್ಲಿ ತನ್ನ ಹಿರಿಮೆಯನ್ನು

ಉಳಿಸಿಕೊಂಡಿದೆಯಾದರೂ ಇತ್ತೀಚಿನ ವರ್ಷಗಳಲ್ಲಿ ಶೇಕಡಾವಾರು ಸಾಗಾಣಿಕೆ ಇಳಿಮುಖಗೊಂಡಿದೆ.

ಭಾರತದ ರೈಲು ವ್ಯವಸ್ಥೆಯನ್ನು ಇನ್ನೂ ಜನಪ್ರಿಯಗೊಳಿಸಬೇಕಾದರೆ ಅತಿ ವೇಗದ ರೈಲುಗಳನ್ನು ಓಡಿಸುವುದು, ಅತಿ ದೂರ ಪ್ರಯಾಣದ ರೈಲುಗಳನ್ನು ಒಳಕೆಗೆ ತರುವುದು, ರೈಲ್ವೆಯ ಅಭಿವೃದ್ಧಿಗೆ ಸರಿಯಾದ ನಿಯಮಗಳನ್ನು ಜಾರಿಗೆ ತರುವುದು ಮತ್ತು ಹೆಚ್ಚು ಬಂಡವಾಳವನ್ನು ಹೂಡುವುದು ಅತ್ಯವಶ್ಯಕವಾಗಿದೆ.

ವೈಜ್ಞಾನಿಕ ಮತ್ತು ತಾಂತ್ರಿಕರಂಗಗಳಲ್ಲಿ ಅಗಾಧ ಮುನ್ನಡೆಯನ್ನು ಸಾಧಿಸಿರುವ ಆಧುನಿಕಯುಗದ ಆರ್ಥಿಕತೆಯಲ್ಲಿ ಯಂತ್ರಗಳ ಪಾತ್ರ ಮಹತ್ತ್ವದ್ದಾಗಿದ್ದು ವಿವಿಧ ವಸ್ತುಗಳ ಉತ್ಪಾದನೆ ಮತ್ತು ವಿತರಣರಂಗಕ್ಕೆ ಮೂಲಾವಶ್ಯಗಳಾದ ಯಂತ್ರಗಳು ಮತ್ತು ಯಂತ್ರೋಪಕರಣಗಳನ್ನು ತಯಾರುಮಾಡುವುದು ಬಹುಮುಖ್ಯವಾದ ಉದ್ಯಮವಾಗಿ ರೂಪುಗೊಂಡಿವೆ. ವಿಶ್ವದ ಎಲ್ಲೆಡೆಯಲ್ಲೂ ಕಂಡು ಬಂದಿರುವ ಕೈಗಾರಿಕಾ ಕ್ರಾಂತಿಯ ಪರಿಣಾಮ ಭಾರತವನ್ನು ತಲುಪುವ ಮೊದಲು ಈ ನಾಡಿನಲ್ಲಿ ಸಹ ಬಹು ಹಿಂದಿನ ಕಾಲದಿಂದಲೂ ತಿಗರಿ, ಮಗ್ಗ, ಕುಲುಮೆಗಳಂಥ ಬಹು ಸರಳವಾದ ಯಂತ್ರಗಳು ಬಳಕೆಯಲ್ಲಿದ್ದು ಅವುಗಳ ಉಪಯೋಗ ಚಿಕ್ಕ ಗೃಹ ಉದ್ಯಮಗಳಿಗೆ ಸೀಮಿತವಾಗಿತ್ತು. ಆದರೆ ಇಂದಿನ ಯಂತ್ರ ಉದ್ಯಮ ಪಾಶ್ಚಾತ್ಯ ದೇಶಗಳಲ್ಲಿ ನಡೆದ ಮತ್ತು ಕೈಗಾರಿಕಾ ಕ್ರಾಂತಿಯ ಫಲ.

[ಕರ್ನಾಟಕ–ಕನ್ನಡ ವಿಷಯ ವಿಶ್ವಕೋಶ, ಪುಟ ೧೨೦೬]

ಎಂ. ವಿ. ಶ್ರೀನಿವಾಸಗೌಡ

ನಮಗೆ ಎಂತಹ ತಂತ್ರಜ್ಞಾನ ಬೇಕು ?
ಅಥವಾ
ತಂತ್ರಜ್ಞಾನದ ಆಯ್ಕೆ

ಆಧುನಿಕ ಆರ್ಥಿಕ ಜಗತ್ತು ತಂತ್ರಜ್ಞಾನದ ಕೂಸು ಎಂದರೆ ಅತಿಶಯೋಕ್ತಿಯಲ್ಲ. ಶಿಲಾಯುಗದಾದಿಯಿಂದ ಮಾನವನು ಜೀವನದ ಸುಖಸೌಕರ್ಯಗಳಿಗಾಗಿ ನೈಸರ್ಗಿಕ ಸಂಪನ್ಮೂಲಗಳನ್ನು ವಿವಿಧ ರೀತಿಯ ತಂತ್ರಜ್ಞಾನದ ನೆರವಿನಿಂದ ಉಪಯೋಗಿಸಿಕೊಂಡು ಬಂದಿದ್ದಾನೆ. ಪ್ರಾರಂಭದಲ್ಲಿ ಸರಳವಾದ ಸಾಧನೋಪಾಯಗಳು ಬಳಕೆಯಲ್ಲಿದ್ದವು. ಕಾಲಕ್ರಮೇಣ ಸುತ್ತಲ ವಸ್ತು ಪ್ರಪಂಚದ ಬಗ್ಗೆ ಮಾನವನ ಪರಿಜ್ಞಾನ ಅಭಿವೃದ್ಧಿಯಾಗುತ್ತ ಹೋದಂತೆ ತಂತ್ರಜ್ಞಾನವೂ ಸಹ ಪರಿಷ್ಕೃತವಾಗುತ್ತ ಮತ್ತು ಜಟಿಲವಾಗುತ್ತ ಬಂದಿದೆ.

ಮನುಷ್ಯ ತನ್ನ ಬದುಕಿನ ಭೌತಿಕ ಅವಶ್ಯಕತೆಗಳನ್ನು ಪೂರೈಸಲು ನಿರ್ಮಿಸಿಕೊಂಡಿರುವ ಸಮಸ್ತ ಸಾಧನೋಪಾಯಗಳ ಮೊತ್ತವೇ ತಂತ್ರಜ್ಞಾನ. ವಿಜ್ಞಾನ ಮತ್ತು ತಂತ್ರಜ್ಞಾನ ಅರ್ಥಾತ್ science ಮತ್ತು technology ಇವುಗಳಲ್ಲಿರುವ ವ್ಯತ್ಯಾಸ ಗಮನಾರ್ಹ. ವಸ್ತುಸ್ಥಿತಿಯ ಕ್ರಮಬದ್ಧ ಪರಿಜ್ಞಾನವೇ ವಿಜ್ಞಾನ. ಈ ಪರಿಜ್ಞಾನವನ್ನು ವಸ್ತು ಸಾಮಗ್ರಿಗಳ ಉತ್ಪಾದನೆ, ಸಂಸ್ಕರಣ ಮತ್ತು ವಿತರಣೆ ಕಾರ್ಯಗಳಲ್ಲಿ ಪ್ರಯೋಗಿಸುವುದೇ ತಂತ್ರ ಜ್ಞಾನ. ವಸ್ತುಸ್ಥಿತಿ ಕುರಿತ ವೈಜ್ಞಾನಿಕ ತತ್ವಗಳು ಮತ್ತು ಸೂತ್ರಗಳು ಯಾವ ದೇಶದಲ್ಲೇ ಆಗಲಿ ಏಕಮಾತ್ರ. ಆದರೆ ತಂತ್ರಜ್ಞಾನ ಹಾಗಲ್ಲ ಔದ್ಯೋಗಿಕ ಜೀವನದಲ್ಲಿ ವೈಜ್ಞಾನಿಕ ತತ್ವಗಳ ಮತ್ತು ಸೂತ್ರಗಳ ಪ್ರಯೋಗ ಹಲವಾರು ಬಗೆಯ ತಂತ್ರ ಜ್ಞಾನದ ಅಥವಾ ಯಂತ್ರಕಲೆಯ ರೂಪಗಳನ್ನು ತಳೆಯಬಹುದು.

ಅಂದರೆ ಯಾವುದೇ ವಸ್ತುವಿನ ಉತ್ಪಾದನೆಯಲ್ಲಿ ಒಂದು ನಿರ್ದಿಷ್ಟ ತಂತ್ರಜ್ಞಾನವನ್ನೇ ಉಪಯೋಗಿಸಬೇಕೆಂದಿಲ್ಲ. ಹಲವಾರು ಬಗೆಯ ತಂತ್ರಜ್ಞಾನಗಳನ್ನು ಬಳಸಲು ಸಾಧ್ಯವಿದೆ. ಉದಾಹರಣೆಗೆ ಬಟ್ಟೆ ತಯಾರಿಕೆಯಲ್ಲಿ ಎರಡು ಬಗೆಯ ತಂತ್ರಜ್ಞಾನಗಳನ್ನು ಉಪಯೋಗಿಸಬಹುದು. ಒಂದು ಕೈಮಗ್ಗದ ಗಿರಣಿಯದು, ಮತ್ತೊಂದು ಯಂತ್ರಚಾಲಿತ ಗಿರಣಿಯದು. ಅದೇ ರೀತಿ ಬೇಸಾಯದಲ್ಲಿ ಮನುಷ್ಯ–ಪ್ರಾಣಿಶಕ್ತಿ

ಯನ್ನು ಅಥವಾ ಯಂತ್ರ ಶಕ್ತಿಯನ್ನು ಬಳಸಬಹುದು. ಯಾವ ದೇಶದಲ್ಲಿ ಎಂತಹ ತಂತ್ರಜ್ಞಾನವನ್ನು ಬಳಸಬೇಕೆಂಬುದನ್ನು ಆಯಾ ದೇಶದಲ್ಲಿಯ ನೈಸರ್ಗಿಕ ಸಂಪನ್ಮೂಲಗಳು, ಜನಸಂಖ್ಯಾ ಪ್ರಮಾಣ, ಶಿಕ್ಷಣ ಮಟ್ಟ ಮತ್ತು ಔದ್ಯೋಗಿಕ ಬಂಡವಾಳದ ಸರಬರಾಜು, ಇವುಗಳು ನಿರ್ಧರಿಸುತ್ತವೆ. ಈ ದೃಷ್ಟಿಯಲ್ಲಿ, ತಂತ್ರಜ್ಞಾನದ ಆಯ್ಕೆ—ಅರ್ಥಾತ್ choice of technology—ಅಂದರೆ ಆಯಾ ದೇಶದ ಆರ್ಥಿಕ ಮತ್ತು ಸಾಮಾಜಿಕ ಪರಿಸ್ಥಿತಿಗಳಿಗೆ ಸಮುಚಿತವಾದ ತಂತ್ರಜ್ಞಾನವನ್ನು ಮಾತ್ರ ಆರಿಸಿಕೊಳ್ಳುವುದು ಅವಶ್ಯಕ. ಅಸಮುಚಿತ ತಂತ್ರಜ್ಞಾನದ ಬಳಕೆಯಿಂದಾಗುವ ಹಾನಿ ಅಪಾರ.

ಇಪ್ಪತ್ತನೆಯ ಶತಮಾನದಲ್ಲಿ, ವಿಶೇಷವಾಗಿ ಇತ್ತೀಚಿನ ಕೆಲವು ದಶಕಗಳಲ್ಲಿ ತಂತ್ರಜ್ಞಾನ ತೀವ್ರಗತಿಯಲ್ಲಿ ಮಾರ್ಪಾಡಾಗುತ್ತಿದೆ. ಆಧುನಿಕ ತಂತ್ರಜ್ಞಾನದ ಪ್ರಮುಖ ಲಕ್ಷಣಗಳೆಂದರೆ, ದುಡಿಮೆಯನ್ನು ಹಗುರಗೊಳಿಸಲು ಸ್ವಯಂಚಾಲಿತ ಯಂತ್ರಗಳನ್ನು ಬಳಸುವುದು ಮತ್ತು ಈ ಯಂತ್ರಗಳಿಗೆ ಅಜೈವಿಕ ಮೂಲಗಳಿಂದ ಒದಗುವ ಇಂಧನ ಶಕ್ತಿಯನ್ನು ಬಳಸುವುದು. ಇವುಗಳ ಪರಿಣಾಮವಾಗಿ ಪ್ರಚಲಿತ ಮಾನವ ನಾಗರೀಕತೆಯಲ್ಲಿ ಕೆಲವೊಂದು ಪ್ರವೃತ್ತಿ ವೇಗೋತ್ಕರ್ಷಿತವಾಗಿ ಬೆಳೆಯುತ್ತಿವೆ. ಇವುಗಳ ಪೈಕಿ ಗಮನಾರ್ಹವಾದುವುವೆಂದರೆ; ಲೋಹಗಳು, ಕಲ್ಲಿದ್ದಲು, ಪೆಟ್ರೋಲಿಯಂ ಮುಂತಾದ ಖನಿಜ ಮೂಲ ಪದಾರ್ಥಗಳ ಕ್ಷಿಪ್ರ ವ್ಯಯ, ಮಾನವ ವಸತಿಯ ನಗರೀಕರಣ ಮತ್ತು ನಿರುದ್ಯೋಗ. ಯಂತ್ರಸ್ಥಾವರಗಳ ತೀವ್ರ ಅಭಿವೃದ್ಧಿ ಮತ್ತು ನಗರೀಕರಣ—ಈ ಎರಡು ಪ್ರವೃತ್ತಿಗಳ ಫಲ ಮಾನವ ಪರಿಸರದ ಮಾಲಿನ್ಯ. ನಗರಗಳಲ್ಲಿ ಹೆಚ್ಚುತ್ತಿರುವ ಜನಸಂದಣಿ, ಕಾರ್ಖಾನೆಗಳು ಮತ್ತು ವಾಹನಗಳು ದಹಿಸುವ ಇಂಧನ—ಇವುಗಳಿಂದಾಗಿ ವಾಯುಮಂಡಲವೂ ಜಲಮೂಲವೂ ಅನಪೇಕ್ಷಣೀಯ ರಾಸಾಯನಿಕಗಳಿಂದ ಮಲಿನವಾಗುತ್ತಿವೆ. ಈಚೆಗೆ ಶಕ್ತಿ ಉತ್ಪಾದನೆಗೆ ಬಳಸುತ್ತಿರುವ ಇನ್ನೊಂದು ಸಾಧನವಾದ ಪರಮಾಣು ರಿಯಾಕ್ಟರುಗಳಾದರೋ ವಿಕಿರಣ ಪಟುತ್ವಯುತ ಹಾನಿಕರ ಪದಾರ್ಥಗಳನ್ನೇ ಉತ್ಪತ್ತಿ ಮಾಡಿ ನಮ್ಮ ಪರಿಸರವನ್ನು ಕಲುಷಿತಗೊಳಿಸುತ್ತವೆ.

ಜಗತ್ತಿನಲ್ಲಿ ಈಗ ನಡೆಯುತ್ತಿರುವ ವೈಜ್ಞಾನಿಕ ಮತ್ತು ತಂತ್ರಜ್ಞಾನ ಸಂಶೋಧನೆಯ ಶೇಕಡಾ 94 ಭಾಗ ಅಭಿವೃದ್ಧಿ ಹೊಂದಿದ ಪಾಶ್ಚಿಮಾತ್ಯ ದೇಶಗಳಲ್ಲಿ ಕೇಂದ್ರೀಕೃತವಾಗಿದೆ. ಈ ದೇಶಗಳಲ್ಲಿ ನಡೆಯುವ ಸಂಶೋಧನೆಯ ಮುಖ್ಯ ಉದ್ದೇಶ ಉತ್ಪಾದನಾ ಹಂತಗಳಲ್ಲಿ ಕೈಕೆಲಸವನ್ನು ಕಡಿಮೆ ಮಾಡುವುದು. ಕಾರ್ಮಿಕರ ಕೊರತೆಯಿರುವ, ಆದರೆ ಬಂಡವಾಳ ಹೇರಳವಾಗಿರುವ ಈ ದೇಶಗಳಲ್ಲಿ ಎಲ್ಲ ಉದ್ದಿಮೆಗಳಲ್ಲೂ ಯಂತ್ರ ಪ್ರಾಧಾನ್ಯ ತಂತ್ರಜ್ಞಾನವನ್ನು ಹೆಚ್ಚುಹೆಚ್ಚಾಗಿ ಕಂಡುಹಿಡಿದು ಬಳಸುತ್ತಿದ್ದಾರೆ. ಸ್ವಯಂಚಾಲಿತ್ವ–ಅರ್ಥಾತ್ automation–ಪ್ರತಿರಂಗದಲ್ಲೂ ಸಾಮಾನ್ಯವಾಗಿದೆ. ಅಂಕಗಣನೆಗೆ ಮತ್ತು ಲೆಕ್ಕ ಪತ್ರಗಳ ಪರಿಶೀಲನೆಗೆ ಲೆಕ್ಕಿಗರ ಬದಲು ಕಂಪ್ಯೂಟರ್

ಮುಂತಾದ ಅತಿಸೂಕ್ಷ್ಮವಾದ ಸ್ವಯಂಚಾಲಿತ ಗಣಕಗಳ ಉಪಯೋಗ ಅತಿಯಾಗುತ್ತಿದೆ.

ಇಂತಹ ತಂತ್ರಜ್ಞಾನ ಜನಸಂಖ್ಯಾಭರಿತ, ಹಿಂದುಳಿದ ದೇಶಗಳಿಗೆ ಸಮಂಜಸವಲ್ಲ ಎಂಬುದು ಸುಸ್ಪಷ್ಟ. ಆದರೂ ತಮಗೆ ಸಮಂಜಸವಾದ ತಂತ್ರಜ್ಞಾನದ ಸಂಶೋಧನೆಗೆ ವೆಚ್ಚಮಾಡಲು ಈ ದೇಶಗಳಿಗೆ ಶಕ್ತಿಯಿಲ್ಲ ; ಕೆಲವು ದೇಶಗಳಿಗೆ ಶಕ್ತಿಯಿದ್ದರೂ ಆಸಕ್ತಿಯಿಲ್ಲ. ಅಲ್ಲದೆ, ಪಾಶ್ಚಾತ್ಯರಿಂದ ಉದ್ಭವವಾದ ತಂತ್ರಜ್ಞಾನವೇ ಉತ್ಕೃಷ್ಟವಾದುದು ಎಂಬ ನಂಬಿಕೆ ಬೇರೆ. ಇವೆಲ್ಲವುಗಳ ಪರಿಣಾಮವಾಗಿ, ಭಾರತವನ್ನೊಳಗೊಂಡು ಎಲ್ಲ ಹಿಂದುಳಿದ ರಾಷ್ಟ್ರಗಳೂ ಪಾಶ್ಚಾತ್ಯ ತಂತ್ರಜ್ಞಾನಕ್ಕೆ ಶಾಶ್ವತ ಪರಾವಲಂಬಿಗಳಾಗಿವೆ. ಬಹುರಾಷ್ಟ್ರೀಯ ಉದ್ದಿಮೆ ಸಂಸ್ಥೆಗಳು, ಅಂತರರಾಷ್ಟ್ರೀಯ ಸಂಘ ಸಂಸ್ಥೆಗಳು ಮತ್ತು ಪಾಶ್ಚಿಮಾತ್ಯ ಸರಕಾರಗಳು—ಇವೆಲ್ಲವುಗಳ ಮೂಲಕ ಪಾಶ್ಚಾತ್ಯ ತಂತ್ರಜ್ಞಾನ ಹಿಂದುಳಿದ ದೇಶಗಳಿಗೆ ವರ್ಗಾವಣೆಯಾಗುತ್ತಿದೆ.

ವಿದೇಶೀ ತಂತ್ರಜ್ಞಾನ ಅನೇಕ ಜಟಿಲ ಸಾಮಾಜಿಕ, ಆರ್ಥಿಕ ಮತ್ತು ವಾತಾವರಣೀಯ ಸಮಸ್ಯೆಗಳನ್ನು ತಂದೊಡ್ಡಿದೆ. ಈ ತಂತ್ರಜ್ಞಾನ ಸಾಮಾನ್ಯವಾಗಿ ನಗರ ಪ್ರದೇಶಗಳಲ್ಲೇ ಕೇಂದ್ರೀಕೃತವಾಗಿದ್ದು, ಇದರ ನೆರವಿನಿಂದ ತಯಾರಾಗುವ ವಸ್ತು ಸಾಮಗ್ರಿಗಳೂ ಕೂಡ ಹಿಂದುಳಿದ ದೇಶದ ಬಡಜನರ ಕೈಗೆ ಎಟುಕುವಂತಿಲ್ಲ. ಈ ತಂತ್ರಜ್ಞಾನ ದೇಶದ ಆದಾಯ ಮತ್ತು ಸಂಪತ್ತು ವಿತರಣೆಯಲ್ಲಿರುವ ತಾರತಮ್ಯವನ್ನೂ ಸಹ ಉಲ್ಬಣಗೊಳಿಸಿದೆ.

ಪಾಶ್ಚಾತ್ಯ ತಂತ್ರಜ್ಞಾನವನ್ನು ಬಳಸುವ ಉದ್ದಿಮೆಗಳಲ್ಲಿ ಎಲ್ಲಾ ಉತ್ಪಾದನಾ ಹಂತಗಳೂ ಯಂತ್ರೋಪಕರಣಗಳಿಂದಲೇ ನಡೆಯುವುದರಿಂದ, ಪ್ರತಿಹಂತದಲ್ಲಿಯೂ ಕಾರ್ಮಿಕರಿಗೆ ಬೇಡಿಕೆ ಕಡಿಮೆಯಾಗುತ್ತದೆ. ಅದ್ದರಿಂದ ಉದ್ಯೋಗಾವಕಾಶಗಳು ಉತ್ಪಾದನೆ ಏರಿದಷ್ಟು ತ್ವರಿತಗತಿಯಲ್ಲಿ ಏರುತ್ತಿಲ್ಲ. ಉದಾಹರಣೆಗೆ, ಭಾರತದಲ್ಲಿ ಜನಸಂಖ್ಯೆ ಸಾಲಿಯಾನ ಪ್ರತಿಶತ 2.3 ರಂತೆ ಏರುತ್ತಿದೆ. ರಾಷ್ಟ್ರೀಯ ಕೈಗಾರಿಕಾ ಉತ್ಪಾದನೆ ಪ್ರತಿಶತ ಸುಮಾರು 4–5 ರಂತೆ ಏರುತ್ತಿದೆ. ಆದರೆ ಉದ್ಯೋಗಾವಕಾಶ ಕೇವಲ ಪ್ರತಿಶತ 2 ರಷ್ಟು ಏರುತ್ತಿದೆ. ಪರಿಣಾಮವಾಗಿ ಪ್ರತಿವರ್ಷ ನಿರುದ್ಯೋಗಿಗಳ ಸಂಖ್ಯೆ ನಿರಂತರವಾಗಿ ಏರುತ್ತಿದೆ. ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಅಂದಾಜಿನ ಪ್ರಕಾರ ಜಗತ್ತಿನಲ್ಲಿ ಇಂದು ಸುಮಾರು 280ದಶಲಕ್ಷ ಕಾರ್ಮಿಕರು ಪೂರ್ಣ ನಿರುದ್ಯೋಗ ಅಥವಾ ಅರೆನಿರುದ್ಯೋಗದಿಂದ ಬಳಲುತ್ತಿದ್ದಾರೆ. ಇವರಲ್ಲಿ ಸುಮಾರು 210 ದಶಲಕ್ಷ ಮಂದಿ ಬಡತನದ ವಿಷವರ್ತುಲದಲ್ಲಿ ಸಿಲುಕಿದ್ದಾರೆ. ಇವರೆಲ್ಲರೂ ಗ್ರಾಮೀಣ ಪ್ರದೇಶದವರು. ಭಾರತದಲ್ಲೇ ಈಗ ಸುಮಾರು 80 ದಶಲಕ್ಷ ಜನರು ನಿರುದ್ಯೋಗ ಅಥವಾ ಅರೆನಿರುದ್ಯೋಗದಿಂದ ಬಳಲುತ್ತಿದ್ದಾರೆ. ಇವರಲ್ಲಿ ಸುಮಾರು 25 ದಶಲಕ್ಷ ಜನರು ಪೂರ್ಣ ನಿರುದ್ಯೋಗಿಗಳು. ನಿರುದ್ಯೋಗ ಮತ್ತು ಬಡತನವನ್ನು ನೀಗಿಸಲು ಗ್ರಾಮಗಳಿಂದ ನಗರಗಳಿಗೆ ನಿರುದ್ಯೋಗಿಗಳ ವಲಸೆ ಅವ್ಯಾಹತವಾಗಿ ಸಾಗಿದೆ. ನಮ್ಮ ನಗರ

ಗಳಲ್ಲಿ ಇಂದು ಸಾಮಾನ್ಯವಾಗಿ ಕಂಡುಬರುವ ವಸತಿ ಅಭಾವ, ಕೊಳಚೆ, ಪರಿಸರ ಮಾಲಿನ್ಯ ಮತ್ತು ಸಾಮಾಜಿಕ ಬಿಕ್ಕಟ್ಟು – ಇವೆಲ್ಲಾ ಕಾರ್ಮಿಕರ ವಲಸೆಯ ದುಷ್ಪರಿಣಾಮಗಳು. ಈ ಎಲ್ಲ ಅನಪೇಕ್ಷಣೀಯ ಅವಸ್ಥೆಗಳಿಗೆ ಸಿಂಹಪಾಲು ಹೊಣೆ ಅಸಮುಚಿತ ಪಾಶ್ಚಾತ್ಯ ತಂತ್ರಜ್ಞಾನ.

ಹಿಂದುಳಿದ ದೇಶಗಳಲ್ಲಿ ವಿದೇಶೀ ತಂತ್ರಜ್ಞಾನದ ಅಂಧಾನುಕರಣೆ ಕೈಗಾರಿಕಾ ರಂಗಕ್ಕಷ್ಟೇ ಸೀಮಿತವಾಗಿಲ್ಲ. ಇತ್ತೀಚೆಗೆ ಕೃಷಿರಂಗಕ್ಕೂ ಅದರ ಸೋಂಕು ಬಡಿದಿದೆ. ಸುಮಾರು ಒಂದೂವರೆ ದಶಕಗಳಿಂದೀಚೆಗೆ ಕೃಷಿರಂಗದಲ್ಲಿ ಆಗಿರುವ ತಾಂತ್ರಿಕ ಸುಧಾರಣೆಗಳು ಉತ್ಪಾದನೆಯನ್ನೇನೋ ಬಹಳಷ್ಟು ಹೆಚ್ಚಿಸಿವೆ. ಶಕ್ತಿವಾನ್ ಸಸ್ಯ ತಳಿಗಳು, ನೀರಾವರಿ, ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳು–ಇವುಗಳ ವ್ಯಾಪಕ ಬಳಕೆಯಿಂದಾಗಿ ನಮ್ಮ ಕೃಷಿ ಉತ್ಪನ್ನ ಶಕ್ತಿ ಗಮನೀಯವಾಗಿ ಸುಧಾರಿಸಿದೆ.

ಆದಾಗ್ಯೂ, ಹಸಿರು ಕ್ರಾಂತಿಯ ಹೆಸರಿನಲ್ಲಿ ಉದ್ಭವಿಸಿದ ಈ ತಂತ್ರಜ್ಞಾನ ಗ್ರಾಮೀಣ ನಿರುದ್ಯೋಗವನ್ನು ಮತ್ತಷ್ಟು ಹೆಚ್ಚಿಸುತ್ತಿವೆ. ಸುಧಾರಿತ ತಳಿಗಳ ಬೇಸಾಯ ಸಾಮಾನ್ಯವಾಗಿ ಬಂಡವಾಳಶಾಹೀ ರೈತರಿಗಷ್ಟೇ ಸಾಧ್ಯವಿದೆ. ಬೇಸಾಯದಲ್ಲಿ ಕೈ ಕೆಲಸವನ್ನು ಕಡಿಮೆ ಮಾಡಲು ಮತ್ತು ಅಲ್ಪಸಮಯದಲ್ಲಿ ಬೇಸಾಯ ಕಾರ್ಯಗಳನ್ನು ಮುಗಿಸಲು ಈ ರೈತರು ಯಂತ್ರೋಪಕರಣಗಳನ್ನು ಹೆಚ್ಚುಹೆಚ್ಚಾಗಿ ಬಳಸಲು ಪ್ರಾರಂಭಿಸಿದ್ದಾರೆ. ಇದರಿಂದ ಕೃಷಿ ಕಾರ್ಮಿಕರಿಗೆ ಬೇಡಿಕೆ ಕ್ಷೀಣಿಸಿ ಗ್ರಾಮೀಣ ನಿರುದ್ಯೋಗಿಗಳ ಸಂಖ್ಯೆ ಹೆಚ್ಚುತ್ತಿದೆ. ಕೃಷಿ ಉತ್ಪಾದನೆಯನ್ನು ಹೆಚ್ಚಿಸುವ ನೆಪದಲ್ಲಿ ಸಾರ್ವಜನಿಕ ಸಂಸ್ಥೆಗಳು ಟ್ರಾಕ್ಟರ್ ಮೊದಲಾದ ಯಂತ್ರೋಪಕರಣಗಳ ಉತ್ಪಾದನೆಗೆ ಮತ್ತು ಬಳಕೆಗೆ ಕಡಿಮೆ ಬಡ್ಡಿ ದರದಲ್ಲಿ ಹಣ ಸಹಾಯ, ಸುಲಭರೀತಿಯಲ್ಲಿ ವಿದೇಶೀ ವಿನಿಮಯ ತೆರಿಗೆ ವಿನಾಯಿತಿ, ಇತ್ಯಾದಿ ಸೌಲಭ್ಯಗಳನ್ನು ಒದಗಿಸುತ್ತಿವೆ. ಇದಲ್ಲದೆ ಭಾರತದಲ್ಲಿ ಈಗ ವ್ಯಯವಾಗುತ್ತಿರುವ ಪೆಟ್ರೋಲಿಯಂ ಇಂಧನದ ಶೇಕಡಾ 20 ಭಾಗವನ್ನು ಕೃಷಿ ಯಂತ್ರೋಪಕರಣಗಳೇ ಹೀರುತ್ತಿವೆ. ಇಂಧನದ ಮುಗ್ಗಟ್ಟು ಅತಿರೇಕಕ್ಕೇರುತ್ತಿರುವ ಈ ಕಾಲದಲ್ಲಿ ಕೃಷಿ ಯಾಂತ್ರೀಕರಣ ಇದೇ ರೀತಿ ಮುಂದುವರಿದರೆ ದೇಶದ ಆರ್ಥಿಕ ಪರಿಸ್ಥಿತಿ ಮತ್ತಷ್ಟು ಹದಗೆಡುತ್ತದೆ. ಕೃಷಿ ನಿರುದ್ಯೋಗವನ್ನು ನಿವಾರಿಸುವ ಮತ್ತು ಇಂಧನವನ್ನು ಮಿತವ್ಯಯಗೊಳಿಸುವ ದೃಷ್ಟಿಯಿಂದ ಕೃಷಿ ಯಾಂತ್ರೀಕರಣವನ್ನು ತಹಬಂದಿಗೆ ತರುವುದು ಅನಿವಾರ್ಯ. ಹೆಸರಾಂತ ಅರ್ಥಶಾಸ್ತ್ರಜ್ಞ ಪ್ರೊ|| ರಾಜಕೃಷ್ಣರವರ ಅಂದಾಜಿನ ಮೇರೆಗೆ ಭಾರತದಲ್ಲಿ ಈಗ ಬಳಕೆಯಲ್ಲಿರುವ ಕೃಷಿ ಯಂತ್ರೋಪಕರಣಗಳು ಸುಮಾರು 40 ದಶಲಕ್ಷ ಅಶ್ವಶಕ್ತಿಯಷ್ಟು ಅಂದರೆ 30,000 ಮೆಗಾವ್ಯಾಟ್‌ನಷ್ಟು ಜಾನುವಾರು ಶಕ್ತಿಯನ್ನು ಸ್ಥಾನಪಲ್ಲಟ ಮಾಡಿವೆ. ಈ ರೀತಿ ಸ್ಥಾನಪಲ್ಲಟಗೊಂಡ ಜಾನುವಾರು ಶಕ್ತಿ ಸುಮಾರು ಒಂದು ದಶಲಕ್ಷ ಟ್ರಾಕ್ಟರುಗಳಿಗೆ ಸರಿಸಮಾನವಾಗಿದ್ದು ಈ ಟ್ರಾಕ್ಟರುಗಳನ್ನು ಉಪಯೋಗಿಸಲು ಅಗತ್ಯವಾದ ಇಂಧನದ ಪ್ರಮಾಣವಂತೂ

ಅಗಾಧ. ಅಷ್ಟೇ ಅಲ್ಲ, ಸ್ಥಾನಪಲ್ಲಟಗೊಂಡ ಪ್ರಾಣಿಗಳಿಂದ ಸಿಗಬಹುದಾಗಿದ್ದ ಗೊಬ್ಬರ ಮತ್ತು ಗೊಬ್ಬರ–ಅನಿಲ ಕೂಡ ಅಗಾಧ.

ಸಂಪನ್ಮೂಲಗಳ ಮಿತಿ, ನಗರೀಕರಣ, ಪರಿಸರ ಮಾಲಿನ್ಯ ಮತ್ತು ನಿರುದ್ಯೋಗ ಇವು ಯಾವ ನಿರ್ಬಂಧವೂ ಇಲ್ಲದೆ ಇದೇ ರೀತಿ ಮುಂದುವರಿದಷ್ಟೇ ಆದರೆ ಮನುಷ್ಯ ಕುಲಕ್ಕೇ ಭಾರೀ ವಿಪತ್ತು ಖಂಡಿತ ಎಂದೂ, ಆದ್ದರಿಂದ ತಂತ್ರಜ್ಞಾನ ಈಗ ತುಳಿಯುತ್ತಿರುವ ಜಾಡನ್ನು ಬಿಟ್ಟು ಬೇರೊಂದು ದಿಕ್ಕಿನಲ್ಲಿ ಸಾಗುವುದು ಅನಿವಾರ್ಯವೆಂದೂ ಅನೇಕ ತಜ್ಞರ ಅಭಿಪ್ರಾಯ. ಭವಿಷ್ಯದ ಈ ತಂತ್ರಜ್ಞಾನವನ್ನು ಕೆಲವರು ಸಮುಚಿತ ತಂತ್ರಜ್ಞಾನ (appropriate technology) ಎಂತಲೂ ಇನ್ನೂ ಕೆಲವರು ಮಧ್ಯವರ್ತಿ ತಂತ್ರಜ್ಞಾನ (intermediate technology) ಎಂತಲೂ ಕರೆಯುತ್ತಾರೆ. ಸಮುಚಿತ ಅಥವಾ ಮಧ್ಯವರ್ತಿ ತಂತ್ರಜ್ಞಾನದ ಗುರಿ ಇದುವರೆಗೂ ಇದ್ದಂತೆ ನಿಸರ್ಗದ ಮೇಲೆ ಪ್ರಭುತ್ವ ಸ್ಥಾಪಿಸಿ ಅದನ್ನು ನಮ್ಮ ಅನುಕೂಲಕ್ಕೆ ಅಳವಡಿಸಿಕೊಳ್ಳುವುದಲ್ಲ. ಬದಲು ಮಾನವ ಜೀವನ ಮತ್ತು ನಿಸರ್ಗ ವ್ಯಾಪಾರಗಳ ನಡುವೆ ಹೊಂದಾಣಿಕೆಯನ್ನು ಏರ್ಪಡಿಸುವುದು ಆಗಿರಬೇಕು.

ತಂತ್ರಜ್ಞಾನದ ಆಯ್ಕೆಯ ಸಂಬಂಧದಲ್ಲಿ ಗಾಂಧೀವಾದಿ ಡಾ|| ಷು ಮ್ಯಾಕರ್‌ರವರ ಹೇಳಿಕೆ ಔಚಿತ್ಯಪೂರ್ಣವಾದುದು. **"ಸಣ್ಣದು ಸುಂದರ"** ("Small is beautiful") ಎಂಬ ಪುಸ್ತಕದಲ್ಲಿ ತಂತ್ರಜ್ಞಾನದ ಆಯ್ಕೆಯ ಬಗ್ಗೆ ಕೂಲಂಕಷ ಚಿಂತನ ಮಾಡಿರುವ ಅವರು, "ಹಿಂದುಳಿದ ದೇಶಗಳಲ್ಲಿ ವಿದೇಶೀ ತಂತ್ರಜ್ಞಾನದ ಅಂಧಾನುಕರಣೆ ನಿಲ್ಲಬೇಕು ; ಪಾಶ್ಚಾತ್ಯ ಮಾದರಿಯ ಕೈಗಾರಿಕಾಭಿವೃದ್ಧಿಯಿಂದ ಮಾತ್ರ ಆರ್ಥಿಕ ಏಳಿಗೆ ಸಾಧ್ಯವೆಂಬ ನಂಬಿಕೆಯನ್ನು ಆಧಾರವಾಗಿಟ್ಟುಕೊಂಡಿರುವ ಈ ದೇಶಗಳ ಆರ್ಥಿಕ ನೀತಿ ಮತ್ತು ಯೋಜನೆಗಳು ಅಸಮಂಜಸ ಹಾಗೂ ಅಪಾಯಕರ" ಎಂದು ಅಭಿಪ್ರಾಯಪಟ್ಟಿದ್ದಾರೆ.

ಮಧ್ಯವರ್ತಿ ತಂತ್ರಜ್ಞಾನ ಭಾರೀ ಪ್ರಮಾಣದ ಉದ್ದಿಮೆಯ, ಬಂಡವಾಳ ಮತ್ತು ಇಂಧನ ಪ್ರಾಧಾನ್ಯ ತಂತ್ರಜ್ಞಾನವಲ್ಲ. ಅದರೆ ಪ್ರಾಚೀನ, ಅಸಮರ್ಥ ತಂತ್ರಜ್ಞಾನಕ್ಕಿಂತ ಸುಧಾರಿತವಾದದ್ದು. ಅಂದರೆ ಪಾಶ್ಚಾತ್ಯ ಮತ್ತು ಪ್ರಾಚ್ಯ ತಂತ್ರಜ್ಞಾನಗಳ ನ್ಯೂನತೆಗಳಿಗೆ ಹೊರತಾದ, ಬಂಡವಾಳ ಮತ್ತು ಇಂಧನಗಳನ್ನು ಮಿತವ್ಯಯಗೊಳಿಸುವ, ಹಾಗೂ ಕೈ ಕೆಲಸಕ್ಕೆ ಅವಕಾಶ ಹೆಚ್ಚಿಸುವಂತಹುದಕ್ಕೆ ಮಧ್ಯವರ್ತಿ ತಂತ್ರಜ್ಞಾನವೆಂದೆನ್ನಬಹುದು.

ತಂತ್ರಜ್ಞಾನದ ಆಯ್ಕೆಯಲ್ಲಿ ಕೆಲವು ಅಂಶಗಳನ್ನು ಗಮನದಲ್ಲಿಡಬೇಕು. ಆರಿಸಿಕೊಂಡ ತಂತ್ರಜ್ಞಾನ ಸಣ್ಣ ಪ್ರಮಾಣದ ಉದ್ದಿಮೆಗೆ ಅನ್ವಯಿಸಬೇಕು. ತಂತ್ರಜ್ಞಾನ ಸರಳವಾಗಿರಬೇಕು. ಅಂದರೆ ಕ್ಲಿಷ್ಟತರ ಶಿಕ್ಷಣ ಮತ್ತು ತರಬೇತಿಯಿಲ್ಲದೆ ಅದನ್ನು ಬಳಸುವಂತಹ ರೀತಿಯಲ್ಲಿರಬೇಕು. ತಂತ್ರಜ್ಞಾನದ ಅತಿಮುಖ್ಯ ಹೊಣೆ ಕೈ ಕೆಲಸಕ್ಕೆ ಆದ್ಯತೆ ನೀಡುವುದು. ಉತ್ಪಾದನೆಯ ಪ್ರತಿ ಹಂತದಲ್ಲಿಯೂ ಕಾರ್ಮಿಕರಿಗೆ ಬೇಡಿಕೆ

ಹೆಚ್ಚಬೇಕು. ಪರಿಮಿತ ಪ್ರಮಾಣದಲ್ಲಿ ದೊರಕುವ ಖನಿಜ ಸಂಪನ್ಮೂಲಗಳ ದುಂದುಗಾರಿಕೆಯನ್ನು ತಡೆಯುವುದು ಮಧ್ಯವರ್ತಿ ತಂತ್ರಜ್ಞಾನದ ಮತ್ತೊಂದು ಮುಖ್ಯ ಕರ್ತವ್ಯ. ಕಲ್ಲಿದ್ದಲು, ಪೆಟ್ರೋಲಿಯಂ ಮುಂತಾದ ಖನಿಜ ಇಂಧನಗಳ ಬಳಕೆಯನ್ನು ಆದಷ್ಟು ಕಡಿಮೆ ಮಾಡಿ ಅಪರಿಮಿತ ಶಕ್ತಿ ಆಕರಗಳಿಂದ ಸೂರ್ಯರಶ್ಮಿ, ಬೀಸುವಗಾಳಿ ಮತ್ತು ಹರಿಯುವ ನೀರು—ಇವುಗಳ ಮೊರೆ ಹೋಗಬೇಕು. ಅಂತೆಯೇ ಖನಿಜಮೂಲ ಸಾಮಗ್ರಿಗಳ ಬಳಕೆಯನ್ನು ಸಾಧ್ಯವಾದಷ್ಟು ಕಡಿಮೆಮಾಡಿ ಪುನರುತ್ಪಾದನೆಗೆ ಅವಕಾಶವಿರುವ ಸಸ್ಯಮೂಲ ಮತ್ತು ಪ್ರಾಣಿಮೂಲ ಸಾಮಗ್ರಿಗಳ ಬಳಕೆಯನ್ನು ಹೆಚ್ಚಿಸಬೇಕು. ಪರಿಣಾಮವಾಗಿ ಭಾರೀ ಪ್ರಮಾಣದ ಉತ್ಪಾದನ ಸ್ಥಾವರಗಳನ್ನು ಕೆಲವೇ ಸ್ಥಳಗಳಲ್ಲಿ ಸ್ಥಾಪಿಸುವ ಕೇಂದ್ರೀಕರಣ ನೀತಿಯನ್ನು ಕೈಬಿಟ್ಟು ಅನೇಕ ಸಣ್ಣ ಪುಟ್ಟ ಸ್ಥಾವರಗಳನ್ನು ವಿರಳವಾಗಿ ಹರಡಿ ಹಂಚುವ ವಿಕೇಂದ್ರೀಕರಣ ನೀತಿಯನ್ನು ಅನುಸರಿಸಬೇಕಾಗುವುದು. ಉತ್ಪಾದನೆಯ ವಿಧಾನಗಳನ್ನು ಸೂಕ್ತ ರೀತಿಯಲ್ಲಿ ಮಾರ್ಪಡಿಸಿ ದೂರ ದೂರದಿಂದ ತರಿಸಿಕೊಳ್ಳಬೇಕಾಗುವ ಕಚ್ಚಾವಸ್ತುಗಳನ್ನು ಅವಲಂಬಿಸದೆ ಸ್ಥಳೀಯ ಪದಾರ್ಥಗಳನ್ನು ಬಳಸಿಕೊಳ್ಳುವಂತಹ ತಂತ್ರಜ್ಞಾನ ನಮಗೆ ಬೇಕು. ಆಗ ಜನ ಹಳ್ಳಿಗಾಡಿನಿಂದ ನಗರ ಪ್ರದೇಶಗಳಿಗೆ ವಲಸೆ ಹೋಗುವ ಪ್ರವೃತ್ತಿ ನಿಂತು ಜನನಿಬಿಡತೆ ಒಂದೇ ಸಮನೆ ಹಂಚಿಕೊಳ್ಳುವಂತಾಗುವುದು.

ಭಾರತದಲ್ಲಿ ಮಧ್ಯವರ್ತಿ ತಂತ್ರಜ್ಞಾನಕ್ಕೆ ಒಂದು ಉತ್ತಮ ನಿದರ್ಶನ ಸಣ್ಣ ಪ್ರಮಾಣದ ಸಕ್ಕರೆ ಕಾರ್ಖಾನೆಗಳು. ದೇಶದಾದ್ಯಂತ ಈಗ ಸುಮಾರು 2500 ಸಣ್ಣ ಸಕ್ಕರೆ ಕಾರ್ಖಾನೆಗಳು ಕೆಲಸ ಮಾಡುತ್ತಿವೆ. ಪ್ರತಿ ಸಣ್ಣ ಕಾರ್ಖಾನೆಗೆ ತಗಲುವ ವೆಚ್ಚ ಭಾರೀ ಪ್ರಮಾಣದ ಕಾರ್ಖಾನೆಯ ವೆಚ್ಚದ 50ನೇ ಒಂದು ಭಾಗ ಮಾತ್ರ. ಅಂದರೆ ಒಂದು ದೊಡ್ಡ ಕಾರ್ಖಾನೆಯ ವೆಚ್ಚದಲ್ಲಿ 50 ಸಣ್ಣ ಕಾರ್ಖಾನೆಗಳನ್ನು ಸ್ಥಾಪಿಸಬಹುದು. ಈ 50 ಕಾರ್ಖಾನೆಗಳು ಒಂದು ದೊಡ್ಡ ಕಾರ್ಖಾನೆ ಉತ್ಪಾದಿಸುವ ಸಕ್ಕರೆಯ ಎರಡೂವರೆ ಪಟ್ಟು ಸಕ್ಕರೆಯನ್ನು ಉತ್ಪಾದಿಸುತ್ತವೆ. ಅಲ್ಲದೆ ಈ 50 ಕಾರ್ಖಾನೆಗಳು ನೀಡುವ ಉದ್ಯೋಗಾವಕಾಶ ಒಂದು ದೊಡ್ಡ ಕಾರ್ಖಾನೆ ನೀಡುವುದಕ್ಕಿಂತ 11 ರಷ್ಟು ಹೆಚ್ಚು.

ಇದೇ ರೀತಿ ಇತರ ಅನೇಕ ರಂಗಗಳಲ್ಲಿ ಮಧ್ಯವರ್ತಿ ತಂತ್ರಜ್ಞಾನವನ್ನು ಸರ್ವ ದೃಷ್ಟಿಗಳಲ್ಲೂ ಸಮರ್ಥವಾಗಿ ಉಪಯೋಗಿಸಬಹುದು. ಕೈಮಗ್ಗ, ಬಡಗಿ, ಕಮ್ಮಾರಿಕೆ, ಎಣ್ಣೆ ತಯಾರಿಕೆ, ಭತ್ತ ಕುಟ್ಟುವುದು ಮೊದಲಾದ ಗ್ರಾಮೀಣ ಗೃಹ ಕೈಗಾರಿಕೆಗಳಲ್ಲೂ ಸುಧಾರಿಸಿದ, ಉದ್ಯೋಗಾವಕಾಶವನ್ನು ದ್ವಿಗುಣಗೊಳಿಸುವ, ಮತ್ತು ಮಿತ ವೆಚ್ಚದ ತಂತ್ರಜ್ಞಾನಗಳನ್ನು ಕಂಡುಹಿಡಿಯಲಾಗಿದೆ. ಆದರೆ ಇವನ್ನು ಇನ್ನೂ ಉತ್ತಮ ರೀತಿಯಲ್ಲಿ ಸುಧಾರಿಸಲು ತಕ್ಕ ಶಿಕ್ಷಣ ಮತ್ತು ಸಂಶೋಧನೆಗಳಿಗೆ ಪ್ರಾಮುಖ್ಯತೆ ನೀಡಬೇಕು. ನಮ್ಮ ದೇಶದ ವಿಶಿಷ್ಟ ಸಮಸ್ಯೆಗಳಿಗೆ ನಮ್ಮದೇ ಆದ ಪರಿಹಾರಗಳನ್ನು ಕಂಡುಕೊಳ್ಳುವುದು ಅತ್ಯಗತ್ಯ.

ಬಾ. ರಾ. ಗೋಪಾಲ್

ಶ್ರವಣಬೆಳಗೊಳದ ನಿಶಿದಿಗಲ್ಲುಗಳು—ವೀರಗಲ್ಲುಗಳು

ಶ್ರವಣಬೆಳಗೊಳ ಖಚಿತವಾಗಿ ತಿಳಿದುಬಂದಂತೆ ಕ್ರಿ.ಶ. ೬–೭ನೆಯ ಶತಮಾನಗಳಿಂದಲೇ ಒಂದು ತೀರ್ಥವೆನಿಸಿತ್ತು. ಹತ್ತನೆಯ ಶತಮಾನದಲ್ಲಿ, ಇಂದಿಗೆ ಸಾವಿರ ವರ್ಷಗಳ ಹಿಂದೆ, ಗೊಮ್ಮಟನ ಭವ್ಯ ವಿಗ್ರಹವನ್ನು ದೊಡ್ಡಬೆಟ್ಟದಲ್ಲಿ ಸ್ಥಾಪಿಸಿದ ಮೇಲಂತೂ ಅದರ ಕೀರ್ತಿ ಎಲ್ಲೆಲ್ಲೂ ವ್ಯಾಪಿಸಿತ್ತು. ಕ್ರಿಸ್ತಪೂರ್ವ ಶತಮಾನಗಳಲ್ಲಿ ಉತ್ತರದಲ್ಲಿ ಮಗಧ ರಾಜ್ಯವನ್ನು ಮೌರ್ಯರ ಚಂದ್ರಗುಪ್ತ ಆಳುತ್ತಿದ್ದಾಗಲೇ ಶ್ರವಣಬೆಳಗೊಳ ಒಂದು ಕ್ಷೇತ್ರವೆನಿಸಿದ್ದು ಚಂದ್ರಗುಪ್ತ, ಗುರುವಾದ ಭದ್ರಬಾಹುವಿನೊಡಗೂಡಿ ಇಲ್ಲಿನ ಚಿಕ್ಕಬೆಟ್ಟಕ್ಕೆ ಬಂದು ಇಲ್ಲಿಯೇ ಬಾಳನ್ನು ಮುಡಿಪಿದ ಎಂಬುದು ಸಾಂಪ್ರದಾಯಿಕ ನಂಬುಗೆ. ಇದಕ್ಕೆ ಖಚಿತವಾದ ಆಧಾರಗಳು ಮಾತ್ರ ಇಲ್ಲ.

ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ಕೈಗೊಂಡಿರುವ ಯೋಜನೆಯನ್ವಯ ನಾನು ಸಂಪಾದಿಸಿರುವ ಎಪಿಗ್ರಾಫಿಯ ಕರ್ನಾಟಕದ ಎರಡನೆಯ ಸಂಪುಟ [1972] ಶ್ರವಣಬೆಳಗೊಳದ ಹಾಗೂ ಸಮೀಪದ ಗ್ರಾಮಗಳಲ್ಲಿರುವ ಶಾಸನಗಳಿಗೇ ಮೀಸಲಾಗಿದೆ. ಇಲ್ಲಿನ ಶಾಸನಗಳನ್ನು ಮೊದಲಬಾರಿಗೆ, 90 ವರ್ಷಗಳಿಗೂ ಹಿಂದೆ, 1889ರಲ್ಲಿ, ರೈಸ್‌ರವರು ಪ್ರಕಟಿಸಿದಾಗ ಆ ಸಂಪುಟದಲ್ಲಿ 144 ಶಾಸನಗಳಿದ್ದವು. ನಂತರ ಶ್ರೀ ಆರ್. ನರಸಿಂಹಾಚಾರ್ಯರು ಸುಮಾರು ಆರು ದಶಕಗಳ ಹಿಂದೆ, 1923ರಲ್ಲಿ ಇದರ ಎರಡನೆಯ ಆವೃತ್ತಿಯನ್ನು ಪ್ರಕಟಿಸಿದಾಗ ಇದರಲ್ಲಿ 500 ಶಾಸನಗಳಿದ್ದವು. ಇತ್ತೀಚಿನ ಮೂರನೆಯ ಆವೃತ್ತಿಯಲ್ಲಿ 573 ಶಾಸನಗಳಿವೆ. ಸಮೀಪದ ಗ್ರಾಮಗಳಲ್ಲಿನ 50 ಶಾಸನಗಳನ್ನು ಹೊರತುಪಡಿಸಿದರೆ ಶ್ರವಣಬೆಳಗೊಳದಲ್ಲಿ ಒಟ್ಟು 523 ಶಾಸನಗಳಿವೆ. ಇದರಲ್ಲಿ ಅರ್ಧಕ್ಕೂ ಹೆಚ್ಚಿನ ಸಂಖ್ಯೆಯವು, 271 ಶಾಸನಗಳು ಚಿಕ್ಕಬೆಟ್ಟದಲ್ಲೂ, 172 ಶಾಸನಗಳು ದೊಡ್ಡಬೆಟ್ಟದಲ್ಲೂ ಉಳಿದ 8 ಶಾಸನಗಳು ಶ್ರವಣಬೆಳಗೊಳ ಗ್ರಾಮದಲ್ಲೂ ಇವೆ. ಪ್ರಸ್ತುತ ಲೇಖನಕ್ಕೆ ನನ್ನ ಸಂಪಾದಕತ್ವದಲ್ಲಿ ಹೊರಬಿದ್ದಿರುವ 1972ನೆಯ ವರ್ಷದ ಆವೃತ್ತಿ ಆಧಾರವಾಗಿದೆ.

ವೀರಗಲ್ಲುಗಳು ನಮಗೆ ಇಲ್ಲಿ ಕಣ್ಣಿಗೆ ಕಾಣಿಸುವುದು ಕೇವಲ ಎರಡು ಮಾತ್ರ.

ಅವೆರಡೂ ಚಿಕ್ಕಬೆಟ್ಟದಲ್ಲಿ ಚಾಮುಂಡಿ ಬಸದಿಯ ಸಮೀಪದಲ್ಲಿವೆ.[1] ಎರಡೂ ಹತ್ತನೆಯ ಶತಮಾನದ ಶಾಸನಗಳೇ. ಒಂದು ಕಡೆ ರಕ್ಕಸಮಣಿಗೂ ಮತ್ತು ಇನ್ನೊಂದು ಕಡೆ ವಜ್ಜಿಗ ಹಾಗೂ ಕೋಣೆಯಗಂಗ ಇವರುಗಳ ನಡುವೆ ನಡೆದ ಕಾಳಗದಲ್ಲಿ ಗಂಗವಜ್ರನ ಲಿಂಕ-ಅನು-ಬೀರಿಯಗ ಎಂಬಾತ ವೀರಾವೇಶದಿಂದ ಹೋರಾಡಿ "ವಜ್ಜಿಗನ ಕೋಣೆಯ ಗಂಗನ ಮೊತ್ತಮೆಲ್ಲಮಂ ಬೆಜಡುವಿನಂ ಕಿರಿಕ್ಕಿ ಪಲರುಂ ತುಱಿಲಾಳ್ಗಳನಿಕ್ಕಿ" ಸತ್ತನೆನ್ನುತ್ತದೆ ಮೊದಲ ಶಾಸನ. ಈ ಕದನ ಗಂಗರ ಮುಮ್ಮಡಿ ರಾಚಮಲ್ಲ ಮತ್ತು ಆತನ ಸೋದರ ಇಮ್ಮಡಿ ಬೂತುಗರ ನಡುವೆ ನಡೆದುದಾಗಿರಬಹುದೆಂದು ನಾನು ತೋರಿಸಿದ್ದೇನೆ.[2] ರಣಮೂರ್ಖ ನಂಕಿಕ್ಕೆ ಸೇರಿದ ಬಾಯಿಕ ಮತ್ತು ಆತನ ಪತ್ನಿ ಜಾಬಂಬ್ಬೆಗಳ ಮಗನೂ ಘೋರನ ಮಗ, ಬುದಯ ವಿದ್ಯಾಧರನೆನಿಸಿದ ಲೋಕವಿದ್ಯಾಧರನ ಪತ್ನಿಯೂ ಆದ ಸಾವಿಯಬ್ಬೆಯೂ ಬಾಗಿಯೂರಿನಲ್ಲಿ ಸತ್ತಳೆಂಬುದನ್ನು ಈ ಶಾಸನ ತಿಳಿಸುತ್ತದೆ. ವೀರಗಲ್ಲಿನ ಒಂದು ಭಾಗ ಒಡೆದಿದ್ದು ವಿವರಗಳು ಸ್ಪಷ್ಟವಾಗಿ ತಿಳಿದುಬಂದಿಲ್ಲ. ಈಕೆ ಶ್ರಾವಕಿ ಜಿನಭಕ್ತೆಯಾಗಿದ್ದಳೆಂದು ಶಾಸನ ತಿಳಿಸುತ್ತದೆ. ಬಹುಶಃ ಇದನ್ನು ಸಹ ನಾವು ನಿಸಿದಿಗಲ್ಲೆಂದೇ ಭಾವಿಸಬಹುದೇನೋ ?

ಸಂಪ್ರಟನ ಶಾಸನಗಳನ್ನೆಲ್ಲಾ ವಿಶ್ಲೇಷಿಸಿದಾಗ, ನಿಶಿದಿಗಲ್ಲುಗಳು ಮತ್ತು ವೀರಗಲ್ಲುಗಳನ್ನು ಕುರಿತು ಕೆಲವು ಸ್ವಾರಸ್ಯಕರ ಅಂಕಿ-ಅಂಶಗಳು ಗೋಚರಿಸುತ್ತವೆ. ಶ್ರವಣಬೆಳಗೊಳದ ಶಾಸನಗಳಲ್ಲಿ ಸುಮಾರು ಐದರಲ್ಲಿ ಒಂದು ಭಾಗ ನಿಶಿದಿಗಲ್ಲುಗಳಾಗಿವೆ. 523 ಶಾಸನಗಳಲ್ಲಿ 101 ನಿಶಿದಿ ಶಾಸನಗಳು. ಚಿಕ್ಕಬೆಟ್ಟದಲ್ಲಿರುವ 271 ಶಾಸನಗಳಲ್ಲಿ 92, ದೊಡ್ಡಬೆಟ್ಟದ 172ರಲ್ಲಿ 9 ನಿಶಿದಿಗಳಾಗಿವೆ. ನಿಶಿದಿಗಳೆಲ್ಲಾ ಚಿಕ್ಕ ಬೆಟ್ಟದಲ್ಲಿ ಕೇಂದ್ರೀಕೃತವಾಗಿವೆ ಎಂಬುದು ಇದರಿಂದ ತಿಳಿದು ಬರುವ ವಿಷಯ. ಇವುಗಳನ್ನು ಕಾಲಕ್ರಮದಂತೆ ಪರಿಗಣಿಸಿದರೆ 92 ರಲ್ಲಿ 52 ಶಾಸನಗಳು ಕ್ರಿ ಶ. 6–7 ಮತ್ತು 7 ನೆಯ ಶತಮಾನಗಳಿಗೆ ಸೇರಿದವುಗಳಾಗಿವೆ. 8ನೆಯ ಶತಮಾನಕ್ಕೆ ಸೇರಿದವು 10, 12ನೆಯ ಶತಮಾನಕ್ಕೆ ಸೇರಿದವು 18, 9ನೆಯ ಶತಮಾನದ್ದು 1, 10ನೆಯ ಶತಮಾನದ್ದು 6, 11ನೆಯ ಶತಮಾನದ್ದು 2, 14ನೆಯ ಶತಮಾನದ್ದು 2, ಕಳೆದ ಶತಮಾನದ್ದು ಒಂದು. ದೊಡ್ಡಬೆಟ್ಟದಲ್ಲಿ 13, 15 ಹಾಗೂ 19ನೆಯ ಶತಮಾನಗಳ ಒಂದೊಂದು ಹಾಗೂ 14 ಮತ್ತು 17ನೆಯ ಶತಮಾನಗಳ ಮೂರು ಮೂರು ನಿಶಿದಿಗಳಿವೆ. 101 ನಿಶಿದಿಗಳಲ್ಲಿ 72 ಬಂಡೆಗಳ ಮೇಲೂ 26 ಕಂಬಗಳ ಮೇಲೂ, 3 ಮಾತ್ರ ಶಾಸನ ಕಲ್ಲುಗಳ ಮೇಲೂ ಕೆತ್ತಲ್ಪಟ್ಟಿವೆ.

ಈ ವಿವರಗಳು ಕೆಲವು ವಿಷಯಗಳನ್ನು ಖಚಿತಪಡಿಸುತ್ತವೆ. ಗೊಮ್ಮಟ ವಿಗ್ರಹವನ್ನು ಪ್ರತಿಷ್ಠಾಪಿಸುವವರೆವಿಗೂ ದೊಡ್ಡಬೆಟ್ಟಕೆ ಹೆಚ್ಚಿನ ಪ್ರಾಶಸ್ತ್ಯವಿರಲಿಲ್ಲ. ಪ್ರಾಚೀನತಮ ಶಾಸನಗಳು ನಮಗೆ ದೊರೆತಿರುವುದು ಚಿಕ್ಕಬೆಟ್ಟದಲ್ಲಷ್ಟೆ. 13ನೆಯ ಶತಮಾನದವರೆವಿಗೂ ದೊಡ್ಡಬೆಟ್ಟದಲ್ಲಿ ಯಾವುದೇ ನಿಶಿದಿ ಇರಲಿಲ್ಲ. ಚಿಕ್ಕಬೆಟ್ಟ ಕ್ರಿ.ಶ. 6ನೆಯ ಶತ

ಮಾನದಿಂದಲೂ ಖ್ಯಾತಿವೆತ್ತಿದೆ. ಜೈನ ಸನ್ಯಾಸಿಗಳು, ಹಲವೊಮ್ಮೆ ಶ್ರಾವಕ–ಶ್ರಾವಕಿಯರು ಇಲ್ಲಿಗೆ ಬಂದು ತಮ್ಮ ಬಾಳಿನ ಅಂತಿಮ ದಿನಗಳನ್ನು ಇಲ್ಲಿ ಕಳೆದರು. ಸಾಮಾನ್ಯವಾಗಿ ನಿಶಿದಿ ಶಾಸನಗಳನ್ನು ಬಿಡಿಗಲ್ಲುಗಳ ಮೇಲೆ ಚಿತ್ರಗಳ ಸಮೇತ ಕೆತ್ತಲಾಗಿರುತ್ತದೆ. ಆದರೆ ಶ್ರವಣಬೆಳಗೊಳದ ನಿಶಿದಿ ಶಾಸನಗಳಲ್ಲಿ ಸುಮಾರು ಶೇಕಡ 70ರಷ್ಟು ಬಂಡೆಗಳ ಮೇಲೂ 25ರಷ್ಟು ಕಂಬಗಳಮೇಲೂ ಕೆತ್ತಲಾಗಿವೆಯೆಂಬ ಅಂಶ ಗಮನಾರ್ಹ. ಚಿತ್ರಕ್ಕಿಂತಲೂ ದಾಖಲೆಪತ್ರಕ್ಕೇ—ಶಾಸನಕ್ಕೇ–ಹೆಚ್ಚಿನ ಪ್ರಾಶಸ್ತ್ಯ ನೀಡಲಾಗಿದೆ.

ಶ್ರವಣಬೆಳಗೊಳಕ್ಕೆ ಕಟ್ಬಪ್ಪು, ಕಟ್ಬಪ್ಪುತೀರ್ಥ ಎಂಬ ಹೆಸರಿದೆ. ಆದರೆ ಈ ಹೆಸರು ವಾಸ್ತವಿಕವಾಗಿ ಚಿಕ್ಕ ಬೆಟ್ಟಕ್ಕೆ ಅನ್ವಯಿಸಲಾದ ಹೆಸರು. ಕಟ ಎಂದರೆ ಸಮಾಧಿ ಮಾಡತಕ್ಕ ಪ್ರದೇಶ. ವಪ್ರ ಎಂದರೆ ಗುಡ್ಡ. ಅದುದರಿಂದ ಕಟವಪ್ರವೆಂದರೆ ಸಮಾಧಿ ಮರಣ ಹೊಂದಲು ಯೋಗ್ಯವಾದ ಗುಡ್ಡ ಎಂದು ಅರ್ಥವಾಗುತ್ತದೆ.[3] ಒಂದು ಶಾಸನದಲ್ಲಿ[4] ಅರಿಷ್ಟನೇಮಿಯು ತನ್ನ ಗಣವನ್ನು ತ್ಯಜಿಸಿ, ಕಟವಪ್ರಗಿರಿಯನ್ನೇರಿ(ಸಮಾರುಹ್ಯ) ಅಲ್ಲಿ ಸಿದ್ಧಿಯನ್ನು ಪಡೆದನೆಂದಿದೆ. ಚರಿತಶ್ರೀ ಎಂಬ ಮುನಿ ಕಟ್ಬಪ್ಪಿನಾಮೇಲ್ ವ್ರತಗಳನ್ನು ನೋನ್ತು ಸೌಖ್ಯಸ್ಥನಾದನೆಂದಿದೆ.[5] ಮಾಸೇನರಿಷಿಗಳ್ 'ಕಟ್ಬಪ್ಪಿನಾವೆಟ್ಟದೊಳ್' ನೋನ್ತು ಮರಣ ಹೊಂದಿದರೆನ್ನುತ್ತದೆ ಮತ್ತೊಂದು ಶಾಸನ[6]. ಇವೆಲ್ಲವೂ 7ನೆಯ ಶತಮಾನದ ಶಾಸನಗಳು. ಸಂಪುಟದ ಮೊದಲನೆಯ ಶಾಸನ ಭದ್ರಬಾಹು, ಚಂದ್ರಗುಪ್ತರಿಗೆ ಸಂಬಂಧಿಸಿದ ಪ್ರಖ್ಯಾತವಾದ ಶಾಸನ. ಈ ಶಾಸನ ಅನೇಕ ರೀತಿಗಳಿಂದ ಮುಖ್ಯವಾದ ಶಾಸನ. ಇತರ ಚರ್ಚೆಗಳೇನಿದ್ದರೂ ಆ ಶಾಸನದ ಕಾಲವಾದ 6–7ನೆಯ ಶತಮಾನದ ವೇಳೆಗಾಗಲೇ ಭದ್ರಬಾಹುಮುನಿಯಿಂದ ಪವಿತ್ರಗೊಳಿಸಲ್ಪಟ್ಟ ಈ ಚಿಕ್ಕ ಬೆಟ್ಟ ಜೈನರ ಸಮಾಧಿ ಮರಣಕ್ಕೆ ಅರ್ಹವಾದ ಸ್ಥಳವೆಂದು, ಪವಿತ್ರತೀರ್ಥವೆಂದು ಹೆಸರನ್ನು ಪಡೆದಿತ್ತು ಎಂಬುದು ಸ್ಪಷ್ಟವಾಗುತ್ತದೆ. ಈ ಊರಿಗೆ ಬೆಳ್ಗೊಳ ಎಂಬ ಹೆಸರೂ ಅದೇ ಕಾಲದಲ್ಲಿ ಪ್ರಚಾರದಲ್ಲಿತ್ತು. ಬೆಳ್ಗೊಳ ಎಂದರೆ ಬೆಳ್‌ಕೊಳ, ಬಿಳಿದಾದ ಕೊಳ, ಗ್ರಾಮದ ನಡುವೆ–ಎರಡು ಬೆಟ್ಟಗಳಿಗೂ ನಡುವೆ ಇರುವ ಕೊಳ ಎಂದು ಆರ್. ನರಸಿಂಹಾಚಾರ್ಯರು ಅರ್ಥೈಸಿರುವುದು ಸರಿಯಾಗಿದೆ. ಆ ಕೊಳದಿಂದ ಊರಿಗೆ ಆ ಹೆಸರು ಬಂದಿರಬಹುದು. 7ನೆಯ ಶತಮಾನದ್ದೇ ಆದ ಇನ್ನೊಂದು ನಿಶಿದಿ ಶಾಸನದಲ್ಲಿ ಭದ್ರಬಾಹು ಮತ್ತು ಚಂದ್ರಗುಪ್ತರಿರ್ವರನ್ನೂ ಹೆಸರಿಸಲಾಗಿದ್ದು, ಅವರಿಂದ 'ಭದ್ರಮಾಗಿದ ಧರ್ಮ' ನಂತರ ಸ್ವಲ್ಪ ಅಳುಕಿದಾಗ ಶಾನ್ತಿಸೇನಮುನಿ ಅದನ್ನು ಪುನಃ ಬಲಯುತವನ್ನಾಗಿ ಮಾಡಿದನೆಂದು ಅದರಲ್ಲಿ[7] ಹೇಳಿದೆ. ಈ ವೇಳೆಗಾಗಲೇ ಭದ್ರಬಾಹು ಚಂದ್ರಗುಪ್ತರು ಚಿಕ್ಕಬೆಟ್ಟದ ಗುಹೆಯಲ್ಲಿ ವಾಸಿಸಿದ್ದು ಅಲ್ಲಿಯೇ ತಮ್ಮ ದೇಹವನ್ನು ತೊರೆದರೆಂಬ ನಂಬಿಕೆ ದೃಢವಾಗಿ ಬೇರೂರಿತ್ತು ಎಂಬುದು ವ್ಯಕ್ತವಾಗುತ್ತದೆ.

ಈ ನಿಶಿದಿ ಶಾಸನಗಳಲ್ಲಿ ಬಹುಮಟ್ಟಿನವು ಜೈನಯತಿಗಳವು. ಇವರು ಕೇವಲ ಇಲ್ಲಿನವರೇ, ಕರ್ನಾಟಕದವರೇ ಆಗಿರದೆ ದೂರದ ಪ್ರದೇಶಗಳಿಂದಲೂ ಇಲ್ಲಿಗೆ ತಮ್ಮ ಬಾಳಿನ ಕೊನೆಯ ದಿನಗಳನ್ನು ಸನ್ಯಸನ, ಸಲ್ಲೇಖನ, ಸಮಾಧಿಮರಣ ಮುಂತಾದ

ವಿಧಾನಗಳಿಂದ ಮುಮುಕ್ಷುಗಳಾಗಿರಲು ಬಂದವರು. ಕನಕಸೇನಮುನಿಯು ಗುಣ್ಡದರ್ಮೋಳಿ ಸಮಾಧಿಮರಣ ಹೊಂದಿದರೆ ಅತನ ಜೊತೆಯಲ್ಲಿದ್ದ ಬಲದೇವಮುನಿಯು ಬೆಟ್ಟದ ಒಳಭಾಗವನ್ನು ಬಿಟ್ಟು ಬಂದು ಆರಾಧನ ವಿಧಿಯಿಂದ ಸಿದ್ಧ ಲೋಕಕ್ಕೆ ಸಂದನೆನ್ನುತ್ತದೆ ಒಂದು ಶಾಸನ.[8] ಮಹಾ ಆಚಾರ್ಯನಾದ ಅರಿಷ್ಟನೇಮಿಯು ತನ್ನ ಅನೇಕ ಶಿಷ್ಯರೊಡಗೂಡಿ ದಕ್ಷಿಣಕ್ಕೆ ಬಂದು ಇಲ್ಲಿ ಚಾತುರ್ವರ್ಣಗಳಿಂದ ಕೂಡಿದ ತನ್ನ ಗಣವನ್ನು ತ್ಯಜಿಸಿ ಆಹಾರಾದಿಗಳನ್ನು ಬಿಟ್ಟು ಇಲ್ಲಿನ ಕಟವಪ್ರದಲ್ಲಿ ಶುಕ್ಲಧ್ಯಾನದಿಂದ ದೇಹವನ್ನು ತ್ಯಜಿಸಿದನೆಂದು 13ನೆಯ ಶಾಸನದಲ್ಲಿ ಹೇಳಿದೆ. ಈ ಶಾಸನದ ಕಾಲ 7ನೆಯ ಶತಮಾನ, ಭಾಷೆ ಸಂಸ್ಕೃತ. ಒಂದು ಶತಮಾನದ ನಂತರ ಇದೇ ಕಾಳ್ಬಪ್ಪು ತೀರ್ಥದಲ್ಲಿ ಅರಿಷ್ಟನೇಮಿದೇವನೆಂಬ ಯತಿ ಮುಕ್ತಿಯನ್ನೈದಿದ ? ಈತ ಬೇರೊಬ್ಬ ಯತಿ. ಇದೇ ಹೆಸರಿನ – ಅರಿಟ್ಟನೇಮಿ – ಇನ್ನೊಬ್ಬ ಯತಿ 9 ನೆಯ ಶತಮಾನದ ಇನ್ನೊಂದು ಶಾಸನದಲ್ಲಿ[10] ಕಾಣಿಸಿಕೊಂಡಿದ್ದಾನೆ. ಈತನು ಯಾವುದನ್ನೋ ಮಾಡಿಸಿದನೆಂದು ಆ ಕನ್ನಡ ಶಾಸನ ಸೂಚಿಸುತ್ತದೆ. ಅದರ ವಿವರಗಳು ಲಭಿಸಿಲ್ಲ. ಥಟ್ಟಗಪಾಸದ ತಮ್ಮಡಿ (ಗುರು)ಗಳಾದ ಶ್ರೀಭಟ್ಟಾರಕರ ಶಿಷ್ಯನಾದ ಕಿತ್ತೆಱಿ [?], ಅಬ್ಬ್ರಜ ತಮ್ಮಡಿಗಳ (ಶಿಷ್ಯ ?) ಮಹಾವೀರ, ಚರಿತಶ್ರೀ, ಜಂಬುನಾಯ್ಗಿರ್, ದ್ವಾದಶವಿಧದ ತಪೋನುಷ್ಠಾನಗೆಯ್ದು ಗುಣದೇವ, ಸಂಘಗಳು ಹೇಳಿದ ಸಿದ್ಧಸಮಯವನ್ನು ತಪ್ಪದೆ ಪಾಲಿಸಿ ವ್ರತಗೆಯ್ದು ಮಾಸೇನ, ಪೆಟ್ಟಿಡೆಗುರವಡಿಗಳ ಶಿಷ್ಯನಾದ ಸಿಜ್ಞಣನ್ದಿ, ಮುಂತಾದವರು[11] 7–8ನೆಯ ಶತಮಾನಗಳಲ್ಲಿ ಕಾಣಿಸಿಕೊಂಡ, ಇಲ್ಲಿ ಅಸುನೀಗಿದ, ಜೈನ ಯತಿಗಳು.

ಉಳ್ಳಿಕ್ಕಲ್‌ಗುರವಡಿಗಳ್, ಪೆರುಮಾಳುಗುರವಡಿಗಳ್ ಎಂಬಂತಹ ಹೆಸರುಗಳನ್ನು[12] ನೋಡಿದಾಗ ಇವರು ತಮಿಳುನಾಡಿನಿಂದ ಬಂದವರೆನಿಸುತ್ತದೆ. ತಮಿಳುನಾಡಿನ ಮದುರೈ ಒಂದು ಪ್ರಾಚೀನ ಜೈನ ಕೇಂದ್ರ. ಈ ದಕ್ಷಿಣ ಭಾಗದ ಮದುರೈಯಿಂದ ಬಂದ ಅಕ್ಷಯಕೀರ್ತಿ ಎಂಬ ಯತಿ[13] ಹಾವಿನಿಂದ ಕಡಿಯಲ್ಪಟ್ಟು ಮಹಾಪರ್ವತದಲ್ಲಿ ನೋನ್ತು ಸುರಲೋಕಕ್ಕೆ ಸಂದ. ಅದೆಯಱಿನಾಡ ಚಿತ್ತೂರ ಮೋನಿಗುರವಡಿಗಳ ಶಿಷ್ಯೆಯಾದ ನಾಗಮತಿಗನ್ತಿ ಇಲ್ಲಿ ಮೂರು ತಿಂಗಳುಗಳು ವ್ರತಮಾಡಿ ದೇಹವನ್ನು ತ್ಯಜಿಸಿದಳು.[14] ಈ ಚಿತ್ತೂರು ಆಂಧ್ರಪ್ರದೇಶದ ಅದೇ ಹೆಸರಿನ ಜಿಲ್ಲೆಯ ಮುಖ್ಯ ಸ್ಥಳವಾದ ಚಿತ್ತೂರು. ಅಂದು ಇದು ಅದೆಯಱಿನಾಡಿನಲ್ಲಿತ್ತು ಈ ನಾಡು ಈಗಿನ ತಮಿಳುನಾಡಿನ ಉತ್ತರ ಆರ್ಕಾಟ್ ಜಿಲ್ಲೆಯನ್ನೂ ಒಳಗೊಂಡಿತ್ತೆಂಬುದು ಇವರ ಶಾಸನಗಳಿಂದ ತಿಳಿದಿದೆ. ಕೊಟ್ಟರದ ಗುಣಸೇನಗುರವರು ಅಗಳಿಯ ಮೋನಿಗುರುಗಳ ಶಿಷ್ಯರು.[15] ನೆಡುಬೊರೆಯ ಪಾನದ ಭಟಾರರು, ವೇಗೂರಿನ ಸರ್ವಜ್ಞಭಟ್ಟಾರಕರು, ಕಿತ್ತೂರಿನ ವೆಳ್ಮಾದದ ಧರ್ಮಸೇನರ ಶಿಷ್ಯರಾದ ಬಲದೇವರು, ಮಾಲನೂರ ಪಟ್ಟನಿಗುರವಡಿಗಳು, ಇನುಙ್ಗೂರಿನ ಮೆಳ್ಳಗವಾಸ ಗುರುಗಳು, ತಱಿಕಾಡಿನ ತ್ರಿಕಾಲವೀರಗುರವಡಿಗಳ ಶಿಷ್ಯರು, ಚಿಕುರಾರವಿ [ರಾಯಚೂರು ಜಿಲ್ಲೆಯ ಚಿಕಲಪರವಿ ?] ಗುರವರ

ಶಿಷ್ಯರಾದ ಸರ್ವನಂದಿ ಎನಿಸಿದ ವಾಸುದೇವರು ಇಂತೀಹಲರು ಬೇರೆ ಕಡೆಗಳಿಂದ ಚಿಕ್ಕ ಬೆಟ್ಟಕ್ಕೆ ಬಂದು ತಮ್ಮ ಜೀವವನ್ನು ಇಲ್ಲಿ ಮುಡಿಪಿದವರು.16

7–8ನೆಯ ಶತಮಾನಗಳಿಗೆ ಸೇರಿದ ಈ ನಿಶಿದಿ ಶಾಸನಗಳ ಇನ್ನೊಂದು ಗಮನಾರ್ಹ ಅಂಶವೆಂದರೆ ಇವರಲ್ಲಿ ಕಂಡುಬಿಂದಿರುವ ಕನ್ನಡ ಭಾಷೆಯ ಸೊಗಸು. ಗ್ರಂಥ ಸಾಹಿತ್ಯ ಇನ್ನೂ ಅಷ್ಟಾಗಿ ಮೂಡಿ ಬಾರದಿದ್ದ ಕಾಲದಲ್ಲಿ ಶಾಸನ ಸಾಹಿತ್ಯವೆಂದು ಕರೆಯಲಾದ ಸಾಹಿತ್ಯಕ ಮೌಲ್ಯಗಳನ್ನುಳ್ಳ ಶಾಸನಗಳನ್ನು ನಾವು ಇಲ್ಲಿ ಕಾಣುತ್ತೇವೆ. ಕನ್ನಡ ಸಾಹಿತ್ಯ ಚರಿತ್ರೆಯ ಆರಂಭ ಕಾಲವನ್ನು ಜೈನ ಸಾಹಿತ್ಯ ಕಾಲವೆಂದೂ ಕರೆಯಲಾಗಿದೆ. ಆರಂಭದ ಕೃತಿಗಳೆಲ್ಲ ಬಹುಪಾಲು ಜೈನ ಕವಿಗಳಿಂದ ವಿರಚಿತವಾಗಿ ಜೈನ ಧರ್ಮಕ್ಕೆ ಸಂಬಂಧಿಸಿದವುಗಳು. ಉತ್ತರದಿಂದ ಇಲ್ಲಿಗೆ ಬಂದಜೈನ ಯತಿಗಳು ವಿಶೇಷವಾಗಿ ತಮ್ಮ ಧರ್ಮಪ್ರಸಾರ ಕಾರ್ಯದಲ್ಲಿ ನಿರತರಾಗಿದ್ದವರು. ಆದಕ್ಕೆಂದೇ ಸ್ಥಳೀಯ ಭಾಷೆಯನ್ನು ಕಲಿತು ತನ್ಮೂಲಕ ಜನರ ಮನವನ್ನಾಕರ್ಷಿಸತೊಡಗಿದ್ದರು. ಎಂತಲೇ ಅವರ ನೆನಪಿಗಾಗಿ ಬರೆಯಲ್ಪಟ್ಟ ಶಾಸನಗಳಲ್ಲೂ ಉತ್ತಮವಾದ ಕನ್ನಡ ಭಾಷೆಯ ಪ್ರಯೋಗವಿದೆ. ಈ ಶಾಸನ ಪಾಠಗಳು ಬಹಳ ಹೆಸರುವಾಸಿಯಾಗಿವೆ.

ದುರಿತವೆಂಬ ವೃಕ್ಷವನ್ನು ಬುಡಸಹಿತ ಕಿತ್ತು, ಅಜ್ಞಾನವೆಂಬ ಶೈಲೇಂದ್ರವನ್ನು ಪೊಡೆದು, ಮಿಥ್ಯಾತತ್ವವೆಂಬ ಸ್ಥಿರವಾಗಿದ್ದ ನೃಪನನ್ನು ತರಿದು, ಐದು ಗಂಧೇಭಗಳನ್ನು [ಪಂಚೇಂದ್ರಿಯಗಳನ್ನು] ಮೆಟ್ಟಿ, ಮುನಿಗೆ ಸಮನಾದ ವ್ರತಗಳನ್ನು ನೋನ್ತು, ಸುರವಿದ್ಯಾ ವಲ್ಲಭನೆನಿಸಿದ ಚರಿತ್ರಶ್ರೀ ಎಂಬ ಮುನಿ ಕಟ್ಬಪ್ಪುವಿನಲ್ಲಿ ಜೀವ ತೊರೆದನು ಎನ್ನುವ ಈ ಶಾಸನದ17 ಸಾಹಿತ್ಯ ಹೇಗಿದೆ ನೋಡಿ :

ದುರಿತಾಭೂದ್ವೃಷಮಾನ್ಕಿೞ್ತುಲಜ್ಞ ಪೊದೆದಜ್ಞಾನಶ್ಶೈಲೇನ್ದ್ರಮಾನೋೞ್
ದುರಮಿಥ್ಯಾತ್ವಪ್ರಮೂಢಸ್ಥಿರತರನೃಪನಾನ್ಕೆಟ್ಟಿ ಗನ್ಧೇಭಮಯ್ದಾನ್ ।
ಸುರವಿದ್ಯಾವಲ್ಲಭೇನ್ದ್ರಸ್ಸುರವರಮುನಿಭಿಸ್ತುತ್ಯ ಕಟ್ಬಪ್ಪಿನಾಮೇಲ್
ಚರಿತಶ್ರೀನಾಮಧೇಯಪ್ರಭು ಮುನಿನ್ಪ್ರತಗಳ್ನೋನ್ತು ಸೌಖ್ಯಸ್ಥನಾಯ್ದಾನ್॥

ಸರ್ವಜ್ಞಭಟ್ಟಾರಕನೆಂಬ ಮುನಿಯನ್ನು ಶಾಸನದಲ್ಲಿ 'ರಾಗದ್ವೇಷ ತಮೋಮಲವ್ಯಪಗತರ್, ಶುದ್ಧಾತ್ಮಸಂಯೋದ್ಧಕರ್' ಎಂದು ವರ್ಣಿಸಿದೆ.18

ಕಳನ್ತೂರಿನ ಒಬ್ಬ ಗೊರವ ಕಟವಪ್ರದಲ್ಲಿ 108 ವರ್ಷಗಳ ಕಾಲ ತಪಸ್ಸನ್ನಾಚರಿಸಿ ಸಿದ್ಧಿಯನ್ನು ಪಡೆದ ವಿಷಯವನ್ನು ಒಬ್ಬ ಬಾಲೆಯನ್ನುದ್ದೇಶಿಸಿ ಹೇಳಿರುವ ಶಾಸನವಲ್ಲಿ ಆ ತಪಸ್ವಿನ ತೀವ್ರತೆಯನ್ನು ವರ್ಣಿಸಿದೆ. ಅದು ಕತ್ತಿಯ ಹರಿತವಾದ ಅಲಗಿನ ಮೇಲೆ ಬೆಂಕಿಯ ಮೇಲೆ ಅಥವಾ ಸರ್ಪದ ಮಹಾ ದಂತಾಗ್ರದ ಮೇಲೆ ನಡೆದಂತೆ ಎನ್ನುತ್ತದೆ ಶಾಸನ.19

ಬಾಳಾ ಮೇಲ್ಮಿಭಿಮೇಲೆ ಸರ್ಪದ ಮಹಾದನ್ತಾಗ್ರದುಳ್ಪಲ್ಲವೊಲ್
ಸಾಲಾಮ್ನಾಲತಪೋಗ್ರದಿನ್ತು ನಡಪೊಂ ನೂಱೆಣ್ಟು ಸಂವತ್ಸರಂ ।
ಕೇಳೊಯ್ಪಿನ್ಕಟವಪ್ರ ಶೈಲಮುಡಱ್ದೇನಮ್ಮಾ ಕಳನ್ತೂರನಂ

ಬಾಳ್ಪೆಗೆಗ್ರೈರವಂ ಸಮಾಧಿನೆಱೆಪೊನ್ ನೋನ್ತೆಯ್ದಿ ಪೊಸ್ದಿರ್ದಿಯಾನ್ ॥

ಇನ್ನೊಂದು ಸುಪ್ರಸಿದ್ಧವಾದ ಶಾಸನದಲ್ಲಿ[20] ರೂಪಲೀಲೆ, ಧನ, ವೈಭವ ಎಲ್ಲ ಅಶಾಶ್ವತ, ಸುರಚಾಪ [ಕಾಮನಬಿಲ್ಲು] ದಂತೆ, ಮಿಂಚಿನಂತೆ, ಮಂಜಿನಂತೆ ಕ್ಷಣಿಕ, ಯಾರಿಗೂ ನಿಲ್ಲವು ಎಂಬುದು ಪರಮಾರ್ಥ. ಈ ಪ್ರಪಂಚದಲ್ಲಿರುವುವರಲ್ಲಿ ಅರ್ಥವಿಲ್ಲ ಎಂದು ಭಾವಿಸಿದ ನಂದಿಸೇನ ಮುನಿ ಸನ್ಯಾಸದಿಂದ ದೇವಲೋಕಕ್ಕೆ ಹೋದನಂತೆ :

ಸುರಚಾಪಂಬೋಲೆ ವಿದ್ಯುಲ್ಲತೆಗಳ ತೆಱವೊಲ್ಮಂಜುವೊಲ್ ತೋಱಿಬೇಗಂ
ಪಿರಿಗುಂ ಶ್ರೀರೂಪಲೀಲಾಧನವಿಭವಮಹಾರಾಶಿಗಳ್ನಿಲ್ಲವಾರ್ಗಂ ।
ಪರಮಾರ್ಥಂ ಮೆಚ್ಚೆ ನಾನೀ ಧರಣಿಯುಳಿರವಾನೆನ್ದು ಸನ್ಯಾಸನಂಗೆ
ಯ್ದುರುಸತ್ವನ್ನಂದಿಸೇನಪ್ರವರ ಮುನಿವರಂ ದೇವಲೋಕಕ್ಕೆ ಸನ್ದಾನ್ ॥

ಇವುಗಳೆಲ್ಲ ಬಂಡೆಗಳ ಮೇಲೆ ಕೆತ್ತಲಾದ ಶಾಸನಗಳು. ಹತ್ತನೆಯ ಶತಮಾನದಲ್ಲಿ ಮೊದಲ ಬಾರಿಗೆ ಕಂಬದ ಮೇಲೆ ಕೆತ್ತಲಾದ ಶಾಸನಗಳನ್ನು ಕಾಣುತ್ತೇವೆ. ಚಿಕ್ಕಬೆಟ್ಟದಲ್ಲಿ ಇಂತಹ ನಾಲ್ಕು ಶಾಸನಗಳಲ್ಲಿ ಒಂದು ಗಂಗರ ಇಮ್ಮಡಿ ಮಾರಸಿಂಹನ ನೆನಪಿನಲ್ಲಿ ಸ್ಥಾಪಿಸಲಾದ ಕಂಬ. ಇದನ್ನು ಕೂಗೆ ಬ್ರಹ್ಮದೇವನ ಕಂಬ ಎಂದು ಕರೆಯಲಾಗಿದೆ. ರಾಷ್ಟ್ರಕೂಟ ಮುಮ್ಮಡಿ ಕೃಷ್ಣನ ನಿಷ್ಠಾವಂತ ಸಾಮಂತನೂ ಸಂಬಂಧಿಯೂ ಆಗಿದ್ದ. ನಾಲ್ವಡಿ ಇಂದ್ರನನ್ನು ಪಟ್ಟಕ್ಕೆ ತರಲು, ರಾಷ್ಟ್ರಕೂಟ ರಾಜ್ಯವನ್ನುಳಿಸಲು ಬಹುವಾಗಿ ಶ್ರಮಿಸಿದ್ದ. ಈತ ಬಂಕಾಪುರದಲ್ಲಿ ಆ ಯುವರಾಜನ ಪಟ್ಟಾಭಿಷೇಕವನ್ನು ಮಾಡಿದ. ಈತನ ಶ್ರಮ ಸಾರ್ಥಕವಾಗಲಿಲ್ಲವೆಂಬ ಮಾತು ಬೇರೆ. ಈತ ಅಜಿತಸೇನ ಭಟ್ಟಾರಕನ ಶಿಷ್ಯ. ಬಂಕಾಪುರದಲ್ಲಿ ಗುರುವಿನ ಶ್ರೀಪಾದ ಸನ್ನಿಧಿಯಲ್ಲಿ ಮೂರು ದಿನಗಳ ಆರಾಧನಾ ವಿಧಿಯನ್ನು ನೋನ್ತು ಸಮಾಧಿಯನ್ನು ಸಾಧಿಸಿದನೆನ್ನುತ್ತದೆ ಶಾಸನ.[21] ಸಂಸ್ಕೃತ ಹಾಗೂ ಕನ್ನಡ ಭಾಷೆಗಳಲ್ಲಿನ ಈ ಶಾಸನದಲ್ಲಿ ಅನೇಕ ಐತಿಹಾಸಿಕ ವಿವರಗಳಿವೆ. ನೊಳಂಬಕುಲಾನ್ತಕನೆನಿಸಿದ ಈತ 'ಪಲವೆಡೆಗಳೊಳಂ ಬಸದಿಗಳುಂ ಮಾನಸ್ತಂಭಗಳಂ' ಮಾಡಿಸಿದನು.

ಗಂಧವಾರಣ ಬಸದಿಯ ಎದುರಿನ ಕಂಬದಲ್ಲಿ ರಾಷ್ಟ್ರಕೂಟ ನಾಲ್ವಡಿ ಇಂದ್ರನ ಪ್ರಶಸ್ತಿಯನ್ನೊಳಗೊಂಡ ನಿಶಿದಿ ಶಾಸನವಿದೆ. ಈತ ರಾಜ ಚೂಡಾಮಣಿಯ ಅಳಿಯ. ಕಂದುಕಾಗಮದಲ್ಲಿ ನಿಷ್ಣಾತ. ಈತನನ್ನು ಪ್ರಶಂಸಿರುವ ಈ ಶಾಸನದಲ್ಲಿ ಕೆಲವು ಗಮನಾರ್ಹವಾದ ಮಾತುಗಳಿವೆ. ಇಂದಿನ ರಾಜತನೂಜರ ಸ್ವಭಾವ ಸುಳ್ಳು ಹೇಳುವುದು, ಕೊಟ್ಟು ಹಿಂತೆಗೆದುಕೊಳ್ಳುವುದು, ಪರನಾರಿಯರಿಗಾಶಿಸುವುದು, ಕೂತು ವಂಚಿಸುವುದು, ಇತ್ಯಾದಿ. ಇಂತಹವರೊಂದಿಗೆ ಇಂದ್ರರಾಜನನ್ನು ಹೇಗೆ ಹೋಲಿಸಲಿ ಎಂದು ಯೋಚಿಸಿದ್ದಾನೆ ಶಾಸನ ಕವಿ.[22] ಇಂತಹ ರಾಜಕುಮಾರ ಕ್ರಿ. ಶ. 982ನೆಯ ವರ್ಷದ ಮಾರ್ಚ್ 5 ರಂದು ದಿವಂಗತನಾದನೆಂದು ಶಾಸನ ತಿಳಿಸುತ್ತದೆ. ತೇರಿನ ಬಸದಿಯ ಪಶ್ಚಿಮದಲ್ಲಿರುವ ಕಂಬದ ಮೇಲಿರುವುದೂ ಒಂದು ನಿಶಿದಿ ಶಾಸನವೇ. ಮೇಲೆ ಹೇಳಿದ ಇಂದ್ರರಾಜನ ಮಾವನೇ ಆಗಿರಬಹುದಾದ ರಾಜ ಚೂಡಾಮಣಿಯ ಸೇವಕನಾದ

ಸಿಟ್ಟಿಗನು ತನ್ನ 'ಗುರುಚರಣಸ್ಮೂಳವೊಳ್' ಇಂದ್ರಲೋಕಕ್ಕೆಯ್ದಿದನೆನ್ನುತ್ತದೆ ಶಾಸನ.23 ಆದರೆ ಶಾಸನದಲ್ಲಿನ ಈತನ ಶೌರ್ಯದ ವರ್ಣನೆಯನ್ನು ಗಮನಿಸಿದರೆ ಇದನ್ನು ವೀರಗಲ್ಲೆಂದೇ ಭಾವಿಸಬಹುದೇನೋ ?

ಹನ್ನೆರಡನೆಯ ಶತಮಾನದ ನಿಶಿದಿ ಶಾಸನಗಳೆಲ್ಲಾ ಕಂಬಗಳ ಮೇಲೆ ಕೆತ್ತಿರುವಂತಹವೇ. ಅವೆಲ್ಲವೂ ಚಿಕ್ಕಬೆಟ್ಟದಲ್ಲಿಯೇ ಇವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಪ್ರಸ್ತಾಪಿಸಬಹುದು. ಹೊಯ್ಸಳ ವಿಷ್ಣುವರ್ಧನನ ದಂಡನಾಯಕ ಗಂಗರಾಜ. ತನ್ನ ಸ್ವಾಮಿಯ ಪರವಾಗಿ ಹಲವಾರು ಕದನಗಳಲ್ಲಿ ಹೋರಾಡಿದ ನಿಷ್ಠಾವಂತನೀತ. ಈತನ ಮನೆತನಕ್ಕೆ ಸಂಬಂಧಿಸಿದ ಕೆಲವು ಶಾಸನಗಳು ಇಲ್ಲಿವೆ. ಈತನ ತಂದೆ ಏಚರಾಜ, ತಾಯಿ ಪೋಚಿಕಬ್ಬೆ, ಪತ್ನಿಯರು ನಾಗಲದೇವಿ ಮತ್ತು ಲಕ್ಷ್ಮಿ. ಲಕ್ಷ್ಮಿಯನ್ನು ಶಾಸನದಲ್ಲಿ ದಂಡನಾಯಕಿತಿ ಲಕ್ಕಲೆ ಎಂದು ಕರೆದಿದೆ. ಈಕೆ ತನ್ನ ಅತ್ತೆ ಪೋಚಿಕಬ್ಬೆ ಯೊಡಗೂಡಿ ಜಿನಾಲಯವೊಂದನ್ನು ಕಟ್ಟಿಸಿದಳು.24 ಇದು ಶಾಸನ ಬಸದಿಯಾಗಿರಬಹುದು. ಈಕೆಯ ಸೋದರನಾದ ಬೂಚಿರಾಜನು ಕ್ರಿ. ಶ. ೧೧೧೫ರಲ್ಲಿ ದಿವಂಗತನಾದಾಗ ಅವನ ನೆನಪಿನಲ್ಲಿ ಈಕೆ ನಿಶಿದಿಯೊಂದನ್ನು ನಿಲ್ಲಿಸಿದಳು.25 ಈಕೆಯ ಗುರುವಾದ ಪ್ರಭಾಚಂದ್ರಸಿದ್ಧಾಂತದೇವರ ಗುರುವಾದ ಮೇಘಚಂದ್ರತ್ರೈವಿದ್ಯದೇವರ ನೆನಪಿನಲ್ಲಿ ಕ್ರಿ. ಶ. ೧೧೧೫ರಲ್ಲಿ, ಈಕೆಯ ಹಿರಿಯ ಸೋದರಿಯೂ ಚಾಮುಂಡನೆಂಬ ರಾಜಶ್ರೇಷ್ಠಿಯ ಪತ್ನಿಯೂ ಆದ ದೇಮವ್ವೆ ಸನ್ಯಾಸನ ವಿಧಿಯಿಂದ ಜೀವವನ್ನು ತೊರೆದಾಗ ಆಕೆಯ ನೆನಪಿನಲ್ಲಿಯೂ ಲಕ್ಷ್ಮಿಯು ನಿಶಿದಿಗಳನ್ನು ಸ್ಥಾಪಿಸಿದಳು.26 ಒಂದಾದ ಬಳಿಕ ಒಂದರಂತೆ ಈಕೆಯ ಮನೆತನದಲ್ಲಿನ ವಿಯೋಗಗಳ ಬಳಿಕ ಈಕೆಯೇ ಕ್ರಿ. ಶ. 1121 ಅಥವಾ 1122ರಲ್ಲಿ ಸಮಾಧಿವೆರಸಿ ದೇವಲೋಕಕ್ಕೆ ಸಂದಳೆನ್ನುತ್ತದೆ ಇನ್ನೊಂದು ಸ್ತಂಭಶಾಸನ.27

ಮೇಘಚಂದ್ರತ್ರೈವಿದ್ಯದೇವನು ಮೂಲಸಂಘ, ದೇಸಿಯ(ದೇಶಿಗ)ಗಣ, ಪುಸ್ತಕಗಚ್ಛಕ್ಕೆ ಸೇರಿದ ಯತಿ. ಹಿಂದೆ ಗೊಲ್ಲದೇಶದಲ್ಲಿ ನೂತ್ನಚಂದಿಲವೆಂಬ ವಂಶಕ್ಕೆ ಸೇರಿದ ಅರಸ ಗೊಲ್ಲಾಚಾರ್ಯನೆಂಬ ಹೆಸರಿನಿಂದ ಸನ್ಯಾಸಿಯಾದ. ಆ ಯತಿಯ ವಂಶಕ್ಕೆ ಸೇರಿದವ ಮೇಘಚಂದ್ರ. ಈ ಗುರುಶಿಷ್ಯರ ಪರಂಪರೆ ಹೀಗಿದೆ :

ಗೊಲ್ಲಾಚಾರ್ಯ	|
|	ಸಕಲೇಂದು
ತ್ರೈಕಾಲ್ಯಯೋಗಿ	|
|	ಮೇಘಚಂದ್ರ
ಅಭಯನಂದಿ	|
|	ಪ್ರಭಾಚಂದ್ರ

ಪ್ರಭಾಚಂದ್ರನು ದಂಡನಾಯಕಿತಿ ಲಕ್ಕಲೆಯ ಗುರು.

ವಿಷ್ಣುವರ್ಧನನ ಅರಸಿಯಾದ ಶಾಂತಲೆ ಸವತಿಗಂಧವಾರಣ ಬಸದಿಯನ್ನು ಕಟ್ಟಿಸಿ

ಅದಕ್ಕೆ ಕಲ್ಕಣಿನಾಡಿನಲ್ಲಿರುವ ಮೊಟ್ಟೆನವಿಲೆ ಎಂಬ ಗ್ರಾಮವನ್ನು ದತ್ತಿಯಾಗಿ ಬಿಟ್ಟ ಈ ಪ್ರಭಾಚಂದ್ರ ಸಿದ್ಧಾಂತ ದೇವರಿಗೆ ಧಾರೆಯೆರೆದಳು [28] ಈಕೆ 1131ರಲ್ಲಿ ಮಾರ್ಚ್ 5 ರಂದು ಶಿವಗಂಗೆಯಲ್ಲಿ ಸ್ವರ್ಗಸ್ಥಳಾದಳು. ಇನ್ನು ತನಗೆ ಇರಲಾಗದೆಂದು ಆಕೆಯ ತಾಯಿ ಮಾಚಿಕಬ್ಬೆ "ಜಿನುಗೊಳಮೊಳು ದುರ್ಧರ ಸನ್ಯಾಸನದಿಂ ತಾನುಂ ತೊರೆದಳು".[29] ಹದಿನಾಲ್ಕು ವರ್ಷಗಳ ನಂತರ, ಕ್ರಿ.ಶ. 1145ರ ಸೆಪ್ಟೆಂಬರ್ 27 ರಂದು ಇವರೆಲ್ಲರ ಗುರುವಾಗಿದ್ದ ಪ್ರಭಾಚಂದ್ರಸಿದ್ಧಾಂತದೇವರು ಸಹ ಸ್ವರ್ಗಸ್ಥರಾದರು.

ಈ ಕೆಲವು ಹನ್ನೆರಡನೆಯ ಶತಮಾನದ ನಿಡಿವಿ ಶಾಸನಗಳಿಂದ ತಿಳಿದುಬರುವ ಸ್ವಾರಸ್ಯಕರ ಅಂಶಗಳು.

ಅಡಿ ಟಿಪ್ಪಣಿಗಳು

1 ಎ.ಕ, ಸಂಪುಟ II (ಕ.ಅ.ಸಂಸ್ಥೆ ಪ್ರಕಟಣೆ, 1972, ಸಂಪಾದಕ : ಜಿ. ರಾ. ಗೋಪಾಲ್), ಶಾಸನ ಸಂಖ್ಯೆ 171 ಮತ್ತು 172. ಮುಂದಿನ ಅಡಿ ಟಿಪ್ಪಣಿಗಳಲ್ಲಿ ಸೂಚಿಸಲಾದ ಶಾಸನ ಸಂಖ್ಯೆಗಳೆಲ್ಲ ಈ ಆವೃತ್ತಿಯಲ್ಲಿ ಸೇರಿದವುಗಳೇ.

2 ಪೀಠಿಕೆ, ಪುಟ li–lii

3 ನೋಡಿ, ಪೀಠಿಕೆ, ಪುಟ xl–xli

4 ಸಂಖ್ಯೆ 13

5 " 14

6 " 30

7 " 34

8 " 2

9 " 16

10 " 67

11 " 22, 17, 14, 21, 26, 30, 35

12 " 7, 9

13 " 24

14 " 23

15 " 10

16 " 11, 15, 27, 28, 31, 36, 39

17 " 14

18 " 15

19	ಸಂಖ್ಯೆ	25
20	"	98
21	"	63
22	"	167
23	"	165
24	"	82
25	"	155
26	"	156, 158
27	"	157
28	"	162
29	"	176
30	"	173

ಕಟ್ಬಪ್ಪುವಿನ ಪ್ರಾಚೀನ ರೂಪ ಕಪ್‌ಬೆಳ್ಪು ಎಂದಿದ್ದು ಆ ಮಾತಿಗೆ ಬೆಳ್ಳಿನ ನೀರು ಎಂಬುದೊಂದು ಅಭಿಪ್ರಾಯ. ಆದರೆ ಈ ಹೆಸರು ಅಲ್ಲಿನ ಭೌಗೋಳಿಕ ಪರಿಸ್ಥಿತಿಯನ್ನು ವಿವರಿಸುತ್ತದೆ. ಕಟ್ಬಪ್ಪು ಎಂಬುದು ಕಪ್ಪಾದ ಗುಡ್ಡ, ಕರಿಗುಡ್ಡ ಎಂಬ ಅಲ್ಲಿನ ಪ್ರಾಕೃತಿಕ ಸನ್ನಿವೇಶವನ್ನು ವಿವರಿಸುವಂತಹ ಹೆಸರಾಗಿರಬೇಕು. ಸಂಸ್ಕೃತದಲ್ಲಿ ವಪ್ರ ಎಂದರೆ ಗಿರಿ ಎಂದರ್ಥವಾಗುತ್ತದೆ. ಕಟ ಎಂದರೆ ಸಮಾಧಿ ಗುಹೆ, ಸಮಾಧಿ ಮಾಡತಕ್ಕ ಪ್ರದೇಶ. ಇಲ್ಲಿನ 7 ನೆಯ ಶತಮಾನದ 54 ಶಾಸನಗಳಲ್ಲಿ 41 ಸಲ್ಲೇಖನ, ಸನ್ಯಸನ ವಿಧಿಗಳಿಂದ ದೇಹ ಮುಡಿಪಿದ ಸಂಗತಿಯನ್ನು ನಿರೂಪಿಸುವ ಜೈನ ಶಾಸನಗಳು. ಇವನ್ನು ಗಮನಿಸಿ ಕಟವಪ್ರ ಎಂದರೆ ಸಮಾಧಿ ಮರಣ ಹೊಂದಲು ಯೋಗ್ಯವಾದ ಗುಡ್ಡ ಎಂದು ಅರ್ಥೈಸಬಹುದು. ಕಟವಪ್ರದ (ಸಮಾಧಿಗುಡ್ಡ) ಕನ್ನಡ ರೂಪಾಂತರ ಕಟ್ವಪ್ಪು ಆಗಿರಬೇಕು.

[ಕರ್ನಾಟಕ-ಕನ್ನಡ ವಿಷಯ ವಿಶ್ವಕೋಶ, ಪುಟ ೧೪೬೨]

ಪುಸ್ತಕಲೋಕ

ಭಾರತೀಯ ಸಾಮಾಜಿಕ ಅಧ್ಯಯನ : ಲೇ : ಪ್ರೊ. ಬಿ. ಆರ್. ಕೃಷ್ಣ ; ಪ್ರ : ವಿದ್ಯಾನಿಧಿ ಪ್ರಕಾಶನ ಗದಗ. ಪ್ರಥಮ ಮುದ್ರಣ. ೧೯೮೧ (ಅಕ್ಟೋಬರ್),
ಪು. ೨೪೬. ಬೆಲೆ. ೧೩.೫೦

ಕರ್ನಾಟಕದ ಅರುಣೋದಯದ ಬೆಳ್ಳಿ ಹಬ್ಬದ ಸುಸಂದರ್ಭದಲ್ಲಿ ಸಮಾಜಶಾಸ್ತ್ರಕ್ಕೆ ಸಂಬಂಧಿಸಿದಂತೆ ಕನ್ನಡ ಪುಸ್ತಕಗಳ ಕೊರತೆಯನ್ನು ಅನುಭವಿ ಪ್ರಾಧ್ಯಾಪಕ ಪ್ರೊ. ಬಿ.ಆರ್. ಕೃಷ್ಣರವರು ತಮ್ಮ ಕೃತಿಗಳ ಮೂಲಕ ನಿವಾರಿಸಿರುವುದು ಒಂದು ಹೆಮ್ಮೆಯ ವಿಷಯ.

ಪ್ರಸ್ತುತ ಪುಸ್ತಕವು ಹತ್ತು ಅಧ್ಯಾಯಗಳನ್ನೊಳಗೊಂಡಿದೆ. ಮೊದಲ ಅಧ್ಯಾಯದಲ್ಲಿ ಹಿಂದೂ ಸಮಾಜದ ಮೂಲಭೂತ ತತ್ವಗಳ ಸಮರ್ಪಕ ವಿವರಣೆ ಇದೆ. ಹಿಂದೂ ಪದೋತ್ಪತ್ತಿಯ ಜೊತೆಗೆ ಹಿಂದೂ ಎಂದರೆ ಯಾರು ? ಎಂಬ ಕಲ್ಪನೆಯ ವಿವರ ಬೇಕಿತ್ತು. ಪುಟ ೮ ರಲ್ಲಿ ದಿವಂಗತ ಡಿ.ವಿ.ಜಿ.ಯವರ ಅಭಿಪ್ರಾಯವನ್ನು ಸಂದರ್ಭೋಚಿತವಾಗಿ ಬಳಸಲಾಗಿದೆ. ವರ್ಣಾಶ್ರಮ ವ್ಯವಸ್ಥೆಯಲ್ಲಿ ದ್ವಿಜರ ಕರ್ತವ್ಯ ಹಾಗೂ ಲಕ್ಷಣಗಳನ್ನು ಗುರುತಿಸುವಾಗ ಅವರುಗಳು ಪಠಿಸುವ ಮಂತ್ರಗಳ ಪ್ರಾರಂಭವನ್ನು ತಿಳಿಸಿರುವುದು ಸೂಕ್ತವಾದರೂ ಜೊತೆಗೆ ಯಜ್ಞಯಾಗಾದಿಗಳ ಕಾರ್ಯಗಳಲ್ಲಿ ಉಪಯೋಗಿಸುವ ಮೂರು ರೀತಿಯ ಮರದ ದಂಡವನ್ನು [ಮುತ್ತುಗ, ಆಲ, ಅಶ್ವತ್ಥ] ಮತ್ತು ಯಜ್ಞ ಮಾಡುವ ನಡವಳಿಕೆಗಳ ನಿರ್ದಿಷ್ಟ ಕಾಲಗಳನ್ನು [ವಸಂತ, ಗ್ರೀಷ್ಮ, ಶರದೃತು] ಹೆಸರಿಸುವುದು ಅಗತ್ಯವಿದೆ.

ಎರಡನೇ ಅಧ್ಯಾಯ ಭಾರತೀಯ ಸಾಮಾಜಿಕ ಸಂಸ್ಥೆಗಳ ವಿವಾಹ ಮತ್ತು ಕುಟುಂಬದ ದೀರ್ಘ ವಿಷಯಗಳನ್ನೊಳಗೊಂಡಿದೆ. ಕೆಲವು ಸ್ವಾರಸ್ಯಕರ ವಿವಾಹ ಪದ್ಧತಿಗಳ ಸೀಮಿತ ಹೊಸ ಪರಿಚಯವಿದೆ. ಪುಟ ೫೯ ರಲ್ಲಿ The child marriages ಮುಂದೆ Restraint Act ಎಂಬುದಕ್ಕೆ ಬದಲಾಗಿ Reglraint act ಎಂದು ಇದ್ದು ಇದು ಮುದ್ರಣ ದೋಷವಾಗಿದೆ. ಉಳಿದೆಡೆ ಸರಿ ಇದೆ. ವರದಕ್ಷಿಣೆಯಲ್ಲಿ ಅದರ ನಿರ್ಣಾಯಕ ಅಂಶಗಳನ್ನು ಚರ್ಚಿಸುವುದು ಅತ್ಯಗತ್ಯ. ವಿವಾಹ ವಿಚ್ಛೇದನದಲ್ಲೂ ೧೯೫೫ರ ಹಿಂದೂ ವಿವಾಹ ಕಾಯಿದೆಯ ಜೊತೆಗೆ ಮುಂಚಿನ ೧೯೪೭ರ ಬೊಂಬಾಯಿ ಸರ್ಕಾರದ ವಿಚ್ಛೇದನ ಕಾನೂನು ಮತ್ತು ೧೯೪೯ ರ ಮದ್ರಾಸ್ ಸರ್ಕಾರದ ವಿಚ್ಛೇದನ ಕಾನೂನುಗಳನ್ನು ಗಣನೆಗೆ ತೆಗೆದುಕೊಳ್ಳಬಹುದು. ಅಂತರಜಾತಿ ವಿವಾಹ ಮಾರ್ಮಿಕವಾಗಿ ಚೊಕ್ಕವಾಗಿದೆ.

ಮೂರನೇ ಅಧ್ಯಾಯದಲ್ಲಿ ಹಿಂದೂ ಅವಿಭಕ್ತ ಕುಟುಂಬದ ಪ್ರಸ್ತಾವನೆ ಇದೆ. ಅವಿಭಕ್ತ ಕುಟುಂಬದಲ್ಲಿ ವಿಶ್ವಾಸವಿರುವವರಿಗೆ ನೆರವಾಗಲು ಅದರ ಅನುಕೂಲತೆಗಳ ಬಗ್ಗೆ ಹೆಚ್ಚು ವಿವರಣೆ ನೀಡುವುದು ಶಕ್ಯವಿದೆ.

ಸ್ತ್ರೀಯರ ಸ್ಥಾನಮಾನಗಳನ್ನು ಕುರಿತಂತೆ ನಾಲ್ಕನೇ ಅಧ್ಯಾಯವಿದ್ದು ಸ್ಪಷ್ಟ ಪೀಠಿಕೆ ಇದೆ. ಪ್ರಾಚೀನ ಕಾಲದಲ್ಲಿ ಪೂರ್ವವೇದಗಳ (ಋಗ್ವೇದ) ಕಾಲದ ಸ್ತ್ರೀಯ ಸ್ಥಾನಮಾನಗಳನ್ನು ವಿವರಿಸುವುದು ಅತ್ಯಗತ್ಯ. ಹಾಗೆಯೇ ವೇದಗಳ ಕಾಲದಲ್ಲಿ ಜೈನ ಹಾಗೂ ಬೌದ್ಧ ಧರ್ಮಗಳಲ್ಲಿನ ಸ್ತ್ರೀ ಸ್ಥಾನಮಾನಗಳ ವಿವರಣೆ ಅವಶ್ಯಕ. ನಾರಿಯರ ಕತ್ತಲೆ ಯುಗವೆನಿಸಿದ ಮಧ್ಯಯುಗವನ್ನು ಇನ್ನೂ ಸಾಕಷ್ಟು ಪುರಾವೆಗಳಿಂದ ಕಗ್ಗತ್ತಲೆ ಯಂತೆ ಸಮರ್ಥಿಸಬೇಕು. ಇತರ ಸಾಮಾಜಿಕ ಶಾಸನಗಳ ಜೊತೆಗೆ ೧೯೫೬ರ ಹಿಂದೂ ಅಲ್ಪವಯಿ ಮತ್ತು ಸಂರಕ್ಷಣಾ ಕಾನೂನನ್ನು [The Hindu Minority and Guardianship Act] ಸ್ತ್ರೀಯರಿಗೆ ಸಂವಿಧಾನಬದ್ಧವಾಗಿ ನೀಡಲ್ಪಟ್ಟಿರುವುದೆಂದು ಗಮನಿಸಬೇಕು.

ಐದನೇ ಅಧ್ಯಾಯ ಜಾತಿ ವ್ಯವಸ್ಥೆಯ ಸ್ಪಷ್ಟ ಹಾಗೂ ದೀರ್ಘ ಕಲ್ಪನೆಯಾಗಿದೆ. ಆದರೂ ಕೂಡ ಸಂವಿಧಾನವು ಅಸ್ಪೃಶ್ಯರಿಗೆ ಒದಗಿಸಿರುವ ಕೆಲವು ವಿಶೇಷ ಸವಲತ್ತುಗಳ ಪರಿಚಯದ ಆಗತ್ಯವಿದೆ.

ಸಾಮಾಜಿಕ ಚಲನೆಯ ಅಂಶಗಳ ಸಮುಚ್ಚಯದೊಂದಿಗೆ ಆರನೇ ಅಧ್ಯಾಯ ಕೂಡಿದೆ. ಸಾಮಾಜಿಕ ಚಲನೆಯ ಅರ್ಥದೊಂದಿಗೆ ಸಾರೋಕಿನ್ನನ ಸಾಮಾಜಿಕ ಬಗೆಗಳ ವಿವರಣೆಯು ಅಗತ್ಯವಿತ್ತು. ಸಂಸ್ಕೃತೀಕರಣದಲ್ಲಿ ಬ್ರಿಟಿಷ್ ಭಾರತದ ಬಗ್ಗೆ ಉದಾಹರಣೆ ನೀಡುವಾಗ ಮೈಸೂರಿನ ಒಕ್ಕಲಿಗರು ಶೂದ್ರತ್ವವನ್ನು ಕಳೆದುಕೊಳ್ಳಲು ಸತತ ಪ್ರಯತ್ನ ಪಡುತ್ತಿದ್ದಾರೆಂದು ತಿಳಿಸಿದ್ದಾರೆ (ಪುಟ ೪೭). ಮುಖ್ಯವಾಗಿ ಒಕ್ಕಲಿಗರಿಗಿಂತ ಲಿಂಗಾಯಿತರು ಹಾಗೂ ವಿಶ್ವಕರ್ಮರು ಶೂದ್ರತ್ವವನ್ನು ಕಳೆದುಕೊಳ್ಳಲು ಹೆಚ್ಚು ಪ್ರಯತ್ನಪಟ್ಟು ಸಾಮಾಜಿಕ ಶ್ರೇಣಿಯಲ್ಲಿ ಬ್ರಾಹ್ಮಣರ ಸ್ಥಾನಮಾನಗಳನ್ನು ಪಡೆಯಲು ವಿಫಲವಾಗಿರುವುದು ಗಮನಾರ್ಹವಾದುದು.

ಏಳನೇ ಅಧ್ಯಾಯ ಭಾರತೀಯ ಸಮಾಜದ ಮೇಲೆ ಇಸ್ಲಾಂ ಹಾಗೂ ಪಾಶ್ಚಾತ್ಯ ಸಂಸ್ಕೃತಿಗಳ ಪ್ರಭಾವದ ನಿರೂಪಣೆಯಾಗಿದ್ದು, ಆಹಾರ ಪದಾರ್ಥಗಳ ಮೇಲಿನ ಪ್ರಭಾವವನ್ನು ತಿಳಿಸುವುದರ ಹೊರತಾಗಿದೆ. ಆದರೆ ಸ್ವಾತಂತ್ರ್ಯದ ನಂತರ ಭಾರತೀಯ ಇಸ್ಲಾಂ ಸಂಸ್ಕೃತಿಯ ಪ್ರಭಾವದ ಶೀರ್ಷಿಕೆ ಸೃಜನಾತ್ಮಕವಾಗಿದ್ದು ಸ್ತುತ್ಯಾರ್ಹವಾಗಿದೆ.

ಮುಂದಿನ ಮೂರು ಅಧ್ಯಾಯಗಳು ಭಾರತೀಯ ಗ್ರಾಮೀಣ ರಚನೆ, ಸಮಸ್ಯೆಗಳು ಹಾಗೂ ಅವುಗಳ ಪುನರ್ನಿರ್ಮಾಣವನ್ನೊಳಗೊಂಡಿವೆ. ಲೇಖಕರು ಈ ಅಧ್ಯಾಯಗಳನ್ನು ತಮ್ಮ ಮತ್ತೊಂದು ಕೃತಿಯಾದ "ಭಾರತದಲ್ಲಿ ಗ್ರಾಮೀಣ ಅಭಿವೃದ್ಧಿ"ಯಿಂದ ತೆಗೆದುಕೊಂಡಿರುವುದರಿಂದ ಮುಂದೆ ಚರ್ಚಿಸಬಹುದಾಗಿದೆ ಹಾಗೂ ಗ್ರಾಮೀಣ ಸಮು

ದಾಯ ಸ್ಪಷ್ಟಚಿತ್ರವನ್ನು ಕಲ್ಪಿಸುವಲ್ಲಿ ಹಾಗೂ ಗ್ರಹಿಸುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆಂದು ಹೇಳಬಹುದು. ಸಾಧ್ಯವಾದ ಕಡೆಗಳಲ್ಲಿನ ಅಂಕಿ ಅಂಶಗಳ ಬಳಕೆ ಇತ್ತೀಚಿನವರೆಗೂ ಕೊಡಿದ್ದರೆ ಓದುಗರಿಗೆ ಶ್ರಮ ಸಂದಾಯವಾಗುತ್ತಿತ್ತು. ಹಾಗೆಯೇ ಪಾರಿಭಾಷಿಕ ಪದಗಳ ತರ್ಜುಮೆಯು ಜೊತೆಗೆ ಆಂಗ್ಲ ಭಾಷೆಯಲ್ಲೂ ಅವುಗಳನ್ನೇ ಸೂಚಿಸಿದ್ದರೆ ಕನ್ನಡ ಅನುವಾದದ ಅಸಾಧ್ಯಕರಿಗೆ ಒಂದು ದೀಪ್ತಿಯಾಗುತ್ತಿತ್ತು.

ಒಟ್ಟಿನಲ್ಲಿ ಸಮಾಜಶಾಸ್ತ್ರದ ಕ್ಷೇತ್ರಕ್ಕೆ ಕನ್ನಡ ಮಾಧ್ಯಮ ಗ್ರಂಥಗಳು ವಿರಳವಾಗಿರುವಾಗ ಇದೊಂದು ಅಪೂರ್ವಕೃತಿಯಾಗಿ ಕಾಲಿಟ್ಟಿದೆ. ಸರಳ ಹಾಗೂ ಸುಂದರ ಭಾಷೆಯೊಂದಿಗೆ ಸ್ಪಷ್ಟ ಮುದ್ರಣವನ್ನು ಹೊಂದಿದೆ. ಸಮಾಜಶಾಸ್ತ್ರದ ಅಧ್ಯಾಪಕ ಹಾಗೂ ವಿದ್ಯಾರ್ಥಿಗಳಿಗೆ ಮಾತ್ರವಲ್ಲದೆ ಭಾರತೀಯ ಸಾಮಾಜಿಕ ಅಧ್ಯಯನದ ಬಗ್ಗೆ ವಿಶೇಷ ಜ್ಞಾನ ಪಡೆಯುವ ಆಸಕ್ತ ಓದುಗರೆಲ್ಲರಿಗೂ ಅತ್ಯುತ್ತಮ ಕೈಪಿಡಿಯಾಗಿದೆ.

ಸೋಮೇಗೌಡ ಬೆಣಗನಹಳ್ಳಿ

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

—o—

ಮಾನವಿಕ ಕರ್ಣಾಟಕ

ವಿಜ್ಞಾನ ಕರ್ಣಾಟಕ

ಪ್ರಬುದ್ಧ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬